

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

11 ಫೆಬ್ರವರಿ 2015 ಪುಟ 20 ರೂ. 15/-





ಮಹಾತ್ಮರ ಮರಣ



ಅರ್ಕಾವತಿ ವಿವಾದ


ಅದೇನ್ಲಾ ನಿಮ್ಮ ರಗಳೆ?






81ನೇ ಕನ್ನಡ ಸಾಹಿತ್ಯ ಸಮ್ಮೇಳನ

ದೇವನೂರು ಬೆಳಗಿಸಿದ ದೀಪ ಆರದಿರಲಿ



ಚಿತ್ರದುರ್ಗ
ಸವರಾಜನ್‌ನ
ೃಹಭಂಗ




ಲಕ್ಕಿ ಅಲಿ
ಖ್ಯಾತ ಗಾಯಕ
ಮಹಾನ್ ವಂಚಕ



ಕಾರವಾರ
ಅಡ್ರೆಸ್ ಇಲ್ಲದ ಅಸ್ನೋಟಿಕರ್

ಾನಪದ ವಿವಿ ಅವ್ಯವಹಾರ: ಚಂದ್ರ ಪೂಜಾರಿ ಟೀಕೆ

ಕ.ಸಾ.ಪ. ಬಂಡಾಯವೇಳಬೇಕು... ಇಲ್ಲದಿದ್ದರೆ ಕ.ಸಾ.ಪ.ವನ್ನು ದಾಟಿ ಬಂಡಾಯ ಹುಟ್ಟಬೇಕು



35 ವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅದರ ಸಮ್ಮೇಳನಗಳ ಸ್ವರೂಪವನ್ನು ವಿರೋಧಿಸಿ, ಬಂಡಾಯ ಸಾಹಿತ್ಯ ಸಂಘಟನೆ ಆರಂಭವಾಯಿತು. ಜಿ.ಎಸ್.ಶಿವರುದ್ರಪ್ಪನವರು 'ಕನ್ನಡ ಸಾಹಿತ್ಯ ಚಳವಳಿಗಳು ಮತ್ತು ಸಾಹಿತ್ಯ ಪರಂಪರೆ'ಯಲ್ಲಿ ಆ ಕುರಿತು ಹೀಗೆ ಹೇಳಿದ್ದಾರೆ: "ಬಂಡಾಯ ಸಾಹಿತ್ಯ ಸಂಘಟನೆ ಪ್ರಾರಂಭವಾದದ್ದು 1979ರಲ್ಲಿ. ಪ್ರತಿಭಟನೆಯನ್ನು ಒಂದು ಮೌಲ್ಯವನ್ನಾಗಿ ಅಂಗೀಕರಿಸಿದ ಬರಹಗಾರರೆಲ್ಲರ ಒಕ್ಕೂಟ ಇದು. ಈ ಬಂಡಾಯ ಸಾಹಿತ್ಯದ ಮುಖ್ಯವಸ್ತು ಗ್ರಾಮೀಣ ಪರಿಸರದ ಅನುಭವ ದ್ರವ್ಯವಾಗಿದೆ. ಯಾಕೆಂದರೆ ನಿಜವಾದ



ಇಂಡಿಯಾ, ನವ್ಯೋದಯದವರು ಭಾವಿಸಿದಂತೆ ಕೇವಲ ನಿಸರ್ಗದ ರಮ್ಯತೆಯ ಮಡಿಲಲ್ಲಾಗಲೀ, ನವ್ಯದವರ ಗೊಂದಲಪುರದ ಬುದ್ಧಿಜೀವಿಗಳ ತಾಕಲಾಟಗಳಲ್ಲಾಗಲೀ ಇಲ್ಲ, ಅದು ಇರುವುದು ಬಹುಸಂಖ್ಯಾತವಾದ ಹಳ್ಳಿಗಳಲ್ಲಿ, ಹಳ್ಳಿಗಳಲ್ಲಿರುವ ಈ ಅಸಂಖ್ಯಾತ ಅನಕ್ಷರಸ್ಥರು ಒಂದು ಕಡೆ ತಮಗಿಂತ ಮೇಲಿನ ವರ್ಗದವರಿಂದ, ಮತ್ತೊಂದೆಡೆ ಭ್ರಷ್ಟರಾಜಕಾರಣಿಗಳಿಂದ ಹಾಗೂ ಪುರೋಹಿತಶಾಹೀ ಕುತಂತ್ರಗಳಿಂದ ತುಳಿತಕ್ಕೆ ಹಾಗೂ ಶೋಷಣೆಗೆ ಒಳಗಾಗಿದ್ದಾರೆ. ಗ್ರಾಮೀಣ ಭಾರತದ ಈ ಶೋಷಿತ ಜನಾಂಗ, ತನ್ನೊಳಗಿನ ಸಂಕಟಗಳಿಗೆ ತನ್ನೊಳಗಿನ ರೊಚ್ಚಿಗೆ, ತನಗಾಗಿರುವ ಅನ್ಯಾಯಗಳಿಗೆ ಪ್ರತಿಭಟನೆಯ ದನಿಯನ್ನು 'ಬಂಡಾಯ ಸಾಹಿತ್ಯ'ದ ಮೂಲಕ ಎತ್ತುತ್ತಿದೆ ಮತ್ತು ಇದು ನ್ಯಾಯವೂ ಆಗಿದೆ."

ಆ ಕಾಲದ ಬಹುಮುಖ್ಯ ಸಾಂಸ್ಕೃತಿಕ ಬೆಳವಣಿಗೆಯನ್ನು ಜಿ.ಎಸ್.ಎಸ್. ಸೂಕ್ತವಾಗಿ ಹಿಡಿದಿಟ್ಟಿದ್ದಾರೆ. ಅಲ್ಲಿಂದಾಚೆಗೆ ಸುಮಾರು ಒಂದು ದಶಕ ಕಾಲ ಪ್ರಖರವಾಗಿ ಉರಿದ ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಚಳವಳಿಗಳು ನಂತರ ಮೊಂಡಾದವು. ಅದರ ಪ್ರತೀಕವೇನೋ ಎಂಬಂತೆ, ಬಂಡಾಯ ಸಾಹಿತ್ಯ ಸಂಘಟನೆಯ ಮುಂಚೂಣಿಯಲ್ಲಿದ್ದವರು ಕನ್ನಡ ಸಾಹಿತ್ಯ ಪರಿಷತ್ತಿಗೂ, ಕನ್ನಡ ಸಾಹಿತ್ಯ ಸಮ್ಮೇಳನಗಳಿಗೂ ಬಂದರು. ಆದರೆ ಈ ಮಧ್ಯೆ ಸಾಹಿತ್ಯ ಪರಿಷತ್ತಿನ ಸಮ್ಮೇಳನವು ಇನ್ನೂ ವಿಸ್ತೃತವಾದ ಆಯಾಮವನ್ನು ಪಡೆದುಕೊಂಡಿತು. ಅಲ್ಲಿ ಕೈಗೊಳ್ಳಲಾಗುವ ನಿರ್ಣಯಗಳಿಗೆ ಅಂತಹ ಮಹತ್ವವೇನೂ ಇಲ್ಲದಿದ್ದರೂ, ಸಮ್ಮೇಳನಕ್ಕೆ ಪ್ರಾಪ್ತವಾದ ಮಹತ್ವವು ಹಲವು ಪ್ರಶ್ನೆಗಳನ್ನು ಏಳಿಸಲಾರಂಭಿಸಿತು. ಏಕಾಗಿ ಈ ನಿರ್ಣಯಗಳನ್ನು ಕೈಗೊಳ್ಳಬೇಕು ಎಂಬ ಚರ್ಚೆ ಶುರುವಾಗಿ ಈಗಾಗಲೇ ಬಹಳ ವರ್ಷಗಳಾಗಿವೆ. ಹೀಗಾಗಿ ಒಂದೇ ನಿರ್ಣಯವನ್ನು ಅಂಗೀಕರಿಸುವ, ಹಿಂದಿನ ಸಮ್ಮೇಳನಗಳ ನಿರ್ಣಯಗಳನ್ನು ಜಾರಿಗೊಳಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸುವಂತಹ ಪ್ರಯೋಗಗಳೂ ಆರಂಭವಾಗಿವೆ.

ಈ ಸಾರಿ ಇದಕ್ಕೆ ಇನ್ನಷ್ಟು ಮಹತ್ವ ಬಂದಿರುವುದು ದೇವನೂರ ಮಹಾದೇವರ ನಿಲುವಿನ ದೆಸೆಯಿಂದ. 'ಕನ್ನಡ/ಮಾತೃಭಾಷಾ ಮಾಧ್ಯಮವು, ಶಿಕ್ಷಣ ಮಾಧ್ಯಮವಾಗದೇ ತಾನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟವನ್ನು ಒಪ್ಪಲಾರೆ' ಎಂಬ ದೃಢ ನಿಲುವನ್ನು ಅವರು ತಾಳಿದರು. ಅವರೇ ಹೇಳುವಂತೆ 'ಸಾಹಿತ್ಯ ಪರಿಷತ್ತಿನ ಒಂದು ಹಲ್ಲಿಗೆ ನೋವು' ಉಂಟುಮಾಡಿದ್ದಾರೆ. 'ಆ ನೋವಿನ ಕಡೆಗೆ ಪರಿಷತ್‌ನ ಮತ್ತು ದೇಶೀ ಭಾಷಿಗರ ನಾಲಿಗೆ ಆಗಾಗಲಾದರೂ ಹೊರಳುತ್ತಿರಲಿ ಎಂಬ ಆಸೆಯಿಂದ'. ಈ ಸಾರಿ ಸಮ್ಮೇಳನದಲ್ಲಿ ಕನ್ನಡ ಬದುಕು, ಶಿಕ್ಷಣ ಇತ್ಯಾದಿ ವಿಚಾರಗಳ ಕುರಿತು ಹಲವು ಗೋಷ್ಠಿಗಳು ಏರ್ಪಾಟಾಗಿವೆ. ಬಹುಶಃ ಸಮ್ಮೇಳನಾಧ್ಯಕ್ಷರ ಭಾಷಣ, ಸಾಹಿತ್ಯ ಪರಿಷತ್ ಅಧ್ಯಕ್ಷರ ಭಾಷಣ, ಮುಖ್ಯಮಂತ್ರಿಗಳ ಭಾಷಣಗಳಲ್ಲೂ ಇದು ಅನುರಣಿಸುತ್ತದೆ. ಒಂದು ಪ್ರಮುಖ ನಿರ್ಣಯವಾಗಿ ಅಥವಾ ಒಂದೇ ನಿರ್ಣಯವಾಗಿ ಇದು ಮಂಡಿತವಾಗುವ ಸಾಧ್ಯತೆಯೂ ಇದೆ. ಇವತ್ತಿನ ಸಂದರ್ಭದ ಜೊತೆಗೆ ಪುಂಡಲೀಕ ಹಾಲಂಬಿಯವರ ಸಕಾರಾತ್ಮಕ ಧೋರಣೆಯ ಕಾರಣದಿಂದಲೂ ಆ ಸಾಧ್ಯತೆ ಹೆಚ್ಚೇ ಇದೆ.

ಆ ನಂತರ? ನೋವು ಬಹುಬೇಗ ಮಾಯುವ ಸಾಧ್ಯತೆಯೇ ಹೆಚ್ಚು, ಇದನ್ನು ಮುಂಗಾಣದೇ, ಮೂರು ದಿನಗಳ ಸಂಭ್ರಮದಲ್ಲಿ ಎಲ್ಲರೂ ತೇಲಿಹೋದರೆ, ಒಂದು ಅಪೂರ್ವ ಅವಕಾಶ ನಮ್ಮ ಕೈತಪ್ಪಿ ಹೋಗುತ್ತದೆ. ಆದರೆ ಆ ಮೂರು ದಿನಗಳೂ ಅಷ್ಟೇ ಮುಖ್ಯ, ಕನ್ನಡ ಸಾಹಿತ್ಯ ಪರಿಷತ್ತು ತೋರುಗಾಣಿಕೆಗಲ್ಲದೇ, ನಿರ್ದಿಷ್ಟವಾದ ಹಕ್ಕೊತ್ತಾಯಗಳನ್ನು ನಿರ್ಣಯವನ್ನಾಗಿ ಅಂಗೀಕರಿಸಬೇಕು ಮತ್ತು ಮುಂದಿನ ಹೋರಾಟದ ರೂಪುರೇಷೆಯೂ ಅಲ್ಲಿ ತೀರ್ಮಾನವಾಗಬೇಕು. ಅಥವಾ ಅಂತಹದೊಂದು ರೂಪುರೇಷೆಯನ್ನು ರೂಪಿಸುವ ಕೆಲಸ ಅಲ್ಲಿಂದ ನಿಜವಾಗಲೂ ಆರಂಭವಾಗಬೇಕು. ಅದಾಗಬೇಕೆಂದರೆ, ಕರ್ನಾಟಕದ ಬಹುಸಂಖ್ಯೆಯ ಜನರ ಒತ್ತಾಸೆಯಾಗಿ ಆ ಹಕ್ಕೊತ್ತಾಯಗಳನ್ನು ಮುಂದಿಡುವ ಕೆಲಸ ಮಾಡಬೇಕು. ಅದು ಸಾಹಿತ್ಯ ಪರಿಷತ್ತಿನ ಮೇಲೆ ಒತ್ತಡವನ್ನೂ ಉಂಟು ಮಾಡಬೇಕು, ಅವರಿಗೆ ಮನಸ್ಸಿದ್ದರೆ ಅದೇ ಬಲವಾಗಿಯೂ ಕೆಲಸ ಮಾಡುತ್ತದೆ. ಈ ನಿಟ್ಟಿನಲ್ಲಿ 'ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ' ಹಾಗೂ ಇನ್ನೂ ಹಲವು ಸಂಘಟನೆಗಳು ಒಂದು ಮನವಿ ಪತ್ರವನ್ನು ತಯಾರು ಮಾಡಿವೆ. ಅದಕ್ಕೆ ಸಾಹಿತ್ಯ ಸಮ್ಮೇಳನಕ್ಕೆ ಬರುವ (ಮತ್ತು ಬರಲು ಸಾಧ್ಯವಾಗದ) ಈ ನಾಡಿನ ಎಲ್ಲಾ ಕನ್ನಡ ಪ್ರೇಮಿಗಳು, ಸಮಾನತೆಯ ಆಶಯ ಹೊಂದಿರುವವರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ತಮ್ಮ ರುಜು ಹಾಕಿ, ನಮ್ಮೆಲ್ಲರ ಒತ್ತಾಯವಾಗಿ ಸಂಘಟಕರಿಗೆ ತಲುಪಿಸುವ ಆಲೋಚನೆ ಮಾಡಲಾಗಿದೆ.



ಆ ಮನವಿ ಪತ್ರದ ಕರಡನ್ನು ಇಲ್ಲಿ ಈ ನಮ್ಮ 'ಪತ್ರಿಕೆ'ಯ ಮುಖಾಂತರ ಮುಂದಿಡಲಾಗಿದೆ. ಈ ಶನಿವಾರ ಮಧ್ಯಾಹ್ನದೊಳಗೆ ಇದಕ್ಕೆ ತಿದ್ದುಪಡಿಗಳನ್ನು ಸೂಚಿಸುವ ಸಲುವಾಗಿ ಇಲ್ಲಿ, ಫೇಸ್‌ಬುಕ್‌ನಲ್ಲಿ, ಬ್ಲಾಗ್‌ನಲ್ಲಿ ಪ್ರಕಟಿಸಲಾಗಿದೆ. ಸಲಹೆ, ಸೂಚನೆಗಳಿಗೆ ಮುಕ್ತ ಆಹ್ವಾನವಿದೆ ಮತ್ತು ಈ ಪ್ರಯತ್ನದಲ್ಲಿ ಸಹಭಾಗಿಗಳಾಗುವ ಇಚ್ಛೆಯಿದ್ದವರು (7353770202 ಅಥವಾ 8892939771) ಸಂಪರ್ಕಿಸಲು ಕೋರಲಾಗಿದೆ.

ಈ ಮೂಲಕ ಪ್ರಸ್ತುತ ಸಮ್ಮೇಳನವು ದೇಶೀ ಭಾಷಿಗರ ಪರವಾಗಿ, ಸಮಾನತೆಯ ಆಶಯಕ್ಕಾಗಿ ಬಂಡೇಳಲು ಪ್ರೇರಣೆಯಾಗಬೇಕಿದೆ. ಒಂದು ವೇಳೆ ಕ.ಸಾ.ಪ ಮತ್ತು ಸಮ್ಮೇಳನದ ಆಯೋಜಕರು ನಮ್ಮನ್ನು ನಿರಾಸೆಗೊಳಿಸಿದರೆ, ಕ.ಸಾ.ಪ.ವನ್ನು ದಾಟಿ ಆ ಬಂಡಾಯವು ನಡೆಯಬೇಕಿದೆ. ಇಲ್ಲದಿದ್ದರೆ, ಈ ನಾಡಿನ ಮಕ್ಕಳ ಭವಿಷ್ಯಕ್ಕೆ ಮತ್ತಷ್ಟು ಮಂಕು ಕವಿಯಲಿದೆ.

ಇವರಿಗೆ,

ಶ್ರೀ ಪುಂಡಲೀಕ ಹಾಲಂಬಿ,

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು

ಮಾನ್ಯರೇ,

ವಿಷಯ: ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮವನ್ನು ಜಾರಿ ಮಾಡಿಸುವ ಕುರಿತಾಗಿ ನಡೆಸಬೇಕಾದ ಜನಾಂದೋಲನಕ್ಕೆ ಪೂರ್ವ ತಯಾರಿಯಾಗಿ ಈ ಸಮ್ಮೇಳನದಲ್ಲಿ ತೆಗೆದುಕೊಳ್ಳಬೇಕಾದ ನಿರ್ಣಯದ ಬಗ್ಗೆ.

ಇವತ್ತಿನ ಸಂದರ್ಭವು ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೂ, ನಮ್ಮೆಲ್ಲರ ಮೇಲೂ ಒಂದು ಚಾರಿತ್ರಿಕವಾದ ಜವಾಬ್ದಾರಿಯನ್ನು ಹೊರಿಸಿದೆ. ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮದ ಕುರಿತಾಗಿ ನಮ್ಮ ಸರ್ಕಾರಗಳು ಇಚ್ಛಾಶಕ್ತಿಯನ್ನು ಪ್ರಕಟಿಸದೇ ಇರುವುದು ಕನ್ನಡ ಮತ್ತು ಕನ್ನಡದಂತಹ ದೇಶೀಭಾಷೆಗಳನ್ನು ಅವನತಿಗೆ ತಳ್ಳುತ್ತಿವೆ ಮಾತ್ರವಲ್ಲ, ಈ ಭಾಷೆಗಳನ್ನಾಡುವ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತಿವೆ. ಕಳೆದ ವರ್ಷ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ನೀಡಿದ ತೀರ್ಪು ಈ ವಿಚಾರವನ್ನು ಮತ್ತಷ್ಟು ಕಗ್ಗಂಟಾಗಿಸಿದೆ. ಆದರೆ ಮಾತೃಭಾಷಾ ಮಾಧ್ಯಮವನ್ನು ಜಾರಿ ಮಾಡುವುದು ಅಸಾಧ್ಯವಾದ ಸಂಗತಿಯೇನಲ್ಲ, ಆದರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಸಂಗತಿಯನ್ನು ಮುಂದಿಟ್ಟುಕೊಂಡು, ಮಾಡಬಹುದಾದ್ದನ್ನೂ ಮಾಡದೇ ಹೋಗುವ ಮತ್ತು ಆ ಮೂಲಕ ಇನ್ನೂ ದಶಕಗಳ ಕಾಲ ಇದನ್ನು ನೆನೆಗುದಿಗೆ ಬೀಳಿಸುವ ಸಾಧ್ಯತೆ ಇದೆ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ತಮ್ಮ ಸ್ಪಷ್ಟ ನಿಲುವನ್ನು ಪ್ರಕಟಿಸಿ ಸಮ್ಮೇಳನಾಧ್ಯಕ್ಷತೆಯನ್ನು ನಿರಾಕರಿಸಿದ ದೇವನೂರ ಮಹಾದೇವರ ನಿಲುವೂ ಇದೇ ಆಗಿದೆ. ಕನ್ನಡದ ಪ್ರಮುಖ ಬರಹಗಾರರಲ್ಲೊಬ್ಬರಾದ ದೇವನೂರರ ನಿಲುವು ಈ ಸಮ್ಮೇಳನದಲ್ಲೇ ನಿರ್ಣಾಯಕವಾ[...] ಹೆಜ್ಜೆಗಳನ್ನಿಡಲು ಪ್ರೇರೇಪಿಸಬೇಕಿದೆ. ಈ ಬಗೆಗಿನ ಚರ್ಚೆಯ[...] ಚೌಕಟ್ಟು ಈಗ ಕೇವಲ ಕರ್ನಾಟಕಕ್ಕೆ ಮಾ[...] ಸೀಮಿತವಾಗುಳಿಯದೆ, ರಾಜ್ಯಗಳ ಗಡಿ ದಾಟಿ ಇಡಿ[...] ದೇಶಕ್ಕೆ ವ್ಯಾಪಿಸಿದೆ. ತಮ್ಮದೇ ಆದ ಪ್ರಾದೇಶಿಕ ಭಾಷೆಗಳನ್ನು[...] ಎಲ್ಲಾ ರಾಜ್ಯಗಳಲ್ಲೂ ಈ ತೀರ್ಪಿನ ನಂತರ ಭಾಷೆಗ[...] ಉಳಿವಿನ ಸವಾಲು ಎದುರಾಗಿದೆ.

ಇದು ಭಾಷಾಭಿಮಾನದ ಪ್ರಶ್ನೆಯೂ ಹೌದು[...] ಪ್ರಧಾನವಾಗಿ ಈ ನಾಡಿನ ಮತ್ತು ನಮ್ಮ ಮಕ್ಕಳ ಭವಿಷ್ಯವನ್ನು[...] ರೂಪಿಸುವ ವೈಜ್ಞಾನಿಕವಾದ ಕಲಿಕಾ ಕ್ರಮದ ಸಂಗತಿಯೂ[...] ಹೌದು. ಕಲಿಕೆಯ ಮಾಧ್ಯಮದ ಕುರಿತಂತೆ ಪ್ರಪಂಚದ[...] ಶಿಕ್ಷಣ ತಜ್ಞರ ಹಾಗೂ ಭಾಷಾ ತಜ್ಞರೆಲ್ಲರ ಅಭಿಪ್ರಾಯ[...] ಇದೇ ಆಗಿದೆ. ನಮ್ಮ ದೇಶದಲ್ಲಿಯೂ ಈ ಬಗ್ಗೆ ವಿಸ್ತಾರವಾ[...] ಚರ್ಚೆಗಳು ನಡೆದಿವೆ. ಎನ್‌ಸಿಇಆರ್‌ಟಿಯು (ಶಿಕ್ಷಣದಲ್ಲಿ[...] ಸಂಶೋಧನೆ ಮತ್ತು ತರಬೇತಿಗಾಗಿನ ರಾಷ್ಟ್ರೀಯ ಪರಿಷತ್ತು[...] ವಿಜ್ಞಾನ, ಗಣಿತ ಮತ್ತು ಇಂಗ್ಲಿಷನ್ನು ಕಲಿಯುವ ಅತ್ಯುತ್ತಮ[...] ವಿಧಾನ ಯಾವುದೆಂದು ಪರಿಶೀಲಿಸಲು ನೇಮಿಸಿದ ತಜ್ಞ[...] ಸಮಿತಿಗಳು ಒಂದು ಅಂಶವನ್ನು ಸ್ಪಷ್ಟಪಡಿಸಿವೆ. ವಿಜ್ಞಾನ[...] ಗಣಿತ ಮತ್ತು ಇಂಗ್ಲಿಷನ್ನೂ ಅತ್ಯುತ್ತಮವಾಗಿ ಕಲಿಯಲು[...] ಇರುವ ವಿಧಾನ, ಮಗುವಿನ ಮಾತೃಭಾಷೆಯಲ್ಲಿ ಕಲಿಸುವುದೇ[...] ಆಗಿದೆ ಎಂದು ಆ ಸಮಿತಿಗಳು ಖಚಿತವಾಗಿ ಹೇಳಿವೆ[...] ಇಂದು ಮಾತೃಭಾಷಾ ಮಾಧ್ಯಮವು ಜಾರಿಗೆ ಬರಲು[...] ನಾವು ತೆಗೆದುಕೊಳ್ಳಬೇಕಾದ ಸರಿಯಾದ ನಿಲುವು ಹಾಗೂ[...] ಹೊಂದಬೇಕಾದ ಧೋರಣೆ ಇದೇ ಆಗಿರಬೇಕಿದೆ.

ಸುಪ್ರೀಂಕೋರ್ಟಿನ ಸಂವಿಧಾನ ಪೀಠದ ತೀರ್ಪಿಗೆ ಪ್ರತಿಯಾಗಿ ಮಾಡಬಹುದೇನು

→06

ಸೂಪರ್‌ಮ್ಯಾನ್ ಮೋದಿಯೂ, ಆತನ '5ಜಿ' ಸಾಧನೆಯೂ!



• ಗೌರಿ ಲಂಕೇಶ್
editorlankesh@gmail.com

ಆಕಾಶದಲ್ಲಿ ಹಕ್ಕಿಯಂತೆ ಹಾರುವ, ಏಕಾಂಗಿಯಾಗಿ ನೂರಾರು ದುಷ್ಟರನ್ನು ಸದೆಬಡಿಯುವ, ಭೂಮಿಯನ್ನೇ ವಿರುದ್ಧ ದಿಕ್ಕಿನಲ್ಲಿ ತಿರುಗಿಸುವ ಶಕ್ತಿ ಸೂಪರ್‌ಮ್ಯಾನ್‌ಗೆ ಇದೆ. ಅಂತಹ ಸೂಪರ್‌ಮ್ಯಾನ್ ತನ್ನ ಹೆಸರನ್ನು ಸೂಚಿಸುವ 'ಎಸ್' ಅಕ್ಷರವು ಎದೆಯ ಮೇಲೆ ದೊಡ್ಡದಾಗಿ ಅಚ್ಚಾಗಿರುವ ಬಿಗಿಯಾದ ಟಿ-ಶರ್ಟ್ ಧರಿಸುತ್ತಾನೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಸೂಪರ್‌ಮ್ಯಾನ್‌ಗಿಂತ ಯಾವ ರೀತಿಯಲ್ಲಿ ಕಡಿಮೆ? ಜಾತ್ಯತೀತ ಭಾರತದಲ್ಲಿ ಕೋಮುವಾದಿ ಬಿಜೆಪಿಗೆ ಬಹುಮತ ಬರುವಂತೆ ಮೋದಿ ಮಾಡಲಿಲ್ಲವೇ? ಮೋದಿ ಏಕಾಂಗಿಯಾಗಿ ಮಿಕ್ಕೆಲ್ಲ ವಿರೋಧ ಪಕ್ಷಗಳನ್ನು ಸದೆಬಡಿಯಲಿಲ್ಲವೇ? ಪ್ರಧಾನಿ ಆದ ಮೇಲೆ ಸೂಪರ್‌ಮ್ಯಾನ್‌ನಂತೆ ಜಗತ್ತನ್ನೇ ಸುತ್ತುತ್ತಿಲ್ಲವೇ?

ನಮ್ಮ ದೇಶದಲ್ಲಿ 'ಹರೆ ರಾಮ ಹರೆ ಕೃಷ್ಣ', 'ಓಂ' ಎಂದು ಬರೆದಿರುವ ಅಥವಾ ಸ್ವಸ್ತಿಕಾ ಚಿಹ್ನೆ ಇರುವ ಟಿ-ಶರ್ಟ್ ಮತ್ತು ಕುರ್ತಾಗಳನ್ನು ಜನ ಧರಿಸುತ್ತಾರೆ. ಮೋದಿ ಭಕ್ತರಂತೂ 'ನಮೋ' ಎಂದು ತಮ್ಮ ತಲೆ ಕೂದಲನ್ನು ಕತ್ತರಿಸಿಕೊಂಡೋ, ಟೀ-ಶರ್ಟ್ ಮೇಲೆ ಬರೆಸಿಕೊಂಡೋ ಸುತ್ತಾಡುತ್ತಿರುತ್ತಾರೆ. ಅಂಥದ್ದರಲ್ಲಿ ಪಾಪ ಮೋದಿಗೆ ತಾನೂ ಹಾಗೆ ಮಾಡಿದರೆ ಏನೂ ತಪ್ಪಿಲ್ಲ ಅನ್ನಿಸಿರಬೇಕು. ಆದ್ದರಿಂದಲೇ ಮೊನ್ನೆ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಬಂದಿದ್ದಾಗ ಮೋದಿ ತನ್ನ ಪ್ಯಾಂಟ್ ಮತ್ತು ಸೂಟ್ ಮೇಲೆಲ್ಲ ತನ್ನ ಹೆಸರನ್ನು 'ಕೊರೆಸಿಕೊಂಡು' ಮಿಂಚಿದ್ದೋ ಮಿಂಚಿದ್ದು.


ಗಂಟಲಿನಿಂದ ಶೂ ತನಕ ತನ್ನ ಪೂರ್ಣ ಹೆಸರಾದ 'ನರೇಂದ್ರ ದಾಮೋದರದಾಸ್ ಮೋದಿ' ಎಂದು ಪಟ್ಟಿಪಟ್ಟಿಯಾಗಿ ಸಣ್ಣಕ್ಷರಗಳಲ್ಲಿ ಹೆಣೆದಿದ್ದ ಬಂದ್‌ಗಲಾ ಕೋಟ್ ಮತ್ತು ಪ್ಯಾಂಟ್ ಅನ್ನು ಮೋದಿ ಧರಿಸಿದ್ದ. ತಾನು ಹೊಸ ಫ್ಯಾಷನ್ ಟ್ರೆಂಡ್ ಶುರುಮಾಡುತ್ತಿದ್ದೇನೆ ಎಂದು ಆತ ಭಾವಿಸಿರಲಿಕ್ಕೂ ಸಾಕು. ಆದರೆ ಮೋದಿಯ ದುರಾದೃಷ್ಟ, ಜನ ಆತನ ಸೂಟ್ ಮೇಲಿನ ಸ್ವಪ್ರೇಮ ನೋಡಿ ನಕ್ಕಿದ್ದೋ ನಕ್ಕಿದ್ದು!

ಹಲವರು 'ಒಬಾಮ ತನ್ನ ಹೆಸರನ್ನು ಮರೆತರೆ ಅದನ್ನು ನೆನಪಿಸಲಿಕ್ಕೆ ಹೀಗೆ ಮೋದಿ ಮಾಡಿದ್ದಾರೆ' ಎಂದು ಲೇವಡಿ ಮಾಡಿದರೆ, ಇನ್ನೂ ಕೆಲವರು 'ಯಾರೂ ಈ ಸೂಟ್‌ಅನ್ನು ಕದಿಯಬಾರದೆಂದು ಹೀಗೆ ಮಾಡಿದ್ದಾರೆ' ಎಂದೂ ಹಾಸ್ಯ ಮಾಡಿದರು. ಇಂಟರ್‌ನೆಟ್‌ನ ಸಾಮಾಜಿಕ ತಾಣಗಳಲ್ಲಿ ಈ ಸೂಟ್ ಬಗ್ಗೆ ಲೆಕ್ಕವಿಲ್ಲದಷ್ಟು ಜೋಕ್‌ಗಳು ಹುಟ್ಟಿಕೊಂಡು ಜನರನ್ನು ರಂಜಿಸಿದವು.

ಹೇಳಿಕೇಳಿ ಮೋದಿ ಸರಳ ಜೀವನ ನಡೆಸುವವನು. ಭಾರತದಂತಹ ದೊಡ್ಡ ದೇಶದ ಪ್ರಧಾನಿ ಆಗಿದ್ದರೂ ತನ್ನೊಡ ಹೆತ್ತವರನ್ನು, ತನ್ನ ಒಡ ಹುಟ್ಟಿದವರನ್ನು, ತನ್ನ ಕೈಹಿಡಿದವಳನ್ನು ಎಲ್ಲರನ್ನೂ ದೂರವಿಟ್ಟು ಏಕಾಂಗಿಯಾಗಿ ಬ್ರಹ್ಮಚಾರಿಯಂತೆ ಜೀವಿಸುತ್ತಿರುವವನು. ಆರೆಸ್ಸೆಸ್ ಗರಡಿಯಲ್ಲಿ ಪಳಗಿದ ಮೋದಿ ಸರಳವಾದ ಜೀವನಶೈಲಿಯನ್ನು ಅನುಸರಿಸುವವನು. ಭ್ರಷ್ಟಾಚಾರದಿಂದ ಮೈಲಿ ದೂರ ನಿಂತಿರುವವನು. ಇಷ್ಟೆಲ್ಲ ಯಾಕೆ ಹೇಳಬೇಕಾಯಿತೆಂದರೆ, ಈ ಒಂದು ಸೂಟಿಗೆ ಮೋದಿ ಖರ್ಚು ಮಾಡಿದ್ದು ಕೇವಲ 15 ಲಕ್ಷ ರೂಪಾಯಿಗಳನ್ನು! ಆಹಾ, ಎಂತಹ ಸರಳತೆ, ಎಂತಹ ಸಜ್ಜನತೆ.

ಅಂದಹಾಗೆ, ಈ ತರಹ ತನ್ನ ಹೆಸರನ್ನೇ ಬರೆದಿರುವ ಸೂಟ್ ಧರಿಸಿದವರಲ್ಲಿ ಮೋದಿ ಮೊದಲನೆಯವನೇನಲ್ಲ. ಈ ಹಿಂದೆ ಈಜಿಪ್ಟಿನ ಸರ್ವಾಧಿಕಾರಿ ಹೋಸ್ನಿ ಮುಬಾರಕ್, ಅರ್ಜೆಂಟಿನಾದ ಅಧ್ಯಕ್ಷ ಕಾರ್ಲೋಸ್ ಮೆನೆಮ್ ಮತ್ತು ಬಾಕ್ಸರ್ ಎವಾಂಡರ್ ಹೊಲಿಫೀಲ್ಡ್ ಕೂಡ ಇಂತಹದ್ದೇ ಸೂಟ್ ಧರಿಸಿದ್ದರು. ಆದರೆ ಹೋಸ್ನಿ ಮುಬಾರಕ್‌ನ ದುರಾದೃಷ್ಟಕ್ಕೆ, ಆತನ ಹೆಸರನ್ನು 'Hosni' ಎಂದು ಬರೆಯುವ ಬದಲು 'Hosny' ಎಂದು ತಪ್ಪಾಗಿ ಬರೆಯಲಾಗಿತ್ತು. ಇದೇ ಹೋಸ್ನಿ ಮುಬಾರಕ್ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಜನರನ್ನು ಕೊಲ್ಲಿಸಿದ ಆರೋಪದ ಮೇಲೆ ಆನಂತರ ವಿಚಾರಣೆ ಎದುರಿಸಬೇಕಾಯಿತು. ಕಾರ್ಲೋಸ್ ಮೆನೆಮ್ ಕೂಡ ಅಕ್ರಮವಾಗಿ ಆಯುಧಗಳನ್ನು ಸಾಗಿಸಿದ ಆರೋಪದ ಮೇಲೆ ಜೈಲು ಸೇರಿದ. ಬಾಕ್ಸರ್ ಹೊಲಿಫೀಲ್ಡ್ ತನ್ನ ಪ್ರತಿಸ್ಪರ್ಧಿ ಮೈಕ್ ಟೈಸನ್‌ನಿಂದ ತನ್ನ ಕಿವಿಯನ್ನೇ ಕಚ್ಚಿಸಿಕೊಂಡ. ಪಾಪ ಮೋದಿಗೆ ಅದ್ಯಾವ ವಿಚಾರಣೆ, ಜೈಲು, ದೈಹಿಕ ಹಿಂಸೆ ಕಾದಿದೆಯೋ ಎಂದು ಆತನ ಭಕ್ತರು ಚಿಂತಾಕ್ರಾಂತರಾಗಿರಬಹುದು.

ಮೋದಿಯ ಈ ವಿಚಿತ್ರ ಸೂಟ್ ಬಗ್ಗೆ ಮತ್ತು ಒಂದು ದಿನದಲ್ಲಿ ಆತ ಮೂರು ಬಾರಿ ಬಟ್ಟೆ ಬದಲಿಸಿದ್ದೂ ಅತಿಥಿ ಒಬಾಮ ಗಮನಕ್ಕೂ ಬಂದಿರಬೇಕು. ಆದ್ದರಿಂದಲೇ ಮಾರನೆ ದಿನ ಆತ ಮೋದಿ ಬಗ್ಗೆ ಸಾರ್ವಜನಿಕವಾಗಿ ಒಂದು ಹೇಳಿಕೆ ಕೊಟ್ಟ. ಅದೇನೆಂದರೆ "ಅಮೆರಿಕದ ಒಂದು ಪತ್ರಿಕೆ ನನ್ನ ಪತ್ನಿ ಮಿಷೆಲ್‌ಗಿಂತ ಮೋದಿಯೇ ಈಗ ಫ್ಯಾಷನ್ ಐಕಾನ್ ಆಗಿದ್ದಾರೆ ಎಂದು ಬರೆದಿತ್ತು" ಎಂದು ಒಬಾಮ ಚಟಾಕಿ ಹಾರಿಸಿದರು. ಆದರೆ ಮೋದಿ ಭಕ್ತರು ಒಬಾಮ ಮಾತಿನಲ್ಲಿ ಅಡಗಿದ್ದ ವ್ಯಂಗ್ಯ ಅರ್ಥವಾಗದೇ



ಆತ ತಮ್ಮ ಹೀರೋನನ್ನು ಪ್ರಶಂಸಿಸುತ್ತಿದ್ದಾರೆ ಎಂದೇ ಭಾವಿಸಿದರು.

ಜೊತೆಗೆ ಮೋದಿಗೆ ಒಬಾಮ ಇನ್ನೊಂದು ರೀತಿಯಲ್ಲೂ ಮೆದುವಾಗಿ ಇಕ್ಕಿದರು. ಕಳೆದ ವರ್ಷ ಮೋದಿ ಅಮೆರಿಕಕ್ಕೆ ಭೇಟಿ ನೀಡಿದ್ದಾಗ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ನಡೆಸಿದ ಬ್ಯಾಂಡ್ ಬಾಜಾ ಮತ್ತು ನಾಚ್-ಗಾನಾ ಸಭೆಯ ಬಗ್ಗೆ ಪ್ರಸ್ತಾಪಿಸುತ್ತಾ ಒಬಾಮ "ನಿಮ್ಮನ್ನು ಬಾಲಿವುಡ್ ನಟನಂತೆ ಬಿಂಬಿಸಲಾಯಿತು" ಎಂದರು. ಇದೂ ಒಂದು ಕಾಂಪ್ಲಿಮೆಂಟ್ ಎಂಬಂತೆ ಮೋದಿ ಕಿಸಿಕಿಸಿ ನಕ್ಕ. ಆದರೆ ವಾಸ್ತವವಾಗಿ ಒಂದು ದೇಶದ ಪ್ರಧಾನಿಯನ್ನು ಓರ್ವ ಯಃಕಶ್ಚಿತ್ ನಟನಿಗೆ ಹೋಲಿಸುವುದು ಆತನಿಗೆ ಮಾಡಿದ ಅವಮಾನ ಎಂಬುದೂ ಮೋದಿಗಾಗಲಿ ಆತನ ಭಕ್ತರಿಗಾಗಲಿ ಅರ್ಥವಾಗಿಲ್ಲ.

ಮೋದಿ ಸ್ವತಃ ವಿಮಾನ ನಿಲ್ದಾಣಕ್ಕೆ ಹೋಗಿ ಒಬಾಮರನ್ನು ಸ್ವಾಗತಿಸುವ ನೆಪದಲ್ಲಿ ಆತನನ್ನು ಗಬಕ್ಕನೆ ಹಿಡಿದು ಅಪ್ಪಿಕೊಂಡಿದ್ದು, ಜಂಟಿ ಪತ್ರಿಕಾ ಗೋಷ್ಠಿಯಲ್ಲೂ ಮತ್ತೊಮ್ಮೆ ಗಟ್ಟಿಯಾಗಿ ಅಪ್ಪಿಕೊಂಡಿದ್ದು ಎಲ್ಲವೂ ಹಾಸ್ಯಾಸ್ಪದವಾಗಿತ್ತು. ಅಷ್ಟೇ ಅಲ್ಲ, ತಾನು ಒಬಾಮಗೆ ತುಂಬಾ ಹತ್ತಿರದವನಾಗಿದ್ದೇನೆ ಎಂದು ಬಿಂಬಿಸಿಕೊಳ್ಳಲು ಪತ್ರಿಕಾಗೋಷ್ಠಿಯ ಸಮಯದಲ್ಲಿ ಮೋದಿ ಎರಡು ಬಾರಿ ಒಬಾಮ ಅವರನ್ನು 'ಬರಾಕ್' ಎಂದು ಕರೆದ. ದೇಶಗಳ ನಾಯಕರು ಖಾಸಗಿಯಾಗಿ ಮಾತನಾಡುವಾಗ ಅವರಿಬ್ಬರು ನಿಜಕ್ಕೂ ಸ್ನೇಹಿತರಾಗಿದ್ದರೆ ಮೊದಲನೆ ಹೆಸರನ್ನು ಉಪಯೋಗಿಸುತ್ತಾರೆಯೇ ವಿನಃ ಸಾರ್ವಜನಿಕವಾಗಿ ಉಪಯೋಗಿಸುವುದಿಲ್ಲ. ಆ ಕಾರಣಕ್ಕಾಗಿಯೇ ಒಬಾಮ ಅವರು ಮೋದಿಯ ನಂತರ ಮಾತನಾಡಿದಾಗ "ಅಮೆರಿಕ ಮತ್ತು ಭಾರತದ ನಡುವಿನ ಸ್ನೇಹ ಬಲಗೊಂಡಿರುವುದು ನಮ್ಮಿಬ್ಬರ ನಡುವಿನ ವೈಯಕ್ತಿಕ ಸ್ನೇಹದಿಂದಾಗಿ ಅಲ್ಲ, ಬದಲಾಗಿ ನಮ್ಮಿಬ್ಬರ ದೇಶಗಳ ಜನರ ನಡುವೆ ಇರುವ ಮೆಚ್ಚುಗೆ ಮತ್ತು ಅಭಿಮಾನದಿಂದಾಗಿ" ಎಂದರಲ್ಲದೆ ಮೋದಿಯನ್ನು 'ಭಾರತದ ಪ್ರಧಾನಿ' ಎಂದೂ 'ಮೋದಿ' ಎಂದೂ ಮಾತ್ರ ಉದ್ದೇಶಿಸಿದರು. ಆ ಮೂಲಕ ಮೋದಿಗೆ ಶಿಷ್ಟಾಚಾರ ಕುರಿತು ಪಾಠವನ್ನೂ ಹೇಳಿದರು.

ಒಬಾಮರನ್ನು ಭಾರತಕ್ಕೆ ಆಹ್ವಾನಿಸಿದ್ದೇ ಗಣರಾಜ್ಯೋತ್ಸವ ಸಂಭ್ರಮದಲ್ಲಿ ಭಾಗವಹಿಸಲು. ಅಂದೇ ಮೋದಿ ಸರ್ಕಾರ ಒಂದು ಕಿತಾಪತಿಯನ್ನು ಎಸಗಿತ್ತು. ಜನವರಿ 26ರಂದು ದೇಶದಾದ್ಯಂತ ವಿವಿಧ ಪತ್ರಿಕೆಗಳಿಗೆ ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಬಿಡುಗಡೆ ಮಾಡಿದ್ದ ಜಾಹೀರಾತಿನಲ್ಲಿ ಆ ಕಿತಾಪತಿ ಅಡಗಿತ್ತು. ಆ ಜಾಹೀರಾತಿನಲ್ಲಿ ಭಾರತ ಸಂವಿಧಾನದ ಮೂಲ ತತ್ತ್ವಗಳಿರುವ ಪುಟವನ್ನು ಬ್ಯಾಕ್‌ಗ್ರೌಂಡ್ ಆಗಿ ಉಪಯೋಗಿಸಲಾಗಿದೆ. ಆದರೆ ಆ ಚಿತ್ರದಲ್ಲಿ 'ಭಾರತವು ಸ್ವತಂತ್ರ, ಸಾರ್ವಭೌಮ ಮತ್ತು ಗಣರಾಜ್ಯ' ಎಂದು ಮಾತ್ರ ಇದೆ. 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಪದಗಳು ನಾಪತ್ತೆಯಾಗಿವೆ. ಅಷ್ಟೇ ಅಲ್ಲ, ಅದೇ ಜಾಹೀರಾತಿನಲ್ಲಿ ಹಲವು ಜನರೂ ಇದ್ದಾರೆ. ಅವರೆಲ್ಲ ಒಂದೋ ಹಿಂದೂಗಳು ಅಥವಾ ಬುಡಕಟ್ಟು ಸಮುದಾಯದವರನ್ನು ಪ್ರತಿನಿಧಿಸುತ್ತಾರೆ. ನೆಪಮಾತ್ರಕ್ಕೂ ಪೇಟ ಧರಿಸಿರುವ ಸಿಖ್ ಆಗಲಿ, ಟೋಪಿ ಹಾಕಿಕೊಂಡಿರುವ ಮುಸಲ್ಮಾನನಾಗಲಿ, ಕ್ರೈಸ್ತ ಸಮುದಾಯದವರನ್ನು ಪ್ರತಿನಿಧಿಸುವವರಿಲ್ಲ. ಈ ಜಾಹೀರಾತಿನ ದುರುದ್ದೇಶ ಸ್ಪಷ್ಟವಾಗಿದೆ. ಭಾರತದಲ್ಲಿ ಜಾತ್ಯತೀತತೆ ಇಲ್ಲ, ಸಮಾಜವಾದಿ ಸಿದ್ಧಾಂತವನ್ನು ನಮ್ಮ ದೇಶ ಹೊಂದಿಲ್ಲ, ಭಾರತೀಯರೆಂದರೆ ಹಿಂದೂಗಳು ಮತ್ತು ಬುಡಕಟ್ಟು ಸಮುದಾಯದವರು ಅಷ್ಟೇ ಎಂದು ಸಾರುವುದೇ ಇದರ ಉದ್ದೇಶ. ಇದಕ್ಕೆ ಸರಿಯಾಗಿ ಈಗ ಶಿವಸೇನೆ ಎಂಬ ಮಹಾರಾಷ್ಟ್ರದ ಕೋಮುವಾದಿ ಪಕ್ಷದ ನಾಯಕನೊಬ್ಬ 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಪದಗಳನ್ನು ಸಂವಿಧಾನದ ಮೂಲ ತತ್ತ್ವಗಳಿಂದ ಕೈಬಿಡಬೇಕು ಎಂದು ಆಗ್ರಹಿಸಿದ್ದಾನೆ.


ಅದೇನೇ ಇರಲಿ, ಈ ಜಾಹೀರಾತು ಪ್ರಕಟವಾದ ದಿನವೇ ಒಬಾಮ ದೆಹಲಿಯ ಸಿರಿ ಫೋರ್ಟ್‌ನಲ್ಲಿ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅಹಿಂಸೆ, ಸಮಾನತೆ, ಸ್ವಾತಂತ್ರ್ಯ, ಸೌಹಾರ್ದ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರಿದ ಮಹಾತ್ಮ ಗಾಂಧಿ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರನ್ನು ತುಂಬಾ ಮೆಚ್ಚುವ ಒಬಾಮ ಅಂದಿನ ಸಭೆಯಲ್ಲಿ ಅವರಿಬ್ಬರ ಬಗ್ಗೆ ಪ್ರಸ್ತಾಪಿಸುತ್ತಾ "ಎಲ್ಲಿಯತನಕ ಭಾರತ ಧಾರ್ಮಿಕ ಆಧಾರದ ಮೇಲೆ ಸೀಳಿಹೋಗದೆ ಇರುತ್ತದೆಯೋ ಅಲ್ಲಿಯತನಕ ಅದು ಅಭಿವೃದ್ಧಿಯನ್ನು ಸಾಧಿಸುತ್ತದೆ. ಪ್ರತಿಯೊಬ್ಬ ಪ್ರಜೆಗೂ ತಾನು ಆಯ್ಕೆ ಮಾಡಿಕೊಂಡಿರುವ ಅಥವಾ ನಂಬಿರುವ ಧರ್ಮವನ್ನು ಪಾಲಿಸುವ ಅಥವಾ ನಾಸ್ತಿಕನಾಗಿಯೂ ಜೀವಿಸುವ ಹಕ್ಕು ಇರಲೇಬೇಕು. ನಿಮ್ಮ ಸಂವಿಧಾನದ ಕಲಮು 25 ನಿಮ್ಮ ದೇಶದ ಪ್ರತಿ ಪ್ರಜೆಗೂ ಆ ಹಕ್ಕನ್ನು ನೀಡಿದೆ. ಆ ಹಕ್ಕನ್ನು ಕಾಪಾಡಿಕೊಳ್ಳುವುದು ಇವತ್ತು ಭಾರತಕ್ಕೆ ಮುಖ್ಯವಾಗಿದೆ" ಎಂದರು.


ಇದು ಒಬಾಮ ಸುಖಾಸುಮ್ಮನೆ ಆಡಿದ ಮಾತಲ್ಲ ಎನಿಸುತ್ತದೆ. ಒಂದು ರೀತಿಯಲ್ಲಿ ಅದು ಅಮೆರಿಕದಲ್ಲಿನ ಪ್ರಸ್ತುತ ಸ್ಥಿತಿಗತಿಯ ಬಗೆಗಿನ ವಿಮರ್ಶೆಯಾಗಿದ್ದರೂ ಇನ್ನೊಂದು ರೀತಿಯಲ್ಲಿ ಅದು ಭಾರತದಲ್ಲಿ ಹಿಂದೂ ಧರ್ಮದಲ್ಲದವರ ಮೇಲೆ ಆಗುತ್ತಿರುವ ದಮನಗಳ ಬಗೆಗಿನ ಟೀಕೆಯೂ ಆಗಿದೆ.


ಒಬಾಮರನ್ನು ಭಾರತಕ್ಕೆ ಕರೆಸುವ ಮೂಲಕ ಮೋದಿ ತಾನು ಎಂತಹ ಸೂಪರ್‌ಮ್ಯಾನ್ ಎಂಬುದನ್ನು ತೋರಿಸಿದ್ದಾರೆ ಎಂದು ಆತನ ಭಕ್ತರು ಕುಣಿದಾಡುತ್ತಿದ್ದಾರೆ. ಆದರೆ ವಾಸ್ತವವಾಗಿ ಇದರಿಂದ ಮೋದಿ ಎಂತಹ ಸಾಧನೆಯನ್ನೂ ಮಾಡಿಲ್ಲ! ಬದಲಾಗಿ ಅಮೆರಿಕದೊಂದಿಗೆ ನಾಗರಿಕ ಪರಮಾಣು ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ಅಮೆರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿ ಮತ್ತು ತೊಷಿಬಾ ವೆಸ್ಟಿಂಗ್‌ಹೌಸ್ ಎಂಬ ಕಂಪನಿಗಳಿಗೆ ಲಾಭವಾಗುವಂತೆ ಮಾಡಿದ್ದಾನೆ. (ಅದನ್ನು ಕುರಿತು ಮುಂದಿನ ವಾರ ಲೇಖನವೊಂದನ್ನು ಪ್ರಕಟಿಸುತ್ತೇವೆ)

ಇತ್ತೀಚೆಗೆ ಮೋದಿ ಸರ್ಕಾರದ 'ಸಾಧನೆ'ಗಳ ಬಗ್ಗೆ ಫೇಸ್‌ಬುಕ್‌ನಲ್ಲಿ ಒಂದು ಜೋಕ್ ಹರಿದಾಡುತ್ತಿದೆ. ಅದನ್ನು ನಿಮ್ಮೊಂದಿಗೆ ಹಂಚಿಕೊಂಡು ಇದನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಆ ಜೋಕ್ ಹೀಗಿದೆ:


"ಕಾಂಗ್ರೆಸ್ ಸರ್ಕಾರ '3ಜಿ' ಹಗರಣದಲ್ಲಿ ಸಿಕ್ಕಿಹಾಕಿಕೊಂಡು ನೆಲ ಕಚ್ಚಿತು. ಮೋದಿ ಸರ್ಕಾರ ತಾನೇನು ಕಮ್ಮಿ ಇಲ್ಲ ಎಂದು ತೋರಿಸಲು '5ಜಿ' ಹಗರಣ ಮಾಡಿಕೊಳ್ಳುತ್ತಿದೆ. ಆ '5ಜಿ'ಗಳು ಯಾವುವೆಂದರೆ 'ಗೋವು', 'ಗಂಗೆ', 'ಗೀತೆ', 'ಗೋಡ್ಸೆ' ಮತ್ತು 'ಘರ್ ವಾಪಸಿ'!!







ಕಾರವಾರ: ಅಡ್ರೆಸ್ ಇಲ್ಲದ ಅಸ್ನೋಟಿಕರ್‌ನ ಅಸಡ್ಡಾಳ ಸುದ್ದಿಗಳು!



ಕಾರವಾರದ 'ಹೆಸರು ವಾಸಿ' ಅಸ್ನೋಟಿಕರ್ ಖಾನ್‌ದಾನ್‌ನ ಕುಖ್ಯಾತ ಕುಲೋದ್ಧಾರಕನೂ, ಮಾಜಿ ಶಾಸಕ-ಮಾಜಿ ಮಂತ್ರಿಯೂ ಆದ ಆನಂದ ಅಸ್ನೋಟಿಕರ್ ನಾಪತ್ತೆಯಾಗಿದ್ದಾನೆಂದರೆ ಸುಮ್ಮನೆ ಮಾತಲ್ಲ! ಕೇವಲ ಒಂದೂ ಮುಕ್ಕಾಲು ವರ್ಷದ ಹಿಂದೆ ಭರ್ತಿ ಐದು ವರ್ಷ ಭರ್ಜರಿ ಮೆರೆದಿದ್ದ ಅಸ್ನೋಟಿಕರ್‌ನ ಕಣ್ಮರೆ ಪತ್ತೆದಾರಿ ಧಾರಾವಾಹಿಯಂತಾಗಿ ಹೋಗಿದೆ. ಬಿಜೆಪಿ ಪರ್ವದಲ್ಲಿ ಉತ್ತರ ಕನ್ನಡದಲ್ಲಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ತರಹೇವಾರಿ ತರಲೆ ಮತ್ತು ಅಧಿಕಾರ ಮದದ ಮೋಜಿಂದ ಗುರುತಿಸಿಕೊಂಡಿದ್ದ ಅಸ್ನೋಟಿಕರ್ ಕಾರವಾರದ ನಾನಾ ನಮೂನೆಯ ಮಾಫಿಯಾ ಡಾನ್ ಆಗಿದ್ದ ವಸಂತ ಅಸ್ನೋಟಿಕರ್‌ನ ಏಕೈಕ ಗಂಡು ಸಂತಾನ! ಶಾಸಕನಾಗಿದ್ದಾಗಲೇ ಅಂಡರ್ ವರ್ಲ್ಡ್‌ಗೆ ಆಹುತಿಯಾಗಿ ಹೋದ ವಸಂತ್ ಅಸ್ನೋಟಿಕರ್ ಹೆಂಡತಿ ಶುಭಲತಾಗೆ ಕಾಂಗ್ರೆಸ್‌ನ ವಿಧವಾ ಕೋಟಾದಲ್ಲಿ ಎಮ್ಮೆಲ್ಸಿ ಮಾಡಲಾಗಿತ್ತು. ಇಂಥ ಕಣ್ಣು ಕುಕ್ಕುವ ವಂಶದ ಪುಂಡ ಪುಢಾರಿ ಆನಂದ್ ಅಸ್ನೋಟಿಕರ್ ಅಡ್ರೆಸ್ ಇಲ್ಲದೆ ಇಲ್ಲಿಗೆ ಹತ್ತಿರತ್ತಿರ ಎರಡು ವರ್ಷ ಆಗುತ್ತ ಬಂತು!!

ಆನಂದನ ರಾಜಕೀಯ-ಸಾಮಾಜಿಕ-ವ್ಯವಹಾರಿಕ ಚರಿತ್ರೆ ಇದೆಯಲ್ಲ ಅದು, ಹೀನಾತಿಹೀನ ಅಪ್ಪನಿಂದ ಬಳುವಳಿಯಾಗಿ ಬಂದದ್ದು. ಕೋಟ್ಯಾಂತರ ರೂ. ಅಕ್ರಮ ಆಮದನಿಯ ಬಂದರು ಮಾಫಿಯಾದ ದೊರೆತನದಲ್ಲಿ ತೇಲಾಡಿದ ಈತನಿಗೆ ಹದಿನಾರಕ್ಕೇ ಯಜಮಾನಿಕೆ ಸಿಕ್ಕಂತಾಗಿತ್ತು. ಇದೇ ಆತನ ಇಡೀ ಬದುಕನ್ನು ಅಡ್ಡ ದಾರಿಗಿಳಿಸಿಬಿಟ್ಟಿತು. ದುಡ್ಡಿನ ದರ್ಪದಲ್ಲಿ ಇಡೀ ಕಾರವಾರ ತನ್ನ ಹಿಡಿತದಲ್ಲಿದೆ ಎಂದುಕೊಂಡ. ಆನಂದ್ ಅಮ್ಮನ ಎಮ್ಮೆಲ್ಸಿಗಿರಿ ತಾನೇ ನಿಭಾಯಿಸತೊಡಗಿದ. ಸಂದರ್ಭ-ಸ್ವಾರ್ಥಕ್ಕೆ ತಕ್ಕಂತೆ ಸೀನಿಯರ್ ಲೀಡರ್‌ಗಳಾದ ಮಾರ್ಗರೆಟ್ ಆಳ್ವ, ಆರ್.ವಿ. ದೇಶಪಾಂಡೆಯಂಥವರನ್ನೇ ಕುಣಿಸಲು ಶುರು ಮಾಡಿದ. ಅಪ್ಪನ ರಾಬಿನ್‌ಹುಡ್ ಜನಪ್ರಿಯತೆಯನ್ನು ಅಸ್ತ್ರವಾಗಿಸಿಕೊಂಡು ಅನಾಮಧೇಯ ಗಂಗಾಧರ ಭಟ್ ಎಂಬ ಬಿಜೆಪಿ ಅಭ್ಯರ್ಥಿಯನ್ನು ಎಮ್ಮೆಲ್ಲೆ ಮಾಡಿದನೋ ಆತನ ಪಿತ್ಥ ನೆತ್ತಿಗೇರಿಬಿಟ್ಟಿತು.

ತನ್ನ ಬಂದರು ಮಾಫಿಯಾ ದಂಧೆಗೆ ತೊಡರುಗಾಲಾಗುವ ಮಾರ್ಗಿಯ ಬಂಟ ಕಾಂಗ್ರೆಸ್ ಶಾಸಕನಾಗಬಾರದೆಂಬ ಹಠ ಅಂದು ಆನಂದನದಾಗಿತ್ತು. ಹೀಗಾಗಿ ತನ್ನ ತಾಯಿಯನ್ನು ಎಮ್ಮೆಲ್ಸಿ ಮಾಡಿದ್ದ ಮಾರ್ಗಿ ಮೇಲೆಯೇ ಈತ ಮುದುಕೊಂಡು ಬಿದ್ದಿದ್ದ. ಈ ಯುದ್ಧಕ್ಕಾತನಿಗೆ ಮಾರ್ಗಿ ಶತ್ರು ದೇಶಪಾಂಡೆ ಬೆಂಬಲ ಸಿಕ್ಕಿತ್ತು. ಆ ನಂತರದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ದೇಶಪಾಂಡೆ ಮಾರ್ಗಿಯನ್ನು ಮಣಿಸಿ ತನ್ನ ಶಿಷ್ಯ ಆನಂದ್‌ಗೆ ಕಾರವಾರ ಕ್ಷೇತ್ರದ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಿದರು. ಗೆದ್ದ ಒಂದೇ ತಿಂಗಳಿಗೆ ಆನಂದ್ ಗುರುವಿಗೇ ತಿರುಮಂತ್ರ ಹಾಕಿದ. ಬಿಜೆಪಿಯ ಯಡ್ಡಿ-ರೆಡ್ಡಿಗಳ ಆಪರೇಷನ್‌ಗೆ ಸಿಲುಕಿ 'ಸೀರಿಯಸ್ ಸಚಿವ'ನಾಗಿ ಹೋದ. ಮರು ಚುನಾವಣೆಯಲ್ಲಿ ಬಲಾಢ್ಯ ದೇಶಪಾಂಡೆ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಆನಂದನ ಸೋಲಿಸಲಾಗಲಿಲ್ಲ. ದೇಶಪಾಂಡೆ ಎದುರಾಳಿ ಮಾರ್ಗಿ ಮುಂದೆ ಮುಖಭಂಗಿತನಾಗಿ ಆನಂದ್‌ನ ಹಣಿಯಲು ಸಮಯ ಸಾಧಿಸ ಹತ್ತಿದರು.

ಮಂತ್ರಿಯಾಗಿದ್ದೇ ತಡ, ಅಧಿಕಪ್ರಸಂಗಿ ಆನಂದ್‌ನ ಅಕ್ರಮ, ಅನೈತಿಕತೆ, ಅವಾಂತರಕ್ಕೆ ಬಿರುಸು ಬಂತು. ಮಂತ್ರಿಯಾಗಿದ್ದರೂ ಮಡಿ-ಮೈಲಿಗೆಯ ಬಿಜೆಪಿಯಲ್ಲಿ ಈ ಶೂದ್ರನ ಮಾತಿಗೆ ಮೂರು ಬಿಲ್ಲಿ ಕಿಮ್ಮತ್ತೂ ಸಿಗದಂತಾಯ್ತು. ಚೆಡ್ಡಿಗಳು ಈತನ ಮೇಲೆ ಒಂದು ಕಣ್ಣಿಟ್ಟು ಕಾಡಿದರು. ಇತ್ತ ಆನಂದನ ಚಪಲ-ಖಯಾಲಿಗಳು ಜೋರಾಯ್ತು. ಗೆಜ್ಜೆ-ಬಳೆನಾದ ಕೇಳಿಸಿದಾಗೆಲ್ಲ ತಾನೊಬ್ಬ ಮಂತ್ರಿ ಎಂಬುದು ಮರೆತು ಪಡ್ಡೆ ಪೋಲಿಯಂತಾಡಿದ. ಬೆಂಗಳೂರಿನಿಂದ-ಕಾರವಾರ ತನಕ ಅಲ್ಲಿಂದ ಮುಂಬೈ-ಗೋವಾವರೆಗೆ ಆತನ ಶಯ್ಯಾಗೃಹಗಳು ತಲೆಯೆತ್ತಿದ್ದವು. ಅಂಕೋಲಾ-ಕಾರವಾರದ ನಡುವೆ ಜಾಟ್ ಹೌಸ್ ಮತ್ತು ಹನಿಬೀಚ್ ಮಹಿಮೆ ದಶದಿಕ್ಕಿಗೆ ಹಬ್ಬಿತು. ಪರಮ ಪವಿತ್ರ ಚೆಡ್ಡಿ ತಾನೆಂದು ಹೇಳಿಕೊಳ್ಳುವ ಅಂಕೋಲಾದ ಪಟ್ಟಣ ಪಂಚಾಯ್ತಿ ಪಟ್ಟಭದ್ರನೊಬ್ಬ ಈತನ ನಿಷ್ಠಾವಂತ ಸಪ್ಲೈರ್ ಆಗಿದ್ದ. ಆನಂದ್‌ನ ಹಗ್ಗ ಕಡಿವ ಚಾಳಿಯಿಂದ ಸಂಸಾರದ ಲಾಯವೂ ತಪ್ಪಿಹೋಯ್ತು!

ಮಗದೊಂದೆಡೆ ಆನಂದ್ ಬಿಜೆಪಿ ಬಾಸ್‌ಗಳಾದ ಯಡ್ಡಿ-ರೆಡ್ಡಿಗಳಿಗೆ ಸಡ್ಡು ಹೊಡೆದು ಬಂಡಾಯಗಾರನಾದ. ತತ್ಪರಿಣಾಮವಾಗಿ ಆರೆಂಟು ತಿಂಗಳು ಶಾಸಕತ್ವದಿಂದಲೇ ಅನರ್ಹವಾಗಿ ಅಂತರ್ ಪಿಶಾಚಿಯಂತೆ ಅಂಡಲೆಯಬೇಕಾಯ್ತು ಈ ಎಡವಟ್ಟು ಪೋರ. ಸುಪ್ರೀಂಕೋರ್ಟ್‌ನಿಂದ ಶಾಸಕತ್ವಕ್ಕೇ ಜೀವದಾನ ಸಿಕ್ಕಾಗ ಮತ್ತದೇ ದುಡ್ಡು-ಚರ್ಮದ ಲಾಬಿ ನಡೆಸಿ ಸದಾನಂದ ಗೌಡ ಮತ್ತು ಜಗದೀಶ್ ಶೆಟ್ಟರ್‌ರ ಸರ್ಕಾರದಲ್ಲಿ ಸಚಿವನಾದ. ಈ ಮಂತ್ರಿಗಿರಿ ಆತ ಅಕ್ಷರಶಃ ಕೊಂಡುಕೊಂಡಿದ್ದ. ಅಂದು ರಾಜ್ಯ ಬಿಜೆಪಿ ಅಧ್ಯಕ್ಷನಾಗಿದ್ದ ಈಶ್ವರಪ್ಪನ ಬಕಾಸುರ ಹೊಟ್ಟೆಗೆ ಹಣದ ಕಂತೆ-ಕಂತೆಯೇ ತುರುಕಿ ಆನಂದ ಮಂತ್ರಿಗಿರಿ ಖರೀದಿಸಿದ್ದು ಅಂದು ದೊಡ್ಡ ಪುಕಾರಿಗೆ ಕಾರಣವಾಗಿತ್ತು. ಆದರೂ ಆನಂದ್‌ಗೆ ಬಿಜೆಪಿಯ ಗರ್ಭಗುಡಿ ಸಂಸ್ಕೃತಿಯಲ್ಲಿ ಏಗಲಾಗಲಿಲ್ಲ. 2013ರ ಚುನಾವಣೆಗೆ ಒಂದು ವರ್ಷ ಇರುವಾಗಲೇ ಕಾಂಗ್ರೆಸ್ ಸೇರಲು ಹವಣಿಕೆ ಹಾಕಿದ.


ಈ ಬಾರಿ ಆನಂದ್‌ಗೆ ಮಾರ್ಗಿ ಕೃಪಾಶೀರ್ವಾದ ಸಿಕ್ಕಿತ್ತು. ಆದರೆ ದೇಶಪಾಂಡೆ ದೊಣ್ಣೆ ಹಿಡಿದುಕೊಂಡು ಕಾಂಗ್ರೆಸ್ ಬಾಗಿಲಲ್ಲಿ ಅಡ್ಡ ನಿಂತಿದ್ದರು. ಮಾರ್ಗಿ ಅದೆಷ್ಟೇ ಪ್ರಯತ್ನಿಸಿದರೂ ದೇಶಪಾಂಡೆ ಪಟ್ಟು ಸಡಿಸಲೇ ಇಲ್ಲ. ಕಾಂಗ್ರೆಸ್ ಟಿಕೆಟ್ ಸಿಗಲಾರದೆಂಬುದು ಖಾತ್ರಿಯಾದಾಗ ಆನಂದ ತಂತ್ರ ಬದಲಿಸಿದ. "ನಂಗೆ ಟಿಕೆಟ್ ಸಿಗದಿದ್ರೂ ಪರ್ವಾಗಿಲ್ಲ, ನನ್ನ ಪರಮ ಶತ್ರು ಸತೀಶ್ ಸೈಲ್‌ಯಾದ ಕಾರಣಕ್ಕೂ ಕಾಂಗ್ರೆಸ್ ಕ್ಯಾಂಡಿಡೇಟಾಗಬಾರ್ದು.... ಮೇಡಂ.... ಅದ್ಕೆ ಅದೆಷ್ಟೇ ಖರ್ಚಾಗ್ಲಿ ನಾನು ಕೊಡ್ತೇನೆ...." ಎಂದು ಮಾರ್ಗಿಗೆ ದುಂಬಾಲು ಬಿದ್ದ. ಮಾರ್ಗಿ ಗಣಿ ಹಗರಣದಲ್ಲಿ ಸಿಕ್ಕಿ ಬಿದ್ದಿದ್ದ ದೇಶಪಾಂಡೆಯ ಹಿಂಬಾಲಕ ಸತೀಶ್ ಸೈಲ್‌ಗೆ ಕಾಂಗ್ರೆಸ್ ಟಿಕೆಟ್ ಸಿಗದಂತೆ ಮಾಡಿದರು. ಸೈಲ್ ಪಕ್ಷೇತರನಾಗಿ ಸ್ಪರ್ಧಿಸಿದರು. ನಾಲ್ಕೈದು ವರ್ಷದಿಂದ ಕಾಂಗ್ರೆಸ್ ಕ್ಯಾಂಡಿಡೇಟೆಂದು ಬಿಂಬಿಸಿಕೊಂಡು ಪಾರ್ಟಿ ಬೆಳೆಯಲು ಕೋಟಿ ಕೋಟಿ ಕಳ್ಳ ಹಣ ಹರಿಸಿದ್ದ ಸೈಲ್ ಬಗ್ಗೆ ಒಂಥರಾ ಸಿಂಪಥಿ ಕ್ಷೇತ್ರದಲ್ಲಿತ್ತು; ಆನಂದನ ಮಂಗಾಟ, ರಂಗೀಲಾ ರಗಳೆಗಳಿಂದ ಜನರಲ್ಲಿ ಅಸಹ್ಯವೂ ಹುಟ್ಟಿತ್ತು.

ಹೀಗಾಗಿ ಆನಂದ್ ದೊಡ್ಡ ಮತದಂತರದಿಂದ ಸೈಲ್ ಎದುರು ಸೋತು ಹೋದ. "ಸೈಲ್ ಏನೇ ಮಾಡ್ಲಿ.... ಸಾಫ್ಟ್‌ವೇರ್ ನನ್ನ ಕೈಲಿದೆ... ಎಲೆಕ್ಷನ್ ಮೊದಲ ದಿನ ರಾತ್ರಿ ಅದನ್ನು ಕಂಪ್ಯೂಟರ್‌ಗೆ ಹಾಕಿ ಆಪರೇಟ್ ಮಾಡ್ತೇನೆ... ನೋಡಿ ಹ್ಯಾಂಗೆ ಸೋಲಿಸ್ತೇನಂತಾ ಆ ಸೈಲ್‌ನ...." ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಆನಂದ್ ಬರೋಬ್ಬರಿ ಮೂವತ್ತೈದು ಸಾವಿರ ಮತದಂತರದಿಂದ ಮಣ್ಣು ಮುಕ್ಕಿದ್ದ. ಈ ಆಘಾತ ಆತನಿಂದ ತಡಕೊಳ್ಳಲಾಗಲಿಲ್ಲ. ಸೋತ ಕ್ಷಣ ಕಾರವಾರ ಬಿಟ್ಟು ಗೋವಾದ ತನ್ನ ರೆಸಾರ್ಟ್ ವಸಾಹತು ಸೇರಿಕೊಂಡಿದ್ದ ಆನಂದ್ ಇವತ್ತಿನವರೆಗೆ ಇತ್ತ ತಲೆಹಾಕಿಲ್ಲ!! ತಮ್ಮ ನಾಯಕ "ಇಂದು ಬರ್‍ತಾನೆ... ನಾಳೆ ಬರ್‍ತಾನೆ...." ಎಂದು ಕಾದು-ಕಾದು ಸುಸ್ತಾದ ಅಪ್ಪ (ವಸಂತ ಅಸ್ನೋಟಿಕರ್)ನ ಅಭಿಮಾನಿ ಸಂಘದ ಸದಸ್ಯರೆಲ್ಲ ಚೆಲ್ಲಾಪಿಲ್ಲಿಯಾಗಿದ್ದಾರೆ.


ವಸಂತ ಅಸ್ನೋಟಿಕರ್ ಭೂಗತ ದೊರೆ ದಿಲೀಪ್ ನಾಯ್ಕ್‌ನ ಸುಪಾರಿ ಕಿಲ್ಲರ್‌ಗಳಿಗೆ ಬಲಿಯಾದಾಗ ಆನಂದ್‌ಗೆ ಬಂದರು ಮಾಫಿಯಾ ವಿದ್ಯೆಯ ಶಸ್ತ್ರಾಸ್ತ್ರ ಬಳಕೆ ಕಲಿಸಿದ್ದ ಗಣಪತಿ ದುಮ್ಮಾ ಉಳ್ವೇಕರ್ ಎಂಬ ಗುರುವೇ ತಿರುಗಿಬಿದಿದ್ದಾನೆ. ಬಂದರು ವ್ಯವಹಾರದ ಜಗಳದಿಂದಾಗಿ ಮೊದಲ ಬಾರಿ ಆನಂದ್ ಎಲೆಕ್ಷನ್‌ಗೆ ನಿಂತಾಗಲೇ ಕೆರಳಿದ ಉಳ್ವೇಕರ್ ಆತ್ಮೀಯ ಗೆಳೆಯನ ಮಗನ ವಿರುದ್ಧ ಪಕ್ಷೇತರನಾಗಿ ಅಖಾಡಕ್ಕೆ ಧುಮುಕಿದ್ದ. ನಂತರ ಲೆಕ್ಕಾಚಾರ ಚುಕ್ತಾ ಮಾಡಿಕೊಂಡು ರಾಜಿಯೂ ಆಗಿದ್ದ. ಯಾವಾಗ ಆನಂದ್ ಕ್ಷೇತ್ರದಿಂದ ಕಣ್ಮರೆಯಾದನೋ ಆಗ ಸಾವಕಾಶವಾಗಿ ಉಳ್ವೇಕರ್ ಬಿಜೆಪಿಗೆ ನುಸುಳಿಕೊಂಡ. ಬಿಜೆಪಿಯೊಳಗೆ ಆನಂದ್ ಬಗ್ಗೆ ಇದ್ದ ಅಸಮಾಧಾನ ಬಳಸಿಕೊಂಡು ಬಿಜೆಪಿ ಹುರಿಯಾಳಾಗುವ ಸ್ಕೆಚ್ ಹಾಕಿದ್ದಾನೆ. ಮೀನುಗಾರ ಸಂಕುಲದ ಉಳ್ವೇಕರ್‌ನಲ್ಲಿರುವ ಬಂದರು ಮಾಫಿಯಾ ದಂಧೆಯ ಅಕ್ರಮ ಹಣದ ಗಂಟು ಕಂಡಿರುವ ಬಿಜೆಪಿಯ ಜನಿವಾರಿಗಳು ಆತನಿಗೆ ಎಮ್ಮೆಲ್ಲೆಗಿರಿಯ ಆಸೆ ತೋರಿಸಿ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಆತನಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷತೆಯ ಭರವಸೆ ನೀಡಲಾಗಿದೆ. ಪಕ್ಷಕ್ಕಾಗಿ ಹಣ ಖರ್ಚು ಮಾಡುವ ಬಕರಾ ಬಿಜೆಪಿಗೆ ಜಿಲ್ಲಾ ಮಟ್ಟದಲ್ಲಿ ಬೇಕಿತ್ತು, ಅದೀಗ ಸಿಕ್ಕಿದೆ.


ಅದಿರಲಿ, ಆನಂದ್ ಅಸ್ನೋಟಿಕರ್ ಯಾಕೆ ಕಾರವಾರದತ್ತ ತಲೆ ಹಾಕುತ್ತಿಲ್ಲ? ಸೋತಾಗ ಕಾರವಾರ ಬಿಟ್ಟವನು ಖಾಸಗಿ-ಕೌಟುಂಬಿಕ ಕೆಲಸಕ್ಕೆಂದು ಈ ಒಂದೂ ಮುಕ್ಕಾಲು ವರ್ಷದಲ್ಲಿ ಆತ ಎರಡ್ಮೂರು ಸಲ ಕಾರವಾರಕ್ಕೆ ಬಂದಿರಬಹುದು. ಹಾಗೆ ಬಂದಾಗ ಹಿಂಬಾಲಕರ ಹುರಿದುಂಬಿಸಲಿಕ್ಕಾಗಲಿ, ಕೃತಜ್ಞತೆಯಿಂದಾಗಲಿ ಆತ ಮಾತಾಡಿಸಿಲ್ಲ. ತಾನು ಕೋಟಿಗಟ್ಟಲೆ ಖರ್ಚು ಮಾಡಿದರೂ ಸೋಲಿಸಿದ ಕಾರವಾರ-ಅಂಕೋಲಾ ಜನರ ಬಗ್ಗಾತನಿಗೆ ಬಂದಿದ್ದ ಸಿಟ್ಟು-ತಾತ್ಸಾರ-ಅಸಮಾಧಾನ ಈಗಲೂ ಹಾಗೇ ಇದೆ. ಶಾಸಕ ಸೈಲ್ ಬೇಲೇಕೇರಿ ಅದಿರು ಹಗರಣದಲ್ಲಿ ಜೈಲು ಪಾಲಾದಾಗಲೂ ಆನಂದ್ ಕಾರವಾರ-ಅಂಕೋಲಾಕ್ಕೆ ಬಂದು ಜನಸಂಪರ್ಕ ಬೆಳೆಸಿಕೊಳ್ಳಬಹುದಿತ್ತು. ಒಂದು ವರ್ಷ ಸೈಲ್ ಜೈಲಲ್ಲಿದ್ದರೂ ಆತನ ಅನುಪಸ್ಥಿತಿಯ ಪ್ರಯೋಜನ ಪಡೆಯಲು ಆನಂದ್ ನೋಡಲಿಲ್ಲ ಯಾಕೆ?


ಯಾಕೆಂದರೆ, ಕ್ಷೇತ್ರದಲ್ಲಿ ಅಪ್ಪ ಹಾಕಿಟ್ಟಿದ್ದ ಭದ್ರ ಬುನಾದಿ ಈಗ ಛಿದ್ರವಾಗಿರುವುದು ಆತನಿಗೆ ಗೊತ್ತಾಗಿದೆ. ತನ್ನ ಸಾಂಸಾರಿಕ, ವೈಯಕ್ತಿಕ ಬದುಕಿನಲ್ಲಾಗಿರುವ ಅನೈತಿಕ ಅವಾಂತರ, ರಾಜಕೀಯ-ಸಾಮಾಜಿಕ ಜೀವನದಲ್ಲಾಗಿರುವ ಬಾರಾ ಭಾನ್ಗಡಿಯಿಂದಾಗಿ ಜನರು ತನ್ನನ್ನು ನಂಬುವುದಿಲ್ಲ ಎಂಬುದು ಖಾತ್ರಿಯಾಗಿದೆ. ಹಾಗೊಮ್ಮೆ ಹಣ ಹರಿಸಿಯಾದರೂ ರಾಜಕಾರಣ ಮಾಡಿ ಜನ ಬಲ ತೋರಿಸೋಣವೆಂದರೆ ಆನಂದ್‌ಗೊಂದು ಪಕ್ಕಾ ಪಕ್ಷವೆಂಬುದೇ ಇಲ್ಲ. ಬಿಜೆಪಿಯಲ್ಲಿ ಆತನನ್ನು ಯಾರೂ ಮೂಸಿಯೂ ನೋಡುತ್ತಿಲ್ಲ. ಸ್ಥಳೀಯ ಬಿಜೆಪಿಯ ಚೆಡ್ಡಿ ಕೇಡರ್‌ಗಂತೂ ಆನಂದ್ ಎಂದರೆ ಒಂಥರಾ ಅಲರ್ಜಿ. ಕಾಂಗ್ರೆಸ್‌ನಲ್ಲಿ ಮಾರ್ಗಿ-ದೇಶಪಾಂಡೆ ಇಬ್ಬರಲ್ಲಿ ಒಬ್ಬರಲ್ಲ













ಸೈಲ್ ಸಂಕಟ

ಬೇಲೇಕೇರಿ ಬಂದರಿನಿಂದ ಬಳ್ಳಾರಿಯ ಕಬ್ಬಿಣದ ಅದಿರು ಕದ್ದು ವಿದೇಶಕ್ಕೆ ಕಳಿಸಿದ ಕೇಸ್‌ನಲ್ಲಿ ಸಿಬಿಐ ಅತಿಥಿಯಾಗಿ ಒಂದು ವರ್ಷ ಪರಪ್ಪನ ಅಗ್ರಹಾರದಲ್ಲಿ ಗಂಜಿ-ಒಣಮೀನು ತಿಂದು ಬಂದಿರುವ ಶಾಸಕ ಸೈಲ್ ಮುಖದಲ್ಲಿ ನಗುವಿದೆ. ಮನದಲ್ಲಿ ದುಗುಡ ತುಂಬಿದೆ. ಜೈಲಿಂದ ಬಿಡುಗಡೆಯಾಗಿ ಬಂದಿದ್ದೇ ಸೈಲ್ ತಾನೊಬ್ಬ ಧೀರೋದಾತ್ತ ಶಾಸಕನೆಂದು ಪೋಸು ಕೊಡುತ್ತ ಜನರ





ಮುಂದೆ ಪ್ರವಾಸ ಶುರು ಹಚ್ಚಿಕೊಂಡಿದ್ದಾನೆ. ಆದರೆ ಆತನಿಗೆ ತಾನು "ಯಾವ ಪಕ್ಷದ ಪಕ್ಷೇತರ ಶಾಸಕ" ಎಂಬುದೇ ಇನ್ನೂ ಖಾತ್ರಿಯಾಗದೇ ಚಡಪಡಿಸುತ್ತಿದ್ದಾನೆ.

ಸೈಲ್ ರಾಜ್ಯದ ಆಳುವ ಕಾಂಗ್ರೆಸ್‌ನ ಸಹ-ಸದಸ್ಯ. ಆದರೆ ಈತನ ತಲೆ ಕಂಡರೆ ಜಿಲ್ಲಾ ಮಂತ್ರಿ ದೇಶಪಾಂಡೆಗೆ ಸಿಟ್ಟು ನೆತ್ತಿಗೇರುತ್ತದೆ. ಕಳೆದ ಲೋಕಸಭೆ ಇಲೆಕ್ಷನ್ ಹೊತ್ತಲ್ಲಿ ಶಾಸಕ ಸೈಲ್‌ಗಿಂತ ತನ್ನ ಹಳೆ ವೈರಿ ಆನಂದ್ ಅಸ್ನೋಟಿಕರ್‌ನೇ ಕಾರವಾರದಲ್ಲಿ ಶಕ್ತಿಶಾಲಿ ಎಂಬ ಲೆಕ್ಕಾಚಾರ ದೇಶಪಾಂಡೆ ಹಾಕಿದ್ದರು. ಹಾಗಾಗಿ ಆತ ಒಳಗೊಳಗೇ ಅಸ್ನೋಟಿಕರ್‌ನನ್ನು ಕಾಂಗ್ರೆಸ್‌ಗೆ ತರಲು ಪ್ರಯತ್ನ ನಡೆಸಿದ್ದರು. ಇದು ಗೊತ್ತಾಗಿದ್ದೇ ಆನಂದ್‌ನ ದೇವಮಾತೆ ಮಾರ್ಗಿ ತಿರುಗಿಬಿದ್ದರು. ಆಕೆ ಸೈಲ್ ಕಂಪನಿ ಹಿತಾಸಕ್ತಿ ಕಾಯಲು ನಿಂತರು. ಸಿಟ್ಟಿಗೆದ್ದ ಸೈಲ್ ದೇಶಪಾಂಡೆ ಮಗ ಪ್ರಶಾಂತ್ ವಿರುದ್ಧ ತನ್ನ ಹೆಂಡತಿ-ಸಹಚರರನ್ನು ಫೀಲ್ಡಿಗೆ ಬಿಟ್ಟರು. ಜೈಲಿಂದಲೇ ದೇಶಪಾಂಡೆಗೆ ಬುದ್ಧಿ ಕಲಿಸಲು ತಂತ್ರ ಹೆಣೆದು-ಹೆಣೆದು ಕಾರವಾರಕ್ಕೆ ಕಳಿಸಿದರು.

ಈಗ ಸೈಲ್‌ಗೆ ಕಾಂಗ್ರೆಸ್‌ಗಿಂತ ಬಿಜೆಪಿಯೇ ಅಪ್ಯಾಯಮಾನವಾಗಿ ಕಾಣಿಸುತ್ತಿದೆ. ದೋನಂಬರ್ ದಂಧೆ ಬಾಸ್ ರೆಡ್ಡಿಯೂ ಈಗ ಜೈಲಾಚೆ ಬಂದಿದ್ದಾನೆ. ಆತನಿಗೆ ಭಜೆಪಿ ರತ್ನಗಂಬಳಿ ಹಾಕುವ ತಯಾರಿಯಲ್ಲಿದೆ. ರೆಡ್ಡಿ ಜೊತೆಗಿನ ಹಿಂದಿನ ನಂಟು ಬಳಸಿಕೊಂಡು ಬಿಜೆಪಿ ಸೇರುವುದೇನೂ ಸೈಲ್‌ಗೆ ಕಷ್ಟವಲ್ಲ. ಸಿಬಿಐ ಕೇಸಿಂದ ಬಚಾವಾಗಲು ಆತನಿಗೆ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಅನಿವಾರ್ಯ.

ಆದರೆ ಆನಂದ್ ಅಸ್ನೋಟಿಕರ್ ಇಲೆಕ್ಷನ್ ಹತ್ತಿರ ಬಂದಾಗ ತಾನೇ ಬಿಜೆಪಿ ಕ್ಯಾಂಡಿಡೇಟ್ ಆಗ್ತೇನೆ ನೋಡಿ ಎಂದು ಹತ್ತಿರದವರಲ್ಲಿ ಚಾಲೆಂಜ್ ಹಾಕಿದ್ದಾನೆ. ಕೇಂದ್ರ ರಕ್ಷಣಾ ಮಂತ್ರಿ ಮನೋಹರ ಪಾರಿಕ್ಕರ್ ಆನಂದ್‌ಗೆ ಹೆಣ್ಣು ಕೊಟ್ಟ ಮಾವ ದಿವಂಗತ ಸಂಜಯ್ ಬಾಂದೇಖರ್ ಕುಟುಂಬಕ್ಕೆ ಆಪ್ತರು. ಆನಂದ್ ಮತ್ತು ಸೈಲ್ ನಡುವೆ ತಾನೇ ರಾಜಿ ಕ್ಯಾಂಡಿಡೇಟೆಂದು ಹುಂಬ ಗಣಪತಿ ಉಳ್ವೇಕರ್ ಎಂಬ ಅನ್‌ಪಡ್ ಮನಸ್ಸಲ್ಲೇ ಮಂಡಿಗೆ ತಿನ್ನುತ್ತಿದ್ದಾನೆ.

ಒಂದಂತೂ ಖರೆ. ಆನಂದ್, ಸೈಲ್ ಮತ್ತು ಉಳ್ವೇಕರ್‌ನ ದೋನಂಬರ್ ದುಡ್ಡಿನ ದರ್ಪದಲ್ಲಿ ಕಾರವಾರ ಕ್ಷೇತ್ರದ ರಾಜಕಾರಣ ಖರಾಬೆದ್ದು ಹೋಗಿದೆ. ಚೆಡ್ಡಿಗಳು ಕದಡಿದ ನೀರಲ್ಲಿ ಮೀನು ಹಿಡಿಯಲು ಹಾತೊರೆಯುತ್ತಿದ್ದಾರೆ. ಮಜಾ ಎಂದರೆ ಇಲೆಕ್ಷನ್ ಇನ್ನೂ ಮೂರು ವರ್ಷವಿರುವಾಗಲೇ ಕಾರವಾರ-ಅಂಕೋಲಾದ ರಾಜಕೀಯ ಪಡಸಾಲೆಯಲ್ಲಿ ಟಿಕೆಟ್ ಲೆಕ್ಕಾಚಾರ ಆರಂಭವಾಗಿದೆ. ಕುತೂಹಲವಿರುವುದು ಸೈಲ್ ಮತ್ತು ಆನಂದ್ ಪಕ್ಷ ಅದಲುಬದಲಾಗುವ ಕುರಿತಂತೆ! ದೇಶಪಾಂಡೆ ಅಸಹಕಾರದಿಂದ ಕಂಗೆಟ್ಟಿರುವ ಸೈಲ್ ರಾಜ್ಯ ಸರ್ಕಾರ ಗಣಿ ಹಗರಣ ತನಿಖೆಗೆ ರಚಿಸಿರುವ ಎಸ್‌ಐಟಿ ಎಲ್ಲಿ ತನ್ನ ಹೆಡೆಮುರಿ ಕಟ್ಟಿ ಮತ್ತೆ ಪರಪ್ಪನ ಅಗ್ರಹಾರದ ಜೈಲಿಗೆ ಕಳಿಸುತ್ತದೋ ಎಂಬ ಭಯವೂ ಕಾಡುತ್ತಿದೆ! ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ಕಾರವಾರ ಕ್ಷೇತ್ರಕ್ಕೆ ಶಾಸಕರೇ ಕೇಡಿಗಳಾಗುತ್ತಿರುವ ದುರಂತ ಕಣ್ಣಿಗೆ ರಾಚುತ್ತದೆ!

ಸ್ಸರು ಅಡ್ಡಗಾಲು ಹಾಕುತ್ತಿದ್ದಾರೆ. ಹೀಗಾಗಿ ಆತನಿಗೆ ರವಾರದತ್ತ ಬರುವ ಮನಸ್ಸೇ ಆಗುತ್ತಿಲ್ಲ.

ಹೆಂಡತಿ-ಮಕ್ಕಳನ್ನು ಕಾರವಾರದ ಗಡಿಯಲ್ಲಿರುವ ಗೋವಾದ ಕಾಣಕೋಣದ ತವರು ಮನೆ ಬಳಿಯ ಗ್ಗೆಯಲ್ಲಿ ಬಿಟ್ಟಿರುವ ಆನಂದ್ ದುಬೈ, ಮುಂಬೈ, ಗೋವಾ ಎಂದೆಲ್ಲ ಹೊಸ-ಹೊಸ 'ಸಂಗಾತಿ'ಗಳ ಜತೆ ಲಿ ಟ್ರಿಪ್ ಮಾಡುತ್ತಿದ್ದಾನೆ. ಗೋವಾದ ಮಾಂಡವಿ ಯ ನಡುವೆ ಬೋಟ್‌ನಲ್ಲಿ ನಡೆವ ಕ್ಯಾಸಿನೋ ಜೂಜು ಕ್ಕಿಗಂತೂ ಆನಂದ ಕಾಯಂ ಗಿರಾಕಿ. ಇದು ಹೇಳಲಿಕ್ಕಷ್ಟೇ ಜೂಜು ಕೇಂದ್ರ. ನಡೆಯುವುದು ಹೈಟೆಕ್ ವೇಶ್ಯಾವಾಟಿಕೆಯ ್‌ಆಪ್-ಸೆಟ್‌ಅಪ್‌ಗಳು!

ಸುಮಾರು ಎರಡು ತಿಂಗಳ ಹಿಂದೆ ಆನಂದ್ ಗೋವಾದ ಪ್ರತಿಷ್ಠಿತ ಕ್ಯಾಸಿನೋ ಅಡ್ಡೆಯಲ್ಲಿ ಸ್ಥಳೀಯ ಧಿಕಾರಿಯೊಬ್ಬಳ ಮಗಳೊಂದಿಗೆ ಲೈಂಗಿಕ ಕುಚೇಷ್ಟೆ ಮಾಡಿದ್ದು ದೊಡ್ಡ ರಂಪ-ರಗಳೆಯಾಗಿತ್ತು. ಆನಂದ್‌ನ ದೋನ್ಮತ್ತ ತೀಟೆ ಆ ಹೆಂಗಸು ಪ್ರತಿಭಟಿಸಿದ್ದಾಳೆ. ಆಗ ಡ್ಡೆಯ ಬೌನ್ಸರ್‌ಗಳು ಆನಂದನನ್ನು ಕರ್ನಾಟಕದ ಮಾಜಿ ಮಂತ್ರಿ ಅಥವಾ ಗೋವಾದ ಮಾಜಿ ಮಂತ್ರಿ ಬಾಂದೇಕರ್‌ನ ಧಿಕೃತ ಅಳಿಯನೆಂಬುದೂ ಲೆಕ್ಕಿಸದೇ ಸಮಾ ತದಕಿದ್ದಾರೆ! ್ರ-ಮುಖ ಡ್ಯಾಮೇಜು ಮಾಡಿಕೊಂಡ ಆನಂದ ಅರ್ಧ ಗಳು ರೆಸ್ಟ್ ಮನೆಯಲ್ಲೇ ಪಡೆಯುವಂತಾಗಿತ್ತು. ಹಾಗಂತ ಗೋವಾ-ಕಾಣಕೋಣ-ಕಾರವಾರ-ಅಂಕೋಲೆಯಲ್ಲಿ ್‌ರಂಗೀಲಾ ಸುದ್ದಿ ಹಬ್ಬಿತ್ತು. ಇದು ಕಾರವಾರದಲ್ಲಿ ದುಳಿದಿದ್ದ ಆನಂದ್ ಮತ್ತಾತನ ತಾಯಿ ಮಾಜಿ ಎಮ್ಮೆಲ್ಸಿ ಭಲತಾರ ಇಮೇಜ್ ಭಂಗ ಮಾಡಿತ್ತು!!

ಹಣ ಹರಿಸಿ ಕಾಂಗ್ರೆಸ್ ಅಥವಾ ಬಿಜೆಪಿ ಎಮ್ಮೆಲ್ಲೆ ಟಿಕೆಟ್ ಮತ್ತು ಓಟು ಪಡೆವ ಭಂಡ ಯೋಚನೆಯಲ್ಲಿರುವ ಆನಂದ್ ಎಲೆಕ್ಷನ್ ಹೊತ್ತಲ್ಲಿ ಹಠಾತ್ ಪ್ರತ್ಯಕ್ಷನಾಗುವ ಪ್ಲ್ಯಾಚಾರ ಹಾಕಿದ್ದಾನೆ. ಹಾಗಾಗಿ ಈ 'ಲೈಂಗಿಕ ಭಾನ್ಗಡಿ' ಮುಂದೆ ತನಗೆ ಬಾಧಿಸಬಹುದೆಂದು ಮೊದಲು ಮಿಯಿಂದ ಪುಕಾರುಗಳ ಅಲ್ಲಗಳೆದು ಪತ್ರಿಕಾ ಹೇಳಿಕೆ ಕೊಡಿಸಿದ್ದಾನೆ. ನಂತರ ತಾನೇ ಕಾರವಾರಕ್ಕೆ ಓಡಿಬಂದು ನ್ನ ಮೇಲೆ ಕ್ಯಾಸಿನೋ ಜೂಜು ಅಡ್ಡೆಯಲ್ಲಿ ಹಲ್ಲೆಯಾಗಿಲ್ಲ; ನು ಯಾವುದೇ ಹುಡುಗಿ-ಹೆಂಗಸಿನ ತಂಟೆಗೆ ಹೋಗಿಲ್ಲ. ವೇ ದಿನದಲ್ಲಿ ಕಾರವಾರದ ರಾಜಕೀಯಕ್ಕೆ ಮರಳುತ್ತೇನೆ ದು ಹೇಳಿಹೋಗಿದ್ದ. ಆದರೆ ಆನಂದ್‌ನ ಅಡ್ರೆಸ್ಸೇ ್ಲ. ಕಾರವಾರಕ್ಕೆ ಆತ ಯಾವ ಮುಖ ಹೊತ್ತು ಬರ್‍ತಾನೆ? ಸಕ ಜೈಲ್‌ನಿಂದ ಹೊರಬಂದು ಹೊಸ ಉಮೇದಿಯಲ್ಲಿ ಬಾಬಿನ ರಾಜಕಾರಣ ಶುರು ಹಚ್ಚಿಕೊಂಡಿರುವ ಈ ಸ ಗಳಿಗೆಯಲ್ಲಿ ಆನಂದ್ ಚಲಾವಣೆ ಬರುವುದಾದರೂ ಗೆ? ತನ್ನ ಪಾಗಾರ ಹಾರುವ ಹರಕು ಬುದ್ಧಿಯಿಂದ ಡತಿ ಮುನಿಸಿಕೊಂಡಿರುವಾಗ ಆನಂದ್‌ಗೆ ರಾಜಕಾರಣ ಮಾಡುವ ನೈತಿಕ ಧೈರ್ಯವಾದರೂ ಎಲ್ಲಿದೆ? ಎಲ್ಲಕ್ಕಿಂತ ಸ್ಟಾಗಿ ಆತನಿಗೆ ಜೈ ಹಾಕುವ ಕಾರ್ಯಕರ್ತರು, ನಂಬಿಗಸ್ಥ ಮುಯಾಯಿಗಳು, ಕೊನೆಗೆ ಜನಸಾಮಾನ್ಯರ್‍ಯಾರೂ ರವಾರ-ಅಂಕೋಲಾದಲ್ಲಿ ಈಗಿಲ್ಲ.

ಆನಂದ್ ಅದೆಷ್ಟು ಹತಾಶನಾಗಿದ್ದಾನೆಂದರೆ, ಫೋನ್ ಲ್ಲೂ ಆತ ಕಾರವಾರ ಕಡೆಯವರೊಂದಿಗೆ ಮಾತಾಡಲು ಮುಂದಾಗುತ್ತಿಲ್ಲ. ಇಲೆಕ್ಷನ್ ಆದ ತಕ್ಷಣ ಒಂದಾರು ಗಳಂತೂ ಆನಂದ್ ಹೆಂಡತಿ-ತಾಯಿ-ಮಕ್ಕಳಿಗೂ ದ್ದಾಗಿದ್ದನಂತೆ! ಆಗಾತ ಸದಾಶಿವಗಢ ಮುಸ್ಲಿಮ್ ಹುಡುಗಿ ಜತೆ ದುಬೈನಲ್ಲಿ ಸಂಸಾರ ಹೂಡಿದ್ದಾನೆಂದು ಸುದ್ದಿಯಾಗಿತ್ತು. ವೆಷ್ಟು ಬಲವಾದ ಪುಕಾರು ಎಬ್ಬಿಸಿತ್ತೆಂದರೆ, ಆ ಹುಡುಗಿಗೆ ಮೋಸ ಮಾಡಲು ಹವಣಿಸಿದ್ದ ಆನಂದ್ ಆಕೆಯ ಸೋದರರು ಬಲವಂತದಿಂದ ಮದುವೆ ಮಾಡಿಸಿ ರೆಂದೂ ಚರ್ಚೆಗಳು ನಡೆದಿತ್ತು. ದುಬೈನಲ್ಲಿ ಆಕೆ ಹೆಸರಲ್ಲಿ ಸ್ತಿ ಖರೀದಿಸಿರುವ ಆನಂದ್ ಬೆದರಿಕೆಯಿಂದ ಬಚಾವಾಗಿ ನಂತೆ. ಆಕೆ ದುಬೈನಲ್ಲಿದ್ದರೆ ಇಲ್ಲಿ ಆನಂದನ ಸಂಸಾರದಲ್ಲಿ ಮರಸ್ಯ ಇಲ್ಲದಾಗಿದೆಯಂತೆ. ಹಲವು ಜಂಜಾಟಗಳಲ್ಲಿ ಬಿದ್ದಿರುವ ಆನಂದ್ ಕಾರವಾರ-ಅಂಕೋಲಾ ರಾಜಕೀಯ ಯಿಂದ ನಿಧಾನಕ್ಕೆ ಅಳಿಸಿಹೋಗುತ್ತಿದ್ದಾನೆ. ಸದ್ಯಕ್ಕಾತ ಗೋವಾದ ಮಡಗಾಂವ್ ಮತ್ತು ಕಾಣಕೋಣದ ರೆಸಾರ್ಟ್ ಬಿಸ್‌ನಲ್ಲಿ ಬಿಜಿ!

ಅಪ್ಪನ ಹಡಬೆ ಹಣ-ಸಿದ್ಧಾಂತಗಳಿಲ್ಲದ ದಾದಾಗಿರಿ ಯಿಂದ ಕಟ್ಟಿಕೊಂಡಿರದ ಸಂಘಟನೆಯಲ್ಲಿ ರೆಡಿಮೇಡ್ ಜಕಾರಣಿಯಾಗಿ ಅವತರಿಸಿದ್ದ ಆನಂದ್ ತಾನೇ ತೋಡಿದ ಕ್ಕದಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ. ಜನಪರ ಹೋರಾಟ, ಕ್ಷೇತ್ರ ಕಾಳಜಿ, ನಾಗರಿಕ ಶಿಷ್ಟಾಚಾರ, ನೈತಿಕತೆ ಒಂದೂ ಲ್ಲದ ಆನಂದ್ ವಿಶ್ವಾಸಾರ್ಹತೆ ಕಳೆದುಕೊಂಡುಬಿಟ್ಟಿದ್ದಾನೆ. ಕ್ಕಂತೂ ಆತನಿಗೆ ಕಾರವಾರಕ್ಕೆ ಬಂದುಳಿವ ಧೈರ್ಯ ಆತನಿಗೆ ಪ್ರತಿಕೂಲ ವಾತಾವರಣ ಕ್ಷೇತ್ರದ ಉದ್ದಗಲಕ್ಕೆ ಬಗೊಂಡಿದೆ. ಹೀಗಾಗಿ ಶಾಸಕ ಸೈಲ್‌ಗೆ ಮೂಗುದಾರ ಕೋರೇ ಇಲ್ಲದಾಗಿದೆ. ಈತನೂ ಜನಪರ ಚಿಂತ-ಬದ್ಧತೆಯಿಲ್ಲದ ಹಣದ ಹಗಾಣಿಯ ಬೈಪ್ರೊಡಕ್ಟ್. ಗಾಗಿ ಕಾರವಾರ ಕ್ಷೇತ್ರ ಇವತ್ತು ಸಮರ್ಥ ನಾಯಕ-ಶಾಸಕ ಲ್ಲದೆ ದಿಕ್ಕೆಟ್ಟು ಹೋಗಿದೆ! ಅಭಿವೃದ್ಧಿ ಎಂಬುದು ಜನರ ಲಿಗೆ ಮರೀಚಿಕೆಯಾಗಿದೆ!

●ನಹುಷ

ಕಾಲ ನಿಮ್ಮನ್ನೇ ಬೀದಿಲಿ ನಿಲ್ಲುಸ್ತಲ್ಲ ಸಾರ್!

ಥೂತ್ತೇರಿ

► ಯಾಹೂ

ಭಾರತಕ್ಕೆ ಬಂದ ಬರಾಕ್ ಒಬಾಮಾ ಪತ್ನಿ ಮಿಷೆಲ್ ಜೊತೆ ಕೈಹಿಡಿದು ವಿಮಾನದಿಂದ ಕೆಳಗಿಳಿದರು. ಹಾಗೆಯೇ ಹೋಗುವಾಗ ಕೈಹಿಡಿದು ವಿಮಾನವೇರಿ ವಿಷ್ ಮಾಡಿದರು. ಅಮೆರಿಕಾ ಅಧ್ಯಕ್ಷನ ಅರ್ಧಾಂಗಿಯಾಗಿರುವ ಮಿಷೆಲ್ ಆ ದೇಶದ ಪ್ರಥಮ ಮಹಿಳಾ ಗೌರವಕ್ಕೆ ಪಾತ್ರಳಾಗಿರುವಾಗ, ನಮ್ಮ ಭವ್ಯ ಭಾರತದ ಪ್ರಧಾನಿಯ ಪತ್ನಿ ಎಲ್ಲಿದ್ದಾಳೊ, ಏನು ಮಾಡುತ್ತಿದ್ದಾಳೊ ಎಂಬುದು ಚೆಡ್ಡಿಗಳಿಗೆ ಮಾತ್ರ ಗೊತ್ತಂತಲ್ಲಾ. ಮಜಾ ಸಂಗತಿಯೆಂದರೆ ಮೋದಿ ಮೇಲೇರುವ ಕಾಲದಲ್ಲಿ "ನಾನು ಮದುವೆಯಾಗದ ಬ್ರಹ್ಮಚಾರಿ" ಎಂದು ಹೇಳಿಕೊಂಡು ತಿರುಗುತ್ತಿರುವಾಗಲೇ ಮೋದಿ ಹೆಂಡತಿ "ನಾನು ಇಲ್ಲಿದ್ದೇನೆ, ಇನ್ನೂ ಬದುಕಿದ್ದೇನೆ" ಎಂದು ಕೂಗಿದ್ದು ಕೂಡ ಭಂಡ ಬಾಳಿನವರಿಗೆ ಯಾವ ಆತಂಕ, ಅವಮಾನವನ್ನು ಉಂಟುಮಾಡಲಿಲ್ಲ. ಪುರುಷನ ಅಭ್ಯುದಯದಲ್ಲಿ ಮಡದಿಯನ್ನು ಅಜ್ಞಾತದಲ್ಲಿಡುವುದು ಧರ್ಮ ಎಂಬಂತೆ ಚೆಡ್ಡಿಗಳು ಮೆರೆಯುತ್ತಿರುವಾಗಲೇ, ಇದೆಲ್ಲ ಹೇಗೊ ತಿಳಿದಂತೆ ಒಬಾಮ "ನನ್ನ ಹೆಂಡತಿ ನನ್ನಷ್ಟೇ ಶಕ್ತಿವಂತಳು ಮತ್ತು ಸಮಾನಳು. ನನ್ನ ಸರಿತಪ್ಪುಗಳನ್ನ ತಿದ್ದಿ ಹೇಳುವಂತಹ ದಿಟ್ಟೆ. ಮಹಿಳೆಯರು ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ಅದರಲ್ಲೂ ಪತ್ನಿಯರು, ನಮ್ಮನ್ನ ಪೊರೆಯುವ ತಾಯಂದಿರು" ಎಂದು ಹೇಳುತ್ತಿರುವಾಗ ಮೋದಿ ಎಂಬ ಕಳ್ಳಬೆಕ್ಕು ಎತ್ತೆತ್ತಲೋ ನೋಡುತ್ತಿತ್ತಂತಲ್ಲ. ಆಹಾ, "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರದೇವತಹಾ" ಎಂಬ ಸೂಕ್ತಿಯೂ ಆಗಾಗ್ಗೆ ಚೆಡ್ಡಿಗಳ ಬಾಯಲ್ಲಿ ಉದುರುತ್ತದಂತಲ್ಲಾ, ಥೂತ್ತೇರಿ!

* * * *

ಜೆಡಿಎಸ್ ಪಾರ್ಟಿ ಆಫೀಸ್ ಕಳೆದುಕೊಂಡು ದುಗುಡದಲ್ಲಿರುವ ದೇವೇಗೌಡರನ್ನ ಮಾತನಾಡಿಸ ಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.



ರಿಂಗ್‌ಟೋನ್: "ನಿನಗ್ಯಾರಿದ್ದರೇನೂ ಸುಖವಿಲ್ಲ ಪ್ರಭುವೇ. ದಾರಿ ಸುಖವಿಲ್ಲ, ಬಾಯಾರಿತು ಎಂದು ಪಾರ್ಟಿ ಆಫೀಸಿಗೋದೆ......"

"ಹಲೋ ಯಾರು ಸಾರ್ ತಾವು?"

"ನಮಸ್ಕಾರ ದತ್ತಾ ಅವರೆ, ನಾನು ಯಾಹೂ."

"ಏನ್ಹೇಳಿ ಯಾಹೂ?"

"ಗೌಡ್ರು ಜೊತೆ ಒಂದೆರಡು ಮಾತಾಡಬೇಕು."

"ಆಮೇಲೆ ಮಾಡ್ತಿರಾ?"

"ಇಲ್ಲ ಸಾರ್ ಡೆಡ್‌ಲೈನ್."

"ಕೊಟ್ಟೆ ಇರಿ... ಯಾಹೂ ಫೋನ್ ಮಾಡಿದಾನೆ ಮಾತಾಡ್ತಿರಾ?"

"ನಮಸ್ಕಾರ ಸಾರ್, ನಾನು ಯಾಹೂ."

"ಹೇಳಿ ಗುರುವೇ."

"ಚೆನ್ನಾಗಿದೀರ ಸಾರ್?"

"ಏನು ಚೆನ್ನಾಗಿರೋದು? ಪಾರ್ಟಿ ಆಫೀಸ್ ಕಳಕೊಂಡು ಬೀದಿಲಿದ್ದೀವಿ."

"ಪಾರ್ಟಿ ಆಫೀಸು ನಿಮ್ಮದಲ್ಲವಲ್ಲ ಸಾರ್?"

"ಕಳೆದ ನಾಲ್ಕು ದಶಕದಿಂದ ಅದು ನಮ್ಮದಾಗಿತ್ತು; ಭಾವನಾತ್ಮಕವಾಗಿ ಅದು ಇನ್ನೂ ನಮ್ಮದೇ ಪರಂತೂ ಅಸ್ವರದಲ್ಲ."

"ಅದು ಬಗರ್‌ಹುಕುಂ ಭೂಮಿ ವಿಷಯ ಅಲ್ಲ ಸಾರ್. ಕೋರ್ಟ್ ತೀರ್ಪು ಕೊಟ್ಟಿದೆ. ಖಾಲಿ ಮಾಡಕ್ಕೆ ಸಮಯಾವಕಾಶವನ್ನೂ ಕೊಟ್ಟಿತ್ತು. ಅದ್ರು ಬಿಡಲ್ಲ ಅಂದ್ರೆ ಹ್ಯಂಗೆ? ಭಂಡತನ ಒಳ್ಳೆದಲ್ಲ ಸಾರ್."

"ಇರ್‍ಲಿ ಕೇಳಿ, ಆ ಆಫೀಸಿನ ವಿಷಯ ನಿಮಗೇನು ಗೊತ್ತು? ಅಲ್ಲಿಂದ್ಲೇ ಆ ವ್ಯಕ್ತಿಯನ್ನ ಉಪಮುಖ್ಯಮಂತ್ರಿ ಮಾಡಿದ್ದು."

"ಯಾರನ್ನ ಸಾರ್?"

"ಅದನ್ನ ಬಿಡಿಸಿ ಹೇಳಬೇಕೇನ್ರಿ?"

"ಸಾರಿ ಸರ್, ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿದ್ದು ಅಲ್ಲೆ ಅಲ್ಲವಾ?"

"ಆತನನ್ನ ನಾನ್ಯಾಕೆ ಉಪಮುಖ್ಯಮಂತ್ರಿ ಮಾಡ್ಲಿ? ಕುಮಾರಸ್ವಾಮಿನ ಅಪಹರಿಸಿಕೊಂಡೋಗಿ ಮುಖ್ಯಮಂತ್ರಿ ಮಾಡಿ ತಾನು ಉಪಮುಖ್ಯಮಂತ್ರಿಯಾದದ್ದು ಈಗ ಇತಿಹಾಸ. ಆ ವಿಷಯ ಬೇಡ."

"ಎಂ.ಪಿ. ಪ್ರಕಾಶ್ ಕೂಡ ಉಪಮುಖ್ಯಮಂತ್ರಿಯಾಗಿದ್ರು ಸಾರ್."

"ಸತ್ತು ಸ್ವರ್ಗದಲ್ಲಿರೋ ಆ ಪುಣ್ಯಾತ್ಮರು ಇದ್ದಿದ್ರೆ ಇಂತಹ ಮನೆಮುರುಕ ರಾಜಕಾರಣಕ್ಕೆ ಅವಕಾಶ ಇರತಿರಲಿಲ್ಲ."

"ಯಾರು ಸಾರ್ ಮನೆ ಮುರುಕ್ರು?"

"ತಮ್ಮ ಪಕ್ಷದಲ್ಲಿ ಇದ್ದು, ಎಲ್ಲ ಅಧಿಕಾರವನ್ನ ಅನುಭವಿಸಿ ಹೊರಗೋದ ಮಹಾನುಭಾವರು ಯಾರಿದ್ದಾರಲ್ಲಾ ಅವ್ರುರು."

"ಭಾಳ ಜನ ಇದ್ದಾರಲ್ಲವ ಸಾರ್?"

"ತಿಳಕೊಳಿ. ಪಾರ್ಟಿ ಆಫೀಸ್ ಇಲ್ಲ ಅಂದ್ರೆ ಈ ದೇವೇಗೌಡನ ಪಾರ್ಟಿ ಮುಗಸಕ್ಯಾಗಲ್ಲ."

"ಪಾರ್ಟಿ ಆಫೀಸು ಕೈಬಿಟ್ಟಿದ್ದಕ್ಕೂ ನಿಮ್ಮ ವೈರಿಗಳಿಗೂ ಏನು ಸಂಬಂಧ ಸಾರ್? ಅಷ್ಟಕ್ಕೂ ಇದು ಕೋರ್ಟ್ ತೀರ್ಪಲ್ಲವ. ನೀವು ಇದುವರೆಗೂ ಇದ್ದದ್ದೇ ಬೇರೆಯವರ ಪಾರ್ಟಿ ಆಫೀಸಲ್ಲಿ ಅನ್ನದೇ ಅವಮಾನಕರ ಸಂಗತಿ."

"ಅವಮಾನ ಆಗೋವಂತ ಕೆಲಸ ನನ್ನ ಪಾರ್ಟಿಯಿಂದ ನಡೆದಿಲ್ಲ. ಜನಸೇವೆಯಲ್ಲಿ ಮುಳುಗಿದ್ದ ನಾವು ಪಾರ್ಟಿ ಆಫೀಸಿನ ಕಡೆ ಗಮನ ಕೊಡಲಿಲ್ಲ ಅಷ್ಟೆ."

"ಕೊಡಬೇಕಾಗಿತ್ತು ಸಾರ್. ಕೋರ್ಟಲ್ಲಿ ಕೇಸಿದ್ರೆ ಆಗಾಗ್ಗೆ ಹೋಗಿ ಇಣುಕಿ ನೋಡಲಿಲ್ಲ ಅಂದ್ರೆ ಈ ತರ ಬೀದಿಗೆ ಬೀಳಬೇಕಾಗುತ್ತೆ. ತಾವು ಭಾರತದ ಪ್ರಧಾನಿಯಾಗಿದ್ದೋರು. ರಾಘವೇಶ್ವರನ ಕೇಸಿನಿಂದ ಹೇಗೆ ನ್ಯಾಯಾಧೀಶರು ಹಿಂದೆ ಸರಕತ್ತಾ ಅವರೊ ಅದೇತರ ನಿಮ್ಮ ಆಫೀಸಿನ ಕೇಸಲ್ಲೂ ಹಿಂದೆ ಸರಿಯಂಗೆ ಮಾಡಿ ಒಂದು ಹೊಸ ಪಾರ್ಟಿ ಆಫೀಸ್ ಕಟ್ಟಿಕೋಬಹುದಿತ್ತು. ಕೇವಲ ಐದು ವರ್ಷದಲ್ಲಿ ಆ ಬಿಜೆಪಿಗಳು ಎಲ್ಲಾ ಜಿಲ್ಲೆಲ್ಲೂ ಎಂತೆಂತ ಆಫೀಸ್ ಕಟ್ಟಿಗೊಂಡವ್ರರೆ ಗೊತ್ತ ಸಾರ್? ಅದು ನಿಮ್ಮ ಮಗನ ದೆಸಿಂದ."

"ಪಾರ್ಟಿ ಆಫೀಸ್ ಕಟ್ಟೋದು ದೊಡ್ಡ ವಿಷಯ ಅಲ್ಲ. ಯಾವನಾದ್ರು ಜೇಣಿ ಹರದೋನಿಗೆ ಹೇಳಿದ್ರೆ ಹೈಟೆಕ್ ಪಾರ್ಟಿ ಆಫೀಸನ್ನೇ ಕಟ್ಟಿಕೊಡ್ತನೆ. ಈ ದೇವೇಗೌಡ ಆ ವಿಷಯದಲ್ಲಿ ಯಾವನಿಗೂ ಕೈ ಮುಗಿಯಲ್ಲ. ಇನ್ನ ಮುಂದೂ ಕೂಡ."

"ಕೈ ಮುಗಿಯುದಷ್ಟೇ ಅಲ್ಲ ಸಾರ್, ಕಾಲಿಗೆ ಬಿದ್ದುದನ್ನ ನಾನೇ ನೋಡಿದ್ದಿನಿ. ಹೆಗಡೆ ಮನೆಗೋಗಿ ಅಂಗೆ ಮಾಡಿದ್ರಿ."

"ಹೆಗಡೆ ಕಾಲಿಗೆ ಬಿದ್ನ?"

"ಅಲ್ಲ, ಅವರ ಪತ್ನಿ ಶಕುಂತಲಾ ಕಾಲಿಗೆ ಬಿದ್ದು ನಮಸ್ಕರಿಸಿದ್ರಿ."

"ಮಾತೆಯರಿಗೆ ನಾನು ಯಾವತ್ತೂ ಗೌರವ ಕೊಡ್ತೀನಿ. ಅದರಲ್ಲಿ ಯಾವ ರಾಜಕಾರಣಾನೂ ಇರಲ್ಲ. ಆಶೀರ್ವಾದ ಬೇಡದು ತಪ್ಪಲ್ಲ."

"ಸಿದ್ದರಾಮಯ್ಯ ಪಾಪಪ್ರಜ್ಞೆಯಿಂದ ದೇವಸ್ಥಾನಕ್ಕೆ ಭೇಟಿಕೊಡ್ತಾನೆ ಅಂದಿದ್ದಿರಿ. ಇದು ಸರಿನ ಸಾರ್?"

"ಹೌದು. ಹಾಗೆ ಹೇಳಿದ್ದಿನಿ. ಅದ್ರಲ್ಲಿ ತಪ್ಪೇನು?"

"ಆದ್ರೆ ನೀವು ಮಾತ್ರ ಯಜ್ಞ, ಯಾಗ, ಹೋಮ ಮಾಡುಸ್ತ ಯಾವ ದೇವಸ್ಥಾನಾನೂ ಬಿಡಲ್ಲವಲ್ಲಾ. ಇದ್ಯಾವ ಪಾಪಗಳ ಪರಿಹಾರಕ್ಕೆ?"

"ನಾನು ಯಾವುದೇ ಪಾಪಗಳನ್ನ ಮಾಡದೆಯಿದ್ರೂ ನನ್ನ ಬದುಕಿನ ಬಾಲ್ಯಕಾಲದಿಂದ್ಲೂ ದೈವಪೂಜೆ ಮಾಡಿಕೊಂಡು ಬಂದಿದ್ದೀನಿ. ಅದರ ಫಲವಾಗಿ ಮುಖ್ಯಮಂತ್ರಿಯಾಗಿ, ಭಾರತದ ಪ್ರಧಾನಿಯಾದೆ. ಆದ್ರೆ ನಾನು ಉಪಮುಖ್ಯಮಂತ್ರಿ ಮಾಡದೆಯಿದ್ರೆ ಈ ಮಹಾ ನಾಯಕರು ಎಲ್ಲಿರತಿದ್ರು ಗೊತ್ತೆ? ಅದೇ ನಾನು ಮಾಡಿದ ಪಾಪ."

"ಆದೇನಾರ ಆಗ್ಲಿ, ಅವರು ಮುಖ್ಯಮಂತ್ರಿ ಆಗಿ ನೀವು ಬೀದೀಲಿ ನಿಂತಿದ್ದೀರಲ್ಲಾ, ಇತಿಹಾಸದ ಇಂತಹ ಸೇಡಿಗೆ ಏನೇಳನ ಸಾರ್."

"ಇತಿಹಾಸದ ಸೇಡೇನ್ರಿ ಬದನೆಕಾಯಿ."

"ನೋಡಿ ಸಾರ್, ಒಂದು ಸಮ್ಮಿಶ್ರ ಸರಕಾರ ಸುಸೂತ್ರವಾಗಿ ನಡಕೊಂಡೋಗ್ತಾಯಿರುವಾಗ ಸಿದ್ದರಾಮಯ್ಯನ್ನ ಪಾರ್ಟಿಯಿಂದ ತಗದು ಬೀದಿಗೆ ಯಸ್ದುಬುಟ್ರಿ. ಅವರು ಬೀದೀಲೆ ಎಬಿಪಿಜೆಡಿ ಶೆಡ್ ಕಟ್ಟಿಕೊಂಡು ಹೆಣಗಾಡುತಾಯಿದ್ದಾಗ, ಸೋನಿಯಾ ಬಂದು, ಕಾಂಗ್ರೆಸ್ ಮನೆಗೆ ಕರಕಂಡೋಗಿ, ಸಾಂತ್ವನ ಮಾಡಿ, ಪಾರ್ಟಿ ಲೀಡ್ರು ಮಾಡಿದ್ದೂ ಅಲ್ಲದೆ ಮುಖ್ಯಮಂತ್ರಿನೂ ಮಾಡಿಬುಟ್ರು. ಇತಿಹಾಸದ ವ್ಯಂಗ್ಯ ನೋಡಿ. ಯಾವ ಪಾರ್ಟಿಯಿಂದ ನೀವು ತಗದು ಯಸ್ದಿರೂ ಅದೇ ಪಾರ್ಟಿ ಆಫೀಸಿನಿಂದ ನಿಮ್ಮನ್ನ ಕೋರ್ಟ್ ಬೀದಿಗೆ ಯಸ್ತದೆ. ನಮ್ಮ ಕಣ್ಣೆದುರಿಗೆ ನಾವು ನೋಡಿ ಬೆಚ್ಚಿಬಿದ್ದ ಘಟನೆ ಇದು. ಈ ಸಂದರ್ಭದಲ್ಲಿ ನೀವು ತುಂಬ ಸಂಯಮದಿಂದ ನಡಕೋಬೇಕು. ಬಹಳ ತೂಕವಾಗಿ ಮಾತನಾಡಬೇಕು. ನಿಮ್ಮ ತಪ್ಪುಗಳನ್ನ ಯಾರ ಮೇಲೂ ಹಾಕಬಾರದು ಅಲ್ಲವಾ ಸಾರ್? ಹಲೋ? ಹಲೋ? ಮಾತಾಡಿ... ಹಲೋ? ಥೂತ್ತೇರಿ!!" ●

ಧಾರವಾಡ: ಸೂರಿಗಾಗಿ 'ಉಪವಾಸ' ಕೂತ ಕಾರ್ಮಿಕರು

ಜನವರಿ 29ರಿಂದ ಧಾರವಾಡ ಜಿಲ್ಲೆಯ ಬಡ ಬೀಡಿ ಕಾರ್ಮಿಕರು ಹಾಗೂ ಆಟೋರಿಕ್ಷಾ ಚಾಲಕರು ಮಹಾನಗರ ಪಾಲಿಕೆಯ ಮುಂದೆ ಆಮರಣಾಂತ ಉಪವಾಸ ಶುರು ಮಾಡಿದ್ದಾರೆ. ಹತ್ತಾರು ವರ್ಷಗಳಿಂದ ತಲೆ ಮೇಲೊಂದು ಸೂರು ಕಟ್ಟಿಕೊಳ್ಳಲು ಅಧಿಕಾರಶಾಹಿ ವರ್ಗದ ಕಚೇರಿ ಬಾಗಿಲಿಗೆ ಅಲೆದೂ ಅಲೆದೂ ಸಾಕಾದ ಆ ಜೀವಗಳು ತಮ್ಮ ಕೊನೆಯ ಪ್ರಯತ್ನವಾಗಿ ಅನ್ನ ನೀರು ಬಿಟ್ಟು ಬೀದಿಗಿಳಿಯಬೇಕಾಗಿ ಬಂದದ್ದು ವಿಪರ್ಯಾಸವೇ ಸರಿ. ಯಾಕೆಂದರೆ, ಇಲ್ಲಿಗೆ ಹನ್ನೆರಡು ವರ್ಷಗಳ ಹಿಂದೆಯೇ ಅವರಿಗೆಲ್ಲ ಮನೆಗಳನ್ನು ನಿರ್ಮಿಸಿ ಕೊಡಬೇಕಾಗಿತ್ತು. ಆದರೆ ನಿರ್ಲಕ್ಷ್ಯ ಆಡಳಿತಗಾರರು, ಭ್ರಷ್ಟ ಅಧಿಕಾರಿ ವರ್ಗದಿಂದಾಗಿ ಆ ಆಸೆ ಇವತ್ತಿಗೂ ಈಡೇರಿಲ್ಲ.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಐದು ಸಾವಿರಕ್ಕೂ ಅಧಿಕ ಬೀಡಿ ಕಾರ್ಮಿಕರಿದ್ದಾರೆ. ಅವಿಭಜಿತ ಜಿಲ್ಲೆಯಿಂದ ಏನಿಲ್ಲವೆಂದರೂ ಒಂದೂವರೆ ಲಕ್ಷಕ್ಕೂ ಮಿಕ್ಕ ನಿರ್ವಸತಿ ಆಟೊ ಚಾಲಕರುಗಳಿದ್ದಾರೆ. ತಮಗೊಂದು ಸೂರು ನಿರ್ಮಿಸಿಕೊಡಿ ಅಂತ ಅವರೆಲ್ಲಾ ಅವಲತ್ತುಕೊಳ್ಳುತ್ತಲೇ ಬಂದಿದ್ದರೂ ಆಶ್ವಾಸನೆಯ ಹೊರತು ಬೇರೇನೂ ಸಿಕ್ಕಿಲ್ಲ. ಅಸಲಿಗೆ ಬಹಳಷ್ಟು ವರ್ಷಗಳ ಹಿಂದೆಯೇ ಮೈಸೂರಿನಲ್ಲಿ ಪ್ರಥಮ ಬಾರಿಗೆ ದಿವಂಗತ ಅಜೀಜ ಸೇಠರವರು ಬೀಡಿ ಕಾರ್ಮಿಕರಿಗೆ ಮನೆ ನಿರ್ಮಿಸಿಕೊಟ್ಟಿದ್ದರು. ಅಂತಹ ಕಾಳಜಿ ಇಲ್ಲಿನ ಒಬ್ಬೇ ಒಬ್ಬ ರಾಜಕಾರಣಿಗೆ ಇದ್ದಿದ್ದೇ ಆಗಿದ್ದಲ್ಲಿ ಇಷ್ಟೊತ್ತಿಗಾಗಲೇ ಅರ್ಧದಷ್ಟು ಮಂದಿ ತಮ್ಮದೇ ಮನೆಗಳಲ್ಲಿ ನೆಮ್ಮದಿಯ ಬದುಕು ಕಂಡುಕೊಂಡಿರುತ್ತಿದ್ದರು.

ಹುಬ್ಬಳ್ಳಿಯಲ್ಲಿ 12 ವರ್ಷಗಳ ಹಿಂದೆ ಶಾಸಕರಾಗಿದ್ದ ಜಬ್ಬಾರಖಾನ ಹೊನ್ನಳ್ಳಿ 200 ಜನ ಬೀಡಿ ಕಾರ್ಮಿಕರಿಗೆ ಮನೆ ನಿರ್ಮಿಸಿ ಕೊಡಲು ಮುಂದಾಗಿದ್ದುಂಟು. ಆದರೆ ಧಾನ್ಯಕ್ಕಿಂತ ಹೆಗ್ಗಣಗಳೇ ಜಾಸ್ತಿ ಇರುವ ನಮ್ಮ ವ್ಯವಸ್ಥೆಯಲ್ಲಿ ಹಲವಾರು ನಕಲಿ ಫಲಾನುಭವಿಗಳು ಸೇರ್ಪಡೆಗೊಂಡು ಬಡವರಿಗೆ ದಕ್ಕಬೇಕಿದ್ದ ಮನೆಗಳನ್ನು ಲಪಟಾಯಿಸಲು ಹುನ್ನಾರ ನಡೆಸಿದ್ದರು. ಆಗ ಕಾರ್ಮಿಕ ಸಂಘಗಳು ಜಿಲ್ಲಾಧಿಕಾರಿಗಳಿಗೆ ತಕರಾರು ಅರ್ಜಿ ಸಲ್ಲಿಸಿ, ಮನೆಗಳು ಅನರ್ಹರ ಪಾಲಾಗದಂತೆ ಮನವಿ ಮಾಡಿಕೊಂಡಿದ್ದವು. ಇದೇ ನೆಪ ಎನ್ನುವಂತೆ ಇಡೀ ಯೋಜನೆಯನ್ನೇ ಅಲ್ಲಿಗೆ ನಿಲ್ಲಿಸಲಾಗಿತ್ತು.

ಈ ನಡುವೆ 24.1.2012ರಂದು ಅಂದಿನ ಕೇಂದ್ರ ಕಾರ್ಮಿಕ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರು ಬೀಡಿಕಾರ್ಮಿಕರ ಮನೆ ನಿರ್ಮಾಣ ಕಾರ್ಯದ ಅಡಿಗಲ್ಲು ಸಮಾರಂಭಕ್ಕೆ ಆಗಮಿಸಿದ ಸಂದರ್ಭದಲ್ಲಿ, ಆಗಿರುವ ಅನ್ಯಾಯ ಅಕ್ರಮಗಳ ಬಗ್ಗೆ ವಿವರಿಸಿ, ಇಷ್ಟು ಮನೆಗಳು ಯಾವುದಕ್ಕೂ ಸಾಲುವುದಿಲ್ಲ, ಫಲಾನುಭವಿಗಳ ಸಂಖ್ಯೆ ಜಾಸ್ತಿ ಇರುವುದರಿಂದ ಮತ್ತಷ್ಟು ಹೆಚ್ಚುವರಿ ಮನೆ ನಿರ್ಮಿಸಿಕೊಡುವಂತೆ ಕಾರ್ಮಿಕರ ಬೇಡಿಕೆ ಸಲ್ಲಿಸಿದ್ದರು. ಆಗ 200 ಹೆಚ್ಚುವರಿ ಮನೆ ನಿರ್ಮಿಸಿ ಕೊಡಲು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಆದರೆ ಇಲ್ಲಿಯವರೆಗೆ ಅಂತಹ ಯಾವ ಬೆಳವಣಿಗೆಯೂ ಡಿಸಿ ಕಚೇರಿಯಿಂದ ಘಟಿಸಿಲ್ಲ.

ಹಾಗೆ ನೋಡಿದರೆ, 2007ರಲ್ಲೇ ಯಲ್ಲಾಪೂರ ಗ್ರಾಮದಲ್ಲಿಯ 35 ಎಕರೆ ಜಮೀನನ್ನು ಆಶ್ರಯ ಮನೆ ನಿರ್ಮಾಣಕ್ಕೆಂದು ಖರೀದಿಸಿ ಅಲ್ಲಿ ಕೂಡಲೇ ಮನೆ ನಿರ್ಮಿಸುವಂತೆ ಸರಕಾರವು ಸೂಚಿಸಿತ್ತು. ಆದರೆ ಇಲ್ಲಿಯವರೆಗೆ ಒಂದು ಮನೆಯನ್ನು ನಿರ್ಮಿಸಿಕೊಟ್ಟಿಲ್ಲ, ಬದಲಾಗಿ ದಿನಾಂಕ 12.10.2011ರಂದು ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದಲ್ಲಿ ಆಶ್ರಯ ಸಮಿತಿ ಅಸ್ತಿತ್ವದಲ್ಲೇ ಇಲ್ಲದ ಸಮಯ ನೋಡಿಕೊಂಡು ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಸಭೆ ಕರೆದು ಜಿ2 ಮಾದರಿಯಲ್ಲಿ 996 ಫಲಾನುಭವಿಗಳ ಪಟ್ಟಿ ತಯಾರಿಸುವ ಹುನ್ನಾರವೂ ನಡೆದಿತ್ತು. ಅಷ್ಟೇ ಅಲ್ಲ, ಹಾಗೆ ಹಂಚಿ ಉಳಿದ ಸುಮಾರು 59, 968.40 ಚದರ ಮೀಟರ್ ಜಮೀನನ್ನು ಬಹಿರಂಗ ಹರಾಜು ಹಾಕಿ ಮಾರಾಟ ಮಾಡಲೂ ಆ ಸಭೆಯಲ್ಲಿ ನಿರ್ಣಯಕ್ಕೆ ಬರಲಾಗಿತ್ತು. ಖುದ್ದು ಜಿಲ್ಲಾಧಿಕಾರಿ ಹಾಗೂ ಉಸ್ತುವಾರಿ ಸಚಿವರೇ ಆ ಸಭೆಯಲ್ಲಿದ್ದರು. ಜಿಲ್ಲೆಯಲ್ಲಿ ಮನೆ ಇಲ್ಲದ ಲಕ್ಷಾಂತರ ನಿರ್ವಸತಿಕರು, ಕಾರ್ಮಿಕರು ಇರುವಾಗ ಆಶ್ರಯ ಮನೆ ನಿರ್ಮಾಣಕ್ಕೆಂದು ಬಿಟ್ಟಿದ್ದ ಜಮೀನನ್ನೇ ಮಾರಾಟ ಮಾಡಲು ಅಧಿಕಾರಶಾಹಿವರ್ಗ ಮುಂದಾದದ್ದು ದುರಂತವಲ್ಲದೆ ಮತ್ತಿನ್ನೇನು?

ಇಂತಹ ಒಂದು ಜನವಿರೋಧಿ ನಿರ್ಣಯವನ್ನು ಯಾವುದೇ ಕಾರಣಕ್ಕೂ ಅಂಗೀಕರಿಸಬಾರದು ಎಂದು ಬೀಡಿ ಕಾರ್ಮಿಕರು ಹಾಗೂ ಆಟೋರಿಕ್ಷಾ ಚಾಲಕರ ಸಂಘ ತಕರಾರು ಅರ್ಜಿ ಸಲ್ಲಿಸಿದ್ದರಿಂದ ಹಗಲು ದರೋಡೆ ಅರ್ಧಕ್ಕೇ ನಿಂತಿತ್ತು. ಅನಂತರ ಇದೇ ವಿಷಯವಾಗಿ ಅಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಸಂಸದ ಪ್ರಲ್ಹಾದ ಜೋಶಿ, ಮಾಜಿ ಶಾಸಕರಾದ ವೀರಭದ್ರಪ್ಪ ಹಾಲಹರವಿಗೆ ಇದುವರೆವಿಗೂ ಹಲವಾರು ಮನವಿ ಸಲ್ಲಿಸಿದರೂ ಕೆಲಸವಾಗಿಲ್ಲ. 2013 ರಲ್ಲಿ ಆಡಳಿತದಲ್ಲಿದ್ದ ಬಿಜೆಪಿ ಸರ್ಕಾರ ಹೋಗಿ ಕಾಂಗ್ರೆಸ್‌ನ ಸಿದ್ದು ಸರಕಾರ ಅಧಿಕಾರ ಬಂದಾಗ ಹು.ಧಾ. ಪೂರ್ವ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ಮೂಲಕ ಮುಖ್ಯಮಂತ್ರಿಗೆ, ವಸತಿ ಸಚಿವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿದ ಕಾರ್ಮಿಕ ಸಂಘಟನೆಗಳು 2011ರ ಜನವಿರೋಧಿ ನಿರ್ಣಯ ರದ್ದುಗೊಳಿಸಿ ಜಿ2 ಮಾದರಿಯಲ್ಲಿ 3,000 ಮನೆ ನಿರ್ಮಿಸಿ ಅರ್ಹ ಫಲಾನುಭವಿಗಳಿಗೆ ದೊರಕಿಸಿಕೊಡುವಂತೆ ಬೇಡಿಕೊಂಡಿದ್ದವು. ಆದರೆ ಇವತ್ತಿನ ಕ್ಷಣದವರೆಗೆ ಅಂತಹ ಭರವಸೆಯ ನಡೆಗಳಾವುವೂ ಅಧಿಕಾರಸ್ಥರಿಂದ ಕಂಡುಬಂದಿಲ್ಲ.

ವಿಪರ್ಯಾಸವೆಂದರೆ, ಯಾವ ಜಾಗಗಳನ್ನು ಆಶ್ರಯ ಮನೆ ನಿರ್ಮಿಸಲು ಹಿಂದೆ ಸರ್ಕಾರಗಳು ಗೊತ್ತು ಮಾಡಿದ್ದವೋ ಅದು ಯಲ್ಲಾಪುರದಲ್ಲಾಗಲಿ, ಬಿಡ್ನಾಳದಲ್ಲಾಗಲಿ ಜಾಗವೇ ಇಲ್ಲ ಅಂತ 24.07.2013ರ ತಮ್ಮ ಪತ್ರದಲ್ಲಿ ಸ್ವತಃ ಮಹಾನಗರ ಪಾಲಿಕೆಯ ಜಂಟಿ ಆಯುಕ್ತರು ಜಿಲ್ಲಾಧಿಕಾರಿಗೆ ತಿಳಿಸಿದ್ದಾರೆ.

5.1.2007ರಂದು ಆದೇಶ ಹೊರಡಿಸಿದ್ದ ವಸತಿ ಸಚಿವರು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತಿ ಯೋಜನೆ ಅಡಿಯಲ್ಲಿ ಬೆಳಗಾಂ, ಬೀದರ್, ಬಳ್ಳಾರಿ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ, ಗುಲ್ಬರ್ಗಾ, ಕೋಲಾರ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿರುವ ಲೈಸೆನ್ಸ್ ಹೊಂದಿದ ಆಟೋರಿಕ್ಷಾ ಚಾಲಕರಿಗೆ ಮನೆ ನಿರ್ಮಿಸಿಕೊಡಬೇಕೆಂದು ಆಯಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಒಂದೊಮ್ಮೆ ಅದಕ್ಕೋಸ್ಕರ ಜಾಗ ಇಲ್ಲದಿದ್ದರೆ ಹೊಸದಾಗಿ ಖರೀದಿಸಿ ಮನೆ ನಿರ್ಮಿಸಿಕೊಡುವಂತೆ ಸೂಚನೆ ನೀಡಿದ್ದರು. ಈಗಾಗಲೇ ಬೆಂಗಳೂರು ನಗರದಲ್ಲಿ 200ಕ್ಕೂ ಅಧಿಕ ಆಟೋರಿಕ್ಷಾ ಚಾಲಕರು ಈ ಯೋಜನೆಯಡಿ ಮನೆ ಪಡೆದಿದ್ದಾರೆ. ಆದರೆ, ಹುಬ್ಬಳ್ಳಿ-ಧಾರವಾಡದಲ್ಲಿ ಈವರೆಗೆ ಒಂದು ಮನೆಯನ್ನೂ ನಿರ್ಮಿಸಿಕೊಟ್ಟಿಲ್ಲ.

ಸರಕಾರದ ಆದೇಶಗಳಿಗೆ ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರು ಯಾವುದೇ ಮನ್ನಣೆ ನೀಡದಿರುವುದನ್ನು ಪ್ರಶ್ನಿಸಿ ಧಾರವಾಡ ಹೈಕೋರ್ಟ್ ಪೀಠದಲ್ಲಿ ಅಧಿಕಾರಿಗಳನ್ನೇ ಪ್ರತಿವಾದಿಗಳನ್ನಾಗಿಸಿ ಬೀಡಿ ಕಾರ್ಮಿಕರು 2013ರಲ್ಲಿ (WP No. 85845-54/2013 GM-RES) ಹಾಗೂ ಆಟೋರಿಕ್ಷಾ ಚಾಲಕರು 2014ರಲ್ಲಿ (WP No. 108529/2013) ವಕೀಲ ಆರ್.ಎಂ.ಜಾವೇದ್‌ರ ಮೂಲಕ ಕೇಸು ದಾಖಲಿಸಿದ್ದಾರೆ. ಅಷ್ಟಾದ ಮೇಲೂ ದಪ್ಪ ಚರ್ಮದ ಆಡಳಿತಶಾಹಿ ವರ್ಗ ಸಮಸ್ಯೆಗೆ ಕ್ಯಾರೇ ಎಂದಿಲ್ಲ. ಇಂತಹ ನಿರ್ಲಕ್ಷ್ಯದಿಂದ ಬೇಸತ್ತು ಹೋದ ಕಾರ್ಮಿಕರು ಕೊನೆಗೂ ಅನ್ನನೀರು ಬಿಟ್ಟು ಉಪವಾಸ ಕುಳಿತಿದ್ದಾರೆ. ಈಗಲಾದರೂ ಆಳುವವರು ಮತ್ತು ಅಧಿಕಾರಿಗಳು ಬಡವರ ದನಿಗೆ ಓಗೊಡುತ್ತಾರಾ ಕಾದು ನೋಡಬೇಕು.

● ವರದಿಗಾರ





ಕ.ಸಾ.ಪ. ಬಂಡಾಯವೇಳಬೇಕು...

→02 ಎಂಬುದನ್ನು ಚರ್ಚಿಸಬೇಕಿದೆ. ಆದರೆ ಈ ತೀರ್ಪನ್ನು ದಾಟಿ, ಸರ್ಕಾರಗಳು ತೆಗೆದುಕೊಳ್ಳಬಹುದಾದ ತಕ್ಷಣದ ಕ್ರಮಗಳ ಕುರಿತೂ ನಮ್ಮ ಒತ್ತಾಯ ಇರಬೇಕಾದ್ದೂ ಅತ್ಯಂತ ಮಹತ್ವದ ಅಂಶವಾಗಿದೆ. ಸಂವಿಧಾನ ತಿದ್ದುಪಡಿಗೆ ರಾಜಕೀಯ ಒತ್ತಡವನ್ನು ನಿರಂತರವಾಗಿ ಉಂಟುಮಾಡುವುದರ ಜೊತೆಗೆ ಅನುಸರಿಸಬೇಕಾದ ದಾರಿಯ ಕುರಿತು ಸರ್ಕಾರಗಳ ಮೇಲೆ ನಾವು ಒತ್ತಡವನ್ನು ಹೇರಬೇಕಿದೆ. ಈ ನಿಟ್ಟಿನಲ್ಲಿ ಮಹತ್ವದ ಕೆಲಸ ಮಾಡುತ್ತಿರುವ 'ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆ'ಯೊಂದಿಗೆ ಮತ್ತು ಈ ನಾಡಿನ ಪ್ರಜ್ಞಾವಂತರೊಂದಿಗೆ ನಡೆಸಿದ ಸಮಾಲೋಚನೆಯ ನಂತರ ರಾಜ್ಯ ಸರ್ಕಾರ ಇಡಬಹುದಾದ ಹೆಜ್ಜೆಗಳ ಸಾಧ್ಯತೆಗಳನ್ನು ಮುಂದಿಡುತ್ತಿದ್ದೇವೆ.

1. ಇದಕ್ಕೆ ಕಾನೂನಾತ್ಮಕವಾಗಿ ಕಾಣುವ ಮೊದಲನೇ ಪರಿಹಾರ, ಸುಪ್ರೀಂಕೋರ್ಟಿನ ತೀರ್ಪನ್ನು ಅಲ್ಲೇ ಪುನರ್‌ವಿಮರ್ಶೆ ಮಾಡಲು (ನಂತರದ ಕ್ರಮವಾಗಿ 'ಕ್ಯುರೇಟಿವ್ ಪಿಟಿಷನ್') ಕೋರುವುದು.

2. ಕರ್ನಾಟಕ ಸರ್ಕಾರ ಇಡೀ ದೇಶಕ್ಕೆ ಮಾದರಿಯಾದ ಒಂದು ಕ್ರಮದ ಮೂಲಕ ನಿರ್ಣಾಯಕ ಹೆಜ್ಜೆಯಿಡಬಹುದಾಗಿದೆ. ಇದೇ ತೀರ್ಪಿನಲ್ಲಿ ಸರ್ಕಾರೀ ಶಾಲೆಗಳಲ್ಲಿ ಸರ್ಕಾರವು ಬಯಸಿದ ಮಾಧ್ಯಮವನ್ನು ಜಾರಿ ಮಾಡುವ ಅವಕಾಶ ನೀಡಲಾಗಿದೆ. ಹಾಗಾಗಿ, ಸಂವಿಧಾನದ ಕಲಂ 19 (6)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಬಳಸಿ, ಶುಲ್ಕ ಸಂಗ್ರಹಿಸುವ ಎಲ್ಲಾ ಖಾಸಗೀ ಶಾಲೆಗಳನ್ನೂ ರಾಷ್ಟ್ರೀಕರಣ ಮಾಡಬೇಕು. ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಇದೇ ಅಧಿಕಾರವನ್ನು ಬಳಸಿಯೇ ಬ್ಯಾಂಕ್ ರಾಷ್ಟ್ರೀಕರಣವನ್ನು ಮಾಡಿದ್ದರು. ಒಂದು ವಾಣಿಜ್ಯ ಉದ್ದೇಶದ ಕ್ಷೇತ್ರದಲ್ಲಿ ರಾಷ್ಟ್ರೀಕರಣ ಸಾಧ್ಯವಾಗಬಹುದಾದರೆ, ರಾಷ್ಟ್ರ ನಿರ್ಮಾಣದ ಉದ್ದೇಶದ ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಕರಣ ಮಾಡಲು ಹಿಂಜರಿಯಬೇಕಿಲ್ಲ.

3. ಇಂಗ್ಲಿಷ್ ಕಲಿಯಲು ಇರುವ ಅತ್ಯುತ್ತಮ ವಿಧಾನ ಅದನ್ನು ಮಾತೃಭಾಷೆಯ ಮೂಲಕ ಕಲಿಯುವುದೇ ಆಗಿದೆ ಎಂಬುದನ್ನು ಭಾಷಾತಜ್ಞರು ಹೇಳುತ್ತಿರುವಾಗ, ಅದನ್ನು ಸಾಬೀತುಪಡಿಸುವ ಹೊಣೆಗಾರಿಕೆಯೂ ಇದೆ. ಅಂದರೆ ನಮ್ಮ ಎಲ್ಲಾ ಸರ್ಕಾರೀ ಶಾಲೆಗಳಲ್ಲೂ ಮಾತೃಭಾಷಾ ಮಾಧ್ಯಮವನ್ನು ಜಾರಿ ಮಾಡಿ, ಆ ಶಾಲೆಗಳ ಗುಣಮಟ್ಟವು ಅತ್ಯುತ್ತಮವಾಗಿರುವಂತೆ ನೋಡಿಕೊಂಡು, ಅಲ್ಲಿ ಇಂಗ್ಲಿಷನ್ನೂ ಒಂದು ಭಾಷೆಯನ್ನಾಗಿ ನಿಜವಾದ ಅರ್ಥದಲ್ಲಿ ಅತ್ಯುತ್ತಮವಾಗಿ ಕಲಿಯುವ ಏರ್ಪಾಡನ್ನು ಸರ್ಕಾರವು ಮಾಡಬೇಕು. ಅಂದರೆ ಕೇಂದ್ರೀಯ ವಿದ್ಯಾಲಯಗಳಿಗೆ ನಿಗದಿಯಾಗಿರುವ ಮಾನದಂಡದ ಮಟ್ಟಕ್ಕೆ (ಅಗತ್ಯ ಬಿದ್ದರೆ ಇನ್ನೂ ಮೇಲ್ಮಟ್ಟಕ್ಕೆ) ನಮ್ಮ ಎಲ್ಲಾ ಸರ್ಕಾರೀ ಶಾಲೆಗಳನ್ನೂ ತೆಗೆದುಕೊಂಡು ಹೋಗಬೇಕು.

ಮೊದಲು, ತರಗತಿಗೊಬ್ಬರು ಶಿಕ್ಷಕರು ಇರುವಂತೆ ಮತ್ತು 6 ನೇ ತರಗತಿಯಿಂದ ಮುಂದಕ್ಕೆ ವಿಷಯಕ್ಕೊಬ್ಬರು ಶಿಕ್ಷಕರಿರುವಂತೆ ನೋಡಿಕೊಳ್ಳಬೇಕು. ಶಿಕ್ಷಕರಿಗೆ ಶೈಕ್ಷಣಿಕೇತರ ಕೆಲಸಗಳ ಹೊರೆಯಿಂದ ಸಂಪೂರ್ಣವಾಗಿ ಬಿಡುಗಡೆಗೊಳಿಸಬೇಕು. ಇಂಗ್ಲಿಷ್, ವಿಜ್ಞಾನ ಹಾಗೂ ಗಣಿತ ಬೋಧನೆಯನ್ನೂ, ಸಮಾಜ ವಿಜ್ಞಾನದ ಬೋಧನೆಯನ್ನೂ ಅತ್ಯುತ್ತಮವಾಗಿ ಮಾಡಲು ಬೇಕಾದ ತರಬೇತಿ ಹಾಗೂ ಅನುಕೂಲಗಳನ್ನು ಕಲ್ಪಿಸಬೇಕು. ಈ ಶಾಲೆಗಳಿಂದ ಹೊರಬರುವ ಮಕ್ಕಳು ರಾಷ್ಟ್ರ ನಿರ್ಮಾಣಕ್ಕೆ ಬೇಕಾದ ವ್ಯಕ್ತಿತ್ವವನ್ನೂ, ತರಬೇತಿಯನ್ನೂ ಹೊಂದಿರುವಂತೆ ಸಿದ್ಧರಾಗುತ್ತಾರೆ ಮತ್ತು ಯಾವ ಖಾಸಗಿ ಶಾಲೆಗಳಿಗೂ ಈ ಶಾಲೆಗಳೊಂದಿಗೆ ಸ್ಪರ್ಧಿಸುವುದು ಕಷ್ಟವಾಗುತ್ತದೆ.

4. ಭಾರತವನ್ನು ಐಕ್ಯಗೊಳಿಸಲು ಹಾಗೂ ಶಿಕ್ಷಣ ಗುಣಮಟ್ಟವನ್ನು ಉನ್ನತಗೊಳಿಸಲು ಪೂರಕವಾದ ನೆರೆಹೊರೆ ಶಿಕ್ಷಣವನ್ನು ಕಟ್ಟುನಿಟ್ಟಾಗಿ ಸರ್ಕಾರಿ, ಖಾಸಗಿ (ಅನುದಾನ ಸಹಿತ-ರಹಿತ) ಶಾಲೆಗಳಲ್ಲಿ ಪಾಲಿಸುವಂತಾಗಬೇಕು.

5. ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 75ರಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳೇ ಇರುವಂತೆ ತಿದ್ದುಪಡಿಯಾಗಬೇಕು. ಖಾಸಗಿ (ಅನುದಾನ ಸಹಿತ-ರಹಿತ) ಶಿಕ್ಷಣ ಸಂಸ್ಥೆಗಳು ಸರ್ಕಾರದ ಏಜೆನ್ಸಿಯಂತೆ ಕಾರ್‍ಯನಿರ್ವಹಿಸುವಂತಹ ಕಾನೂನು ರೂಪಿಸಲು ಒತ್ತಾಯಿಸಬೇಕು.

6. ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ -ಕಲಂ 29 (ಎಫ್)ನಲ್ಲಿ **medium of instructions shall, as for as practicable, be in child's mother tongue;** -ಎಂದಿದೆ. ಇಚ್ಛಾಶಕ್ತಿ ಇರುವ ಸರ್ಕಾರಕ್ಕೆ ಮಾತೃಭಾಷಾ ಮಾಧ್ಯಮವನ್ನು ಜಾರಿಗೆ ತರುವುದು **practical** ಆಗಬೇಕು. ಜೊತೆಗೆ **as for as practicable** ಅನ್ನುವುದನ್ನು ಕಿತ್ತು ಹಾಕಿ 'ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯನ್ನು ಕಡ್ಡಾಯ ಮಾಡುವ' ಕಾನೂನು ರೂಪಿಸಲು ನಮ್ಮ ಶಾಸಕಾಂಗವನ್ನು ಒತ್ತಾಯಿಸಬೇಕಾಗಿದೆ.

7. ಮಕ್ಕಳ ಮನಸ್ಸು ಆಕಾರ ಪಡೆಯುವ ಅಂಗನವಾಡಿಯಿಂದ ಐದನೇ ತರಗತಿಯವರೆಗೆ ಆಯಾ ರಾಜ್ಯದ ಮಾತೃಭಾಷೆಗಳಲ್ಲಿ ಅಂದರೆ ಮಗುವಿನೊಳಗೆ ಪರಿಸರದಿಂದ ಒಡಮೂಡಿ ಉಂಟಾದ ಸಹಜ ಭಾಷೆಗಳಲ್ಲಿ (ಉದಾ : ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಭಾಷೆಗಳಾದ ತುಳು, ಕೊಂಕಣಿ, ಮರಾಠಿ, ಉರ್ದು, ತಮಿಳು ಇತ್ಯಾದಿಗಳೊಡನೆ ಸಂವಿಧಾನ ಅಂಗೀಕರಿಸಲ್ಪಟ್ಟ ಭಾಷೆ ಕನ್ನಡವೂ ಸೇರಿದಂತೆ) ಶಿಕ್ಷಣ ಮಾಧ್ಯಮ; ಮುಂದಿನ ಪ್ರಾಥಮಿಕ ಶಿಕ್ಷಣದಲ್ಲಿ ಅಪೇಕ್ಷೆ ಪಟ್ಟವರಿಗೆ ಸಂವಿಧಾನದಿಂದ ಅಂಗೀಕರಿಸಲ್ಪಟ್ಟ ಭಾಷೆಗಳಲ್ಲಿ ಶಿಕ್ಷಣ ಮಾಧ್ಯಮ ಜಾರಿಯಾಗಲು ಒತ್ತಾಯಿಸಬೇಕು.

8. ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು. ಮುಚ್ಚಿರುವ ಶಾಲೆಗಳನ್ನು ಬೇರೆ ಉದ್ದೇಶಕ್ಕೆ ವಹಿಸಿಕೊಡುವುದು ಅಥವಾ ಪರಭಾರೆ ಮಾಡಬಾರದು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರಾಥಮಿಕ ಶಿಕ್ಷಣಕ್ಕೆ ಅನುಮತಿ ನೀಡದೇ ಸಾರ್ವಜನಿಕ ಶಾಲೆಗಳನ್ನೇ ಹೆಚ್ಚು ಮಾಡಬೇಕು.

9. ಭಾರತಕ್ಕೆ ಎಲ್ಲಾ ಜಾತಿ, ವರ್ಗ, ಧರ್ಮಗಳ ಮಕ್ಕಳು ಒಡನಾಡುವಂತಾಗುವುದೇ ಬಲುದೊಡ್ಡ ಶಿಕ್ಷಣವಾಗುವುದರಿಂದ, ಭಾರತದ ಐಕ್ಯತೆಯ ದೃಷ್ಟಿಯಿಂದ ಹಾಗೂ ಸಂವಿಧಾನದ ಆಶಯದಂತೆ ನಾಳಿನ ಭಾರತವನ್ನು ಕಟ್ಟಲೋಸುಗ ಸಮಾನ ಶಾಲಾ ವ್ಯವಸ್ಥೆ ಜಾರಿಗೆ ತರಲು ಕಾನೂನನ್ನು ತರಬೇಕು.

ಚಿತ್ರದುರ್ಗ: ಮಾಜಿ ಶಾಸಕ ಎಸ್.ಕೆ.ಬಿ.ಯ 'ಗೃಹ'ಭಂಗ

ಚಿತ್ರದುರ್ಗದ ಮಾಜಿ ಶಾಸಕ ಕಂ ಮುರುಘಾ ...ಠದ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವ ...ಜನ್‌ನ ಚೇಸ್ಟೆಗಳು ಮುಂದುವರೆಯುತ್ತಿವೆ. ಈಗದು ...ಸ್.ಜೆ.ಎಂ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ಹೊಸ ...ವಾಂತರಕ್ಕೆ ಕಾರಣವಾಗಿದೆ.


ಹತ್ತು-ಹನ್ನೆರಡು ವರ್ಷಗಳ ಹಿಂದೆ ಬಸವರಾಜನ್ ...ಮುರುಘಾ ಮಠದ ಏಕಚಕ್ರಾಧಿಪತಿಯಂತಿದ್ದಾಗ ...ಸ್.ಜೆ.ಎಂ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘವನ್ನು ...ಟ್ಟುಹಾಕಿದ್ದ. ಈ ಸಂಘ ಮಠದ ಶಿಕ್ಷಣ ಸಂಸ್ಥೆಯಾದ ...ಸ್.ಜೆ.ಎಂ. ನೌಕರರಿಗೆ ಮಾತ್ರ ಸಂಬಂಧಿಸಿದ್ದಾಗಿತ್ತು. ...ಕರರು ಸ್ವಂತದೊಂದು ಮನೆಕಟ್ಟಿಕೊಳ್ಳಲು ನೆರವಾಗುವುದೇ ...ದರ ಉದ್ದೇಶವಾಗಿತ್ತು.

ಈ ಸಂಘದ ಹೆಸರಲ್ಲಿ ಕೆಂಚನಕಟ್ಟೆ ಗ್ರಾಮದ ಸರ್ವೆ ... 4/2 ರಲ್ಲಿ 25 ಎಕರೆ ಜಮೀನು ಖರೀದಿಸಿ ಸಂಸ್ಥೆಯ ...ಕರರಿಗೆ ಮಾತ್ರ ನೀಡಬೇಕು ಎಂದು ನಿರ್ಧರಿಸಲಾಗಿತ್ತು. ...ಸ್.ಜೆ.ಎಂ. ಶಿಕ್ಷಣ ಸಂಸ್ಥೆಯ 705 ನೌಕರರು ತಲಾ ...00 ರೂಪಾಯಿ ಷೇರು ರೂಪದಲ್ಲಿ ಹಣ ನೀಡಿದ್ದರು. ...ಟ್ಟಿನಲ್ಲಿ ಎಸ್.ಜೆ.ಎಂ. ನೌಕರರ ಸಹಕಾರಿ ಸಂಘದ ...ವಹಾರ ಕೋಟಿಗಳ ಲೆಕ್ಕದಲ್ಲಿ ಶುರುವಾಗಿತ್ತು. ...ಸಜವಾಗಿಯೇ ಅದರ ಜನಕನಾಗಿದ್ದ ಬಸವರಾಜನ್‌ನೇ ...ದಕ್ಕೆ ತಾನೆ ಅಧ್ಯಕ್ಷ ಎಂದು ಘೋಷಿಸಿಕೊಂಡಿದ್ದ.


ಅಷ್ಟೊತ್ತಿಗಾಗಲೇ ವಿಧಾನಸಭಾ ಚುನಾವಣೆಯ ಹುಚ್ಚು ...ತ್ತಿಸಿಕೊಂಡಿದ್ದ ಬಸವರಾಜನ್ ಮಠದಿಂದ ಹೊರಬಂದಿದ್ದ ...ದರೂ ಎಸ್.ಜೆ.ಎಂ. ನೌಕರರ ಸಹಕಾರಿ ಸಂಘದ ...ಕ್ಕಾಣಿಯನ್ನು ಮಾತ್ರ ಬಿಟ್ಟಿರಲಿಲ್ಲ. ಯಾವಾಗ ...ಸವರಾಜನ್ ಮಠದಿಂದ ಹೊರಬಂದನೋ ಆಗಲೇ ...ಸ್.ಜೆ.ಎಂ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ...ೖಲಾ ಅನ್ನೂ ಬಸವರಾಜನ್ ಚಿತಾವಣೆಯಿಂದ ಬದಲಾಗಿ ...ಹೋಗಿತ್ತು. ಅಸಲಿಗೆ ಗೃಹ ನಿರ್ಮಾಣ ಸಹಕಾರ ಸಂಘದ ...ಕರರೆಲ್ಲ ಮಠದ ಪರವಾಗಿದ್ದವರೆ. ಹಾಗಾಗಿ ಸಂಘಕ್ಕೆ ...ನಾವಣೆ ನಡೆದರೆ ಮಠದಿಂದ ಹೊರಬಂದಿರುವ ತನ್ನನ್ನು ...ವರ್‍ಯಾರು ಚುನಾಯಿಸುವುದಿಲ್ಲ ಎನ್ನುವುದು ...ಸವರಾಜನ್‌ಗೆ ಖಾತರಿಯಾಗಿತ್ತು, ಹಾಗಾಗಿಯೇ ಸಂಘದ ...ಯಮಗಳನ್ನೇ ತಿದ್ದಿ ಎಸ್.ಜೆ.ಎಂ ನೌಕರರಲ್ಲದವರನ್ನೂ ...ಘದ ಸದಸ್ಯರನ್ನಾಗಿ ನೋಂದಾಯಿಸಿಕೊಂಡಿದ್ದ. ಹಾಗೇ ...ದಸ್ಯರಾದವರೆಲ್ಲ ಬಸವರಾಜನ್ ಚೇಲಾಗಳು ಎಂಬುದನ್ನು ...ಡಿಸಿ ಹೇಳುವ ಅಗತ್ಯವಿಲ್ಲ. ಹೀಗೆ ಮಾಡದಿದ್ದರೆ ಸಂಘ ... ತಪ್ಪುವ ಭೀತಿ ಒಂದುಕಡೆಗಿದ್ದರೆ, ಆಗಲೇ ನಿವೇಶನ ...ಂಚಿಕೆಯಲ್ಲಾಗಿದ್ದ ಕೋಟ್ಯಾಂತರ ರೂಪಾಯಿ ಅವ್ಯವಹಾರ ...ಯಲಾಗುವ ಭಯ ಮತ್ತೊಂದು ಕಡೆ ಬಸವರಾಜನ್‌ಗಿತ್ತು.


... ಸಂಘದ ಬೈಲಾ ತಿದ್ದಿದರ ವಿರುದ್ಧ ನೌಕರರು ...ಂಗಳೂರಿನ ಜಾಯಿಂಟ್ ರಿಜಿಸ್ಟ್ರಾರ್ ನ್ಯಾಯಾಲಯದಲ್ಲಿ ...ವೆ ಹೂಡಿದ್ದರು. ದುರದೃಷ್ಟವಶಾತ್ ತೀರ್ಪು ...ಸವರಾಜನ್ ಪರವಾಗೇ ಬಂದಿತ್ತು. ಹೈಕೋರ್ಟ್‌ಗೆ ...ಲ್ಮನವಿ ಸಲ್ಲಿಸಿದಾಗಲೂ ನ್ಯಾಯಾಲಯ ಹಳೇ ತೀರ್ಪನ್ನೇ ...ತ್ತಿ ಹಿಡಿದಿತ್ತಾದರೂ ಸಂಘದ ಹಳೆಯ ಸದಸ್ಯರ ಹಿರಿತನ ...ಪಾಡಬೇಕು ಮತ್ತು ನಿವೇಶನ ಹಂಚಿಕೆಯಲ್ಲಿ ಅವರಿಗೆ ...ಮೊದಲ ಆದ್ಯತೆ ನೀಡಬೇಕು ಎನ್ನುವ ಆದೇಶ ಹೊರಡಿಸಿತ್ತು, ಆದರೆ ಬಸವರಾಜನ್ ಅದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಸರ್ವಾಧಿಕಾರಿಯಂತೆ ವರ್ತಿಸತೊಡಗಿದ್ದ.

2008ರಲ್ಲಿ ಬಸವರಾಜನ್ ಜೆಡಿಎಸ್‌ನಿಂದ ಚಿತ್ರದುರ್ಗ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಶಾಸಕನಾದ ಮೇಲಂತೂ ಆತನ ಉಪಟಳ ಹದ್ದುಮೀರಿ ಹೋಗಿತ್ತು. ಶಾಸಕರಾದವರು ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರಕ್ಕೂ ಸದಸ್ಯರಾಗುವುದು ವಾಡಿಕೆ. ಹಾಗಾದದ್ದೇ ತಡ ಅಭಿವೃದ್ಧಿ ಪ್ರಾಧಿಕಾರದ ನೀತಿ ನಿಯಮಾವಳಿಯನ್ನು ಗಾಳಿಗೆ ತೂರಿದ. ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಖಾಸಗಿ ಬಡಾವಣೆಗಳು ತಲೆಯೆತ್ತಿದರೂ ಅದು ನಾಗರಿಕರ ವಾಸಕ್ಕೆ ಯೋಗ್ಯವಾಗಿರಬೇಕು; ವಿದ್ಯುತ್, ಒಳಚರಂಡಿ, ರಸ್ತೆ ಪಾರ್ಕು, ಶಾಲೆ, ನೀರು ಅಂತೆಲ್ಲ ಸಕಲ ವ್ಯವಸ್ಥೆಗಳಿರಬೇಕು. ಆದರೆ ಶಾಸಕನಾಗಿದ್ದ ಬಸವರಾಜನ್ ತನ್ನ ಕಪಿಮುಷ್ಟಿಯಲ್ಲಿದ್ದ ಎಸ್.ಜೆ.ಎಂ. ನೌಕರರ ಗೃಹನಿರ್ಮಾಣ ಸಹಕಾರ ಸಂಘದ 25 ಎಕರೆ ವಿಸ್ತಾರದ ಅದ್ವಾನದ ಬಡಾವಣೆಯ ಸೈಟುಗಳ ಮಾರಾಟಕ್ಕೆ ಅನುಮತಿ ಪಡಕೊಂಡು ಬೇಕಾಬಿಟ್ಟಿ ವ್ಯವಹಾರಕ್ಕಿಳಿದಿದ್ದ. ಹಾಗೆ ನಿವೇಶನ ಮಾರಿದ್ದರಿಂದ ಬಂದ ಕೋಟ್ಯಂತರ ರೂಪಾಯಿ ಏನಾಯಿತೆಂಬುದೇ ಚಿದಂಬರ ರಹಸ್ಯವಾಗಿದೆ! ಸಾಮಾನ್ಯವಾಗಿ ಒಂದು ಸಂಘ ಅಂತಂದ ಮೇಲೆ ಅದಕ್ಕೆ ಅಧ್ಯಕ್ಷನಿದ್ದಂತೆಯೇ ಕಾರ್ಯದರ್ಶಿಯೂ ಇರಬೇಕು. ಆ ಹುದ್ದೆ ಕೂಡಾ ಜವಾಬ್ದಾರಿಯುತವಾದದ್ದು. ಆದರೆ ಬಸವರಾಜನ್‌ನ ಗೃಹ ನಿರ್ಮಾಣ ಸಂಘಕ್ಕೆ ಕಾರ್ಯದರ್ಶಿ ಯಾರೆಂಬುದೇ ಗೊತ್ತಿಲ್ಲ. ನೆಪಕ್ಕೆ ದೇವರಾಜ ಎನ್ನುವ ಬಸವರಾಜನ್ ಚೇಲಾ ಒಬ್ಬನನ್ನು ಕಾರ್ಯದರ್ಶಿ ಎಂಬುದಾಗಿ ಹೇಳಲಾಗುತ್ತಿದೆಯಾದರೂ ಈ ಕುರಿತು ಅಧಿಕೃತ ದಾಖಲೆಗಳೇ ಇಲ್ಲ. ಅಂತಿದ್ದರೂ ಈ ಅನಾಮಧೇಯ ಕಾರ್ಯದರ್ಶಿಯ ಹೆಸರಲ್ಲೇ ನಿವೇಶನಗಳ ಮಾರಾಟ ನಡೆದಿದೆ. ಹೈಕೋರ್ಟ್ ಸ್ಪಷ್ಟವಾಗಿ ನೀಡಿದ್ದ ನಿರ್ದೇಶನವನ್ನೇ ಉಲ್ಲಂಘಿಸಿ ಎಸ್.ಜೆ.ಎಂ ನೌಕರರ ಹಿರಿತನವನ್ನು ಕಡೆಗಣಿಸಿ ನೌಕರರಲ್ಲದವರಿಗೇ ಸೈಟು ಬಿಕರಿ ಮಾಡತೊಡಗಿದ್ದಾನೆ. ತನ್ನ ಬೆಂಬಲಿಗರಾದ 170 ಜನ ಸದಸ್ಯರಿಗೆ ಕಾರ್ಯದರ್ಶಿಯೇ ಅಲ್ಲದ ಕಾರ್ಯದರ್ಶಿ ದೇವರಾಜನಿಂದ ನಿವೇಶನ ಮಾರಾಟ ಮತ್ತು ರಿಜಿಸ್ಟ್ರೇಷನ್‌ಗೂ ಮುಂದಾಗಿದ್ದ.


ಎಸ್.ಕೆ. ಬಸವರಾಜನ್




ಗುರುನಾಥ ತೊಂಡುಮಾಲ್


ಖಾದರ್

ಬರುವ 2015 ಫೆಬ್ರವರಿ 21ಕ್ಕೆ ಸಂಘದ ಚುನಾವಣೆಯಿದೆ. ಜನವರಿಯಿಂದಲೇ ನೀತಿಸಂಹಿತೆ ಜಾರಿಯಲ್ಲಿದ್ದರೂ ನಿವೇಶನಗಳ ಮಾರಾಟ ಮಾತ್ರ ಎಗ್ಗಿಲ್ಲದಂತೆ ನಡೆಯುತ್ತಿದೆ. ಜನವರಿ 1 ರಿಂದ 4ರ ನಡುವೆಯೇ ಬರೋಬ್ಬರಿ 119 ನಿವೇಶನಗಳು ರಿಜಿಸ್ಟ್ರೇಷನ್ ಆಗಿವೆ (ನೀತಿ ಸಂಹಿತೆಯ ನಡುವೆಯೂ). ಹದಿನೈದು ವರ್ಷಗಳ ಹಿಂದಿನ ಹಿರಿಯ ಸದಸ್ಯರನ್ನು ಪರಿಗಣಿಸದೆ ನಿನ್ನೆ-ಮೊನ್ನೆ ಸದಸ್ಯರಾದವರಿಗೆ ದುಬಾರಿ ಬೆಲೆಯ ನಿವೇಶನಗಳನ್ನು ಕನಿಷ್ಠ ಬೆಲೆಗೆ ನೀಡಿರುವುದರ ಹಿಂದೆ ಚುನಾವಣೆಯ ಹಕೀಕತ್ತು ಎದ್ದು ಕಾಣುತ್ತದೆ. ಕೆಂಚನಕಟ್ಟೆ ವ್ಯಾಪ್ತಿಯಲ್ಲಿ ಸರಕಾರದ ದರವೇ (ಎಸ್.ಆರ್) ಚದರ ಅಡಿಗೆ 600 ನೂರು ರೂಪಾಯಿ ಇದೆ. ಇನ್ನು ಮಾರ್ಕೆಟ್ ರೇಟ್ 1000 ರೂಪಾಯಿಯನ್ನೂ ದಾಟುತ್ತದೆ. ಅಂತಹದ್ದರಲ್ಲಿ ಕೇವಲ 100 ರೂಪಾಯಿ ಚದರಡಿಯಂತೆ 119 ಸೈಟುಗಳನ್ನು ಬಸವರಾಜನ್ ಮಾರಾಟ ಮಾಡಿರೋದು ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಎಂಬಿದರಲ್ಲಿ ಯಾವ ಅನುಮಾನವೂ ಇಲ್ಲ.

ಚುನಾವಣೆ ಹತ್ತಿರ ಸಮೀಪಿಸುತ್ತಿದ್ದಂತೆಯೇ ಬಸವರಾಜನ್, ಎಸ್.ಜೆ.ಎಂ ನೈಜ ನೌಕರರನ್ನೇ ಮತದಾನದ ಹಕ್ಕಿನಿಂದ ದೂರವಿಡುವ ಹುನ್ನಾರ ನಡೆಸಿದ್ದಾನೆ. ಸಂಘದ 705 ಜನ ಸದಸ್ಯರ ಪೈಕಿ 575 ಜನ ಮೂಲ ಸದಸ್ಯರುಗಳು ಸುಸ್ತಿದಾರರು ಅಂತಾ ಸಂಘದ ಬೈಲಾದಲ್ಲಿ ಬರೆಸಿ ಅವರು ಮತದಾನದಲ್ಲಿ ಭಾಗವಹಿಸದಂತೆ ನೋಡಿಕೊಂಡಿದ್ದಾನೆ. ಈ 575 ಜನ ಸದಸ್ಯರು ಬಸವರಾಜನ್ ಆಡಳಿತಾವಧಿಯಲ್ಲಿ ಕಷ್ಟ ಅನುಭವಿಸಿದವರೇ. ಅಂಥವರನ್ನೇ ಚುನಾವಣಾ ಪ್ರಕ್ರಿಯೆಯಿಂದ ಹೊರಗಿಟ್ಟರೆ ಮತ್ತೆ ತಾನೇ ಸಂಘದ ಅಧ್ಯಕ್ಷನಾಗಬಹುದು ಎನ್ನುವ ಮಹತ್ವಾಕಾಂಕ್ಷೆ ಬಸವರಾಜನ್‌ನದು. ಫೆಬ್ರವರಿ 21 ದೂರವೇನೂ ಇಲ್ಲ, ಒಂದೊಮ್ಮೆ ಸಂಘದಿಂದ ಸುಸ್ತಿದಾರರು ಅಂತ ಗುರುತಿಸಲ್ಪಟ್ಟರೆ ಅವರಿಗೆಲ್ಲಾ ನೋಟಿಸ್ ನೀಡಿ ಕೊನೇ ಅವಕಾಶ ಕೊಡಬೇಕು. ಚುನಾವಣೆ ಹತ್ತಿರ ಬಂದರೂ ಈ ಕುರಿತು ಅವರ್‍ಯಾರಿಗೂ ನೋಟಿಸ್ ತಲುಪಿಲ್ಲ. ಸ್ವಂತ ಕಟ್ಟಡವೇ ಇಲ್ಲದ ಸಂಘ ತತ್ಕಾಲಕ್ಕೆ ಬಸವರಾಜನ್ ಮನೆಯಲ್ಲೇ ಕಚೇರಿ ತೆರೆದಿಟ್ಟುಕೊಂಡಿರುವುದರಿಂದ ಅವನ ಮುಖ ನೋಡಲೂ ಇಷ್ಟವಿಲ್ಲದ ಇವರ್‍ಯಾರೂ ಅತ್ತ ಸುಳಿದು ವಿಚಾರಿಸಲಾರರು ಎಂಬುದು ಬಸವರಾಜನ್‌ಗೆ ಖಾತ್ರಿ ಯಾಗಿದೆ. ಹಾಗಾಗಿಯೇ 575 ಜನ ಸುಸ್ತಿದಾರರ ಹೆಸರನ್ನು ಕಚೇರಿಯ ಗೋಡೆಗೆ ಅರ್ಥಾತ್ ತನ್ನ ಮನೆಯ ಗೋಡೆಗೆ ಅಂಟಿಸಿಕೊಂಡು ಬಾಧಿತರ ಗಮನಕ್ಕೇ ಬಾರದಂತೆ 'ಕರ್ತವ್ಯ' (?) ನಿರ್ವಹಿಸಿದ್ದಾನೆ.

ಇಲ್ಲಿ ಮತ್ತೊಂದು ಸಂಗತಿಯಿದೆ. ಅದೇನೆಂದರೆ 2006ರಿಂದ ಇದುವರೆಗೂ ಎಸ್.ಜೆ.ಎಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಆಡಿಟ್ ನಡೆದೇ ಇಲ್ಲ, ಐದು ವರ್ಷಗಳಿಂದ ಸರ್ವಸದಸ್ಯರ ಮೀಟಿಂಗ್ ಕೂಡಾ ಜರುಗಿಲ್ಲ, ಆಡಳಿತಯಂತ್ರ ಸಂಪೂರ್ಣವಾಗಿ ಬಸವರಾಜನ್ ಆಸನದ ಕೆಳಗೆ ನರಳಾಡುತ್ತಿದೆ. ಅಂಥದ್ದರಲ್ಲಿ ಆ ಸಂಘದ ಚುನಾವಣೆ ನಿಷ್ಪಕ್ಷಪಾತವಾಗಿ ನಡೆಯಲು ಸಾಧ್ಯವೇ? ನೂರಾರು ಕೋಟಿ ಅವ್ಯವಹಾರ ನಡೆದಿದ್ದರೂ ಸಹಕಾರ ಇಲಾಖೆ ತನಿಖೆ ನಡೆಸದಿರುವುದು ಬಸವರಾಜನ್‌ಗೆ ಮತ್ತಷ್ಟು ನೆರವಾಗಿದೆ.

ನಿವೇಶನ ಮಾರಾಟದಿಂದ ಬಂದ ನೂರಾರು ಕೋಟಿ ಹಣ ಇತ್ತ ಸಂಘದ ಅಕೌಂಟಿನಲ್ಲೂ ಇಲ್ಲ, ಅತ್ತ ಕಾರ್ಯದರ್ಶಿ ದೇವರಾಜನ ಅಕೌಂಟಿನಲ್ಲೂ ಜಮೆ ಆಗಿಲ್ಲ, ಹಾಗಿದ್ದರೆ ಹಣವೆಲ್ಲ ಎಲ್ಲಿ ಹೋಯಿತು? ಈ ಪ್ರಶ್ನೆ ಕೇಳಬಹುದಾಗಿದ್ದ ಸದಸ್ಯರಿಗೆಲ್ಲ ಬಸವರಾಜನ್ 'ಸುಸ್ತಿದಾರರು' ಎಂಬ ಲೇಬಲ್ ಅಂಟಿಸಿ ಸಂಘದಿಂದಲೇ ಹೊರಹಾಕುವ ತಂತ್ರ ಹೆಣೆದಿದ್ದಾನೆ. ಬಸವರಾಜನ್‌ನ ಇಷ್ಟೆಲ್ಲಾ ಹಗರಣಗಳ ಹಿಂದಿನ ಮಾಸ್ಟರ್ ಮೈಂಡ್ ಗುರುನಾಥ ತೊಂಡುಮಾಲ್ ಎನ್ನುವ ದಗಲುಬಾಜಿ. ಈತ ಬೇರಾರು ಅಲ್ಲ ಬಸವರಾಜನ್‌ನ ಅಪ್ಪಟ ಆಪ್ತ ಕಾರ್ಯದರ್ಶಿ. ಮನೆಮುರುಕ ಐಡಿಯಾಗಳ ಜನಕನೇ ಈತ. ಬಸವರಾಜನ್ ನಡೆಸಿರುವ ಎಲ್ಲ ಅವ್ಯವಹಾರಗಳ ಹಿಂದೆ ಈ ಗುರುನಾಥನ ಹೆಜ್ಜೆ ಗುರುತುಗಳಿವೆ. ಜೊತೆಗೆ ಬಸವರಾಜನ್‌ನ ಹೆಂಡತಿ ಸೌಭಾಗ್ಯ ಕೂಡ ಗಂಡನನ್ನು ಅಡ್ನಾಡಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾಳೆ. ಹಾಲಿ ನಗರಸಭಾ ಉಪಾಧ್ಯಕ್ಷ ಎ.ಕೆ.ಖಾದರ್ ಕೂಡ ಬಸವರಾಜನ್‌ನ ಕೃತ್ಯಗಳಿಗೆ ಸಾಥ್ ನೀಡುತ್ತಲೇ ಬಂದಿದ್ದಾನೆ.

ಒಂದೊಮ್ಮೆ ಲೋಕಾಯುಕ್ತರವರೇನಾದರು ಸಂಘದ ಮೇಲೆ ಮುರಕೊಂಡು ಬಿದ್ದರೆ ಬಸವರಾಜನ್ ತನ್ನ ಪಟಾಲಂ ಸಮೇತ ಕತ್ತಲ ಕೋಣೆ ಸೇರುವುದು ಖಂಡಿತ. ಅದಕ್ಕೂ ಮುನ್ನ ಆತ ಕುತಂತ್ರದಿಂದ ನಡೆಸುತ್ತಿರುವ ಸಂಘದ ಚುನಾವಣೆಗೆ ಮಠದ 'ಪ್ರಜ್ಞೆ'ಗಳು ಪ್ರತ್ಯುತ್ತರ ನೀಡಲೇಬೇಕಿದೆ.

● ಟಿ.ಎನ್.ಷಣ್ಮುಖ

... 10. ನಮ್ಮ ಒಟ್ಟಾರೆ ಅಭಿವೃದ್ಧಿ ಮಾದರಿಯಲ್ಲೇ ...ರುವ ಸಮಸ್ಯೆಯು ಕನ್ನಡವನ್ನು ದುರ್ಬಲಗೊಳಿಸುತ್ತದೆ ...ಂಬುದನ್ನೂ ಮನಗಾಣಬೇಕು. ಇವೆಲ್ಲವೂ ಒಂದಕ್ಕೊಂದು ...ಬಂಧವಿರುವ ಅಂಶಗಳಾಗಿದ್ದು, ಆ ನಿಟ್ಟಿನಲ್ಲಿ ನಡೆಯುವ ...ಳವಳಿಗಳು ಸರ್ಕಾರವನ್ನೂ, ಸಮಾಜವನ್ನೂ ಎಚ್ಚರಿಸಬಲ್ಲವು. ...ಂದರೆ, ಸಮಾನ ಶಿಕ್ಷಣ ನೀತಿಗಾಗಿ, ಸಮಾನ ...ಲಾಸೀತಿಗಾಗಿ ನಡೆಯುವ ಚಳವಳಿಗಳು ಸಮಾಜದಲ್ಲಿ ...ಮಾನತೆಯನ್ನು ತರುವ ಚಳವಳಿಗಳೊಂದಿಗೆ ...ಸೆದುಕೊಳ್ಳಬೇಕು; ಪರಸ್ಪರ ಬಲವರ್ಧನೆಗೆ ಕೆಲಸ ...ಾಡಬೇಕು.

ಇದಲ್ಲದೇ, ಇನ್ಯಾವ ಅಡ್ಡ ಮಾರ್ಗಗಳೂ ಶಿಕ್ಷಣವನ್ನೂ ...ಳಿಸುವುದಿಲ್ಲ; ಮಾತೃಭಾಷೆಯನ್ನೂ ಉಳಿಸುವುದಿಲ್ಲ; ...ನ್ನಡವನ್ನೂ ಉಳಿಸುವುದಿಲ್ಲ. ಈ ನಿಟ್ಟಿನಲ್ಲಿ ಕೆಲಸ ಮಾಡಲು ...ುಂದಾಗುವುದು ಈ ಸಾಹಿತ್ಯ ಸಮ್ಮೇಳನದಿಂದಲೇ ...ರಂಭವಾಗಬೇಕು. ಇಲ್ಲದಿದ್ದರೆ ದೇವನೂರ ಮಹಾದೇವರು ...ತ್ತಿರುವ ಪ್ರಶ್ನೆಗಳಿಗೆ ಸಾಹಿತ್ಯ ಪರಿಷತ್ತು, ಸಮ್ಮೇಳನ ...ತ್ತು ಕನ್ನಡದ ಪ್ರಜ್ಞಾವಂತರು ಸ್ಪಂದಿಸಿದಂತಾಗುವುದಿಲ್ಲ.

ಈ ಮೇಲ್ಕಂಡ ಅಂಶಗಳನ್ನು ಸಮ್ಮೇಳನದ ...ರ್ಣಯಗಳಾಗಿ ಸ್ವೀಕರಿಸಿ, ಸರ್ಕಾರದ ಮುಂದೆ ಇಟ್ಟು ...ೋರಾಟವನ್ನು ರೂಪಿಸುವ ಕಡೆಯ ನಿರ್ಣಯವನ್ನೂ ...ದುಕೊಳ್ಳಬೇಕೆಂದು ನಾವೆಲ್ಲರೂ ಒತ್ತಾಯಿಸುತ್ತೇವೆ.

ಸಮಾನ ಶಿಕ್ಷಣದ ಹೋರಾಟವನ್ನೂ, ಕನ್ನಡದ ಹಾಗೂ ...ಭಾಷೆಗಳ ಉಳಿವಿನ ಹೋರಾಟವನ್ನೂ ಬೆಸೆಯೋಣ! ...ು ಮಾತ್ರವೇ ನಮ್ಮೆಲ್ಲರನ್ನೂ ಗುರಿ ಮುಟ್ಟಿಸುತ್ತದೆ.

●

ಲಕ್ಕಿ ಆಲಿ: ಖ್ಯಾತ ಗಾಯಕ ಮಹಾನ್ ವಂಚಕ!

ಖ್ಯಾತ ಬಾಲಿವುಡ್ ನಟ, ಗಾಯಕ ಲಕ್ಕಿ ಆಲಿಯ 2000 ಕೋಟಿ ರೂಪಾಯಿಗಳ ಬೆಲೆಬಾಳುವ ಬೆಂಗಳೂರಿನ ಸೊತ್ತಿನ ಮೇಲೆ ಮುಂಬಾಯಿ ಅಂಡರ್‌ವರ್ಲ್ಡ್‌ನ ಕಣ್ಣು ಬಿದ್ದಿದೆಯೇ? ಮುಂಬಯಿ ಡಾನ್‌ಗಳು ಬೆಂಗಳೂರಿನ ಮುಸ್ಲಿಂ ರೌಡಿಗಳನ್ನು ಛೂ ಬಿಟ್ಟು ಲಕ್ಕಿ ಆಲಿಯನ್ನು ಮುಗಿಸಲು ಸುಪಾರಿ ಕೊಟ್ಟಿದ್ದಾರಾ?

ಕಳೆದ ಒಂದು ತಿಂಗಳಿನಿಂದೀಚೆಗೆ ದೇಶದ ನಾನಾ ನ್ಯೂಸ್ ಚಾನಲ್ಲುಗಳೂ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದ ಇಂಗ್ಲಿಷ್ ಪತ್ರಿಕೆಗಳಲ್ಲೂ ಸುದ್ದಿಯಾದ ಗಾಯಕ ಲಕ್ಕಿ ಆಲಿಯ ಹತ್ಯಾಯತ್ನದ ಕತೆಗೆ ಬೇರೆಯದೇ ಒಂದು ಮುಖವಿರುವಂತಿದೆ!

ತನಗೆ ಬೆಂಗಳೂರಿನಲ್ಲಿ 2000 ಕೋಟಿ ರೂಪಾಯಿಗಳ ಆಸ್ತಿಯಿದೆ. ಅದನ್ನು ಲಪಟಾಯಿಸಲು ಕೆಲ ಬಿಲ್ಡರ್‌ಗಳು ಸೇರಿಕೊಂಡು ಮುಂಬಯಿ ಶೂಟರ್‌ಗಳಿಗೆ ಸುಪಾರಿ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿರುವ ನನ್ನ ತಂದೆಯ ಸಮಾಧಿ ಸುತ್ತಲ ಖಾಲಿ ಜಾಗಕ್ಕೆ ನಾನು ಕಾಲಿಟ್ಟರೆ ಸಾಕು ಅಲ್ಲಿ ಹೊಂಚು ಹಾಕುತ್ತಿರುವ ಹಂತಕರು ನನ್ನನ್ನು ಶೂಟ್ ಮಾಡಿ ಕೊಲ್ಲುತ್ತಾರೆ. ನನಗೆ ರಕ್ಷಣೆ ಬೇಕು. ಆಸಿಫ್ ಇಕ್ಬಾಲ್ ಎಂಬ ಬೆಂಗಳೂರಿನ ಮುಸ್ಲಿಂ ರೌಡಿಯೊಬ್ಬ ನನ್ನನ್ನು ಕೊಲ್ಲಲು ಎರಡು ಕಾರುಗಳಲ್ಲಿ ರೌಡಿಗಳನ್ನು ಕಳಿಸಿದ್ದ. ಅದೃಷ್ಟವಶಾತ್ ಆತನ ಹತ್ಯಾ ಯತ್ನದಿಂದ ನಾನು ಪ್ರಾಣ ಉಳಿಸಿಕೊಂಡೆ. ಈ ಆಸಿಫ್ ಇಕ್ಬಾಲ್‌ಗೆ ಬೆಂಗಳೂರಿನ ದೈತ್ಯ ಬಿಲ್ಡರುಗಳಾದ ದಯಾನಂದ್ ಪೈ ಮತ್ತು ಸತೀಶ್ ಪೈಗಳ ಕುಮ್ಮಕ್ಕಿದೆ. ಇವತ್ತಲ್ಲ ನಾಳೆ ಈ ಗ್ಯಾಂಗ್ ಆಸ್ತಿಗಾಗಿ ನನ್ನನ್ನು ಮುಗಿಸುವುದು ಶತಸ್ಸಿದ್ಧ...?

ಇದು ಮೊನ್ನೆಯಷ್ಟೇ ಬಾಲಿವುಡ್ ನಟ, ಗಾಯಕ ಲಕ್ಕಿ ಆಲಿ ಯಲಹಂಕ ಪೊಲೀಸ್ ಠಾಣೆಗೆ ಕೊಟ್ಟ ದೂರಿನ ಸಾರಾಂಶ. ಲಕ್ಕಿ ಆಲಿ ಬೆಂಗಳೂರಿನ ಜನಕ್ಕೆ ಅಪರಿಚಿತನಿರಬಹುದು. ಕರ್ನಾಟಕದ ಮಟ್ಟಿಗೆ ಆ ಹೆಸರಿಗೆ ಅಂಥಾ ಮಹತ್ವವೂ ಇಲ್ಲದಿರಬಹುದು. ಆದರೆ ಬಾಲಿವುಡ್ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಲಕ್ಕಿ ಆಲಿಯೆಂದರೆ ಲೆಕ್ಕಾಚಾರವೇ ಬೇರೆಯಾಗುತ್ತದೆ. ಕಹೋ ನಾ ಪ್ಯಾರಾ ಹೈ ಚಿತ್ರದ 'ಜಿಸ್ ಫಲ್ ಮೆ ಜೀನಾ....' ಹಾಡೊಂದರಿಂದಲೇ ರಾತ್ರೋರಾತ್ರಿ ದೇಶಾದ್ಯಂತ ಖ್ಯಾತಿಗೆ ಬಂದ ಗಾಯಕ ಲಕ್ಕಿ ಆಲಿ ಮೂಲತಃ ಬೆಂಗಳೂರಿಗನೆಂಬುದು ಹೇಗೆ ಇಲ್ಲಿನ ಜನಕ್ಕೆ ಗೊತ್ತಿಲ್ಲವೋ ಹಾಗೇ ಒಂದಾನೊಂದು ಕಾಲಕ್ಕೆ ಹಿಂದಿ ಸಿನಿಮಾಗಳಲ್ಲಿ ಹಾಸ್ಯ ನಟನೆಂದೇ ಖ್ಯಾತಿವೆತ್ತ ಕಿಂಗ್ ಆಫ್ ಕಾಮಿಡಿ ಬಿರುದಾಂಕಿತ ಮೆಹಮೂದ್‌ಗೆ ಈತ ಸ್ವಂತ ಮಗನೆಂಬುದೂ ಗೊತ್ತಿಲ್ಲ.

ಮೆಹಮೂದ್!

ಹಿಂದಿ ನಟ ಮೆಹಮೂದ್ 2004ರಲ್ಲಿ ತೀರಿಕೊಂಡಾಗ ಯಲಹಂಕ ಸಮೀಪದ ಅವರ ವಿಶಾಲ ಫಾರ್ಮ್‌ಹೌಸ್‌ನಲ್ಲೇ ಮಣ್ಣು ಮಾಡಲಾಯ್ತು. ಆ ಕಾಲಕ್ಕೇ ಹಿಂದಿ ಚಿತ್ರರಂಗದ ಪಾಲಿಗೆ ಕಿಂಗ್ ಆಫ್ ಕಾಮಿಡಿಯಾಗಿದ್ದ ಮೆಹಮೂದ್‌ಗೆ ಇಬ್ಬರು ಪತ್ನಿಯರು ಏಳು ಮಕ್ಕಳು. ಮೊದಲನೇ ಪತ್ನಿ ಮಧು ಆ ಕಾಲದ ಖ್ಯಾತ ನಟಿ ಮೀನಾಕುಮಾರಿಯ ಖಾಸಾ ತಂಗಿ. ಆಕೆಯ ನಾಲ್ಕು ಮಕ್ಕಳಲ್ಲಿ ಲಕ್ಕಿ ಆಲಿ ಎರಡನೆಯವನು. ಮಾಸೂದ್ ಆಲಿ, ಲಕ್ಕಿ ಆಲಿ, ಮಾಸೂಮ್ ಆಲಿ, ಮ್ಯಾಕಿ ಆಲಿ ಹೀಗೆ ಈ ನಾಲ್ವರಲ್ಲಿ ಅಂಗವಿಕಲನಾಗಿದ್ದ ಮ್ಯಾಕಿ ಆಲಿ 2002ರಲ್ಲಿ ಅಂದರೆ ತಂದೆ ಮೆಹಮೂದ್ ಬದುಕಿದ್ದಾಗಲೇ ತೀರಿಕೊಂಡರೆ ಮಾಸೂಮ್ ಆಲಿ ಸದ್ಯ ಅಮೆರಿಕದಲ್ಲಿದ್ದಾನೆ.

ಮೆಹಮೂದ್‌ನ 2ನೇ ಪತ್ನಿಯ ಹೆಸರು ಟ್ರೇಸಿ. ಈಕೆ ಅಮೆರಿಕನ್. ತನ್ನ ಮಕ್ಕಳಾದ ಮನ್ಸೂರ್ ಆಲಿ, ಮಂಜೂರ್ ಆಲಿ ಮತ್ತು ಮಗಳು ಜಿಮ್ಮಿ ಆಲಿ ಜೊತೆ ಈಕೆ ಅಮೆರಿಕದಲ್ಲಿದ್ದಾಳೆ. ತನ್ನ ಸಿನಿಮಾ ಬದುಕಿನ ಉತ್ತುಂಗದಲ್ಲಿದ್ದಾಗ ಮೆಹಮೂದ್ ಖರೀದಿಸಿದ್ದ 187 ಎಕರೆಗಳ ವಿಶಾಲ ಫಾರ್ಮ್‌ಹೌಸ್ ಇರುವುದು ಯಲಹಂಕ ಸಮೀಪದ ಕೆಂಚೇನಹಳ್ಳಿ ಮತ್ತು ವಾಸುದೇವಪುರ ಗ್ರಾಮಗಳ ಮಧ್ಯೆ. ವಯಸ್ಸಾದಂತೆ ಹಿಂದಿ ಚಿತ್ರರಂಗದಲ್ಲಿ ಮೆಹಮೂದ್ ಬೇಡಿಕೆ ಕುಸಿಯಿತು. ಅರ್ಕಾಟ್ ನವಾಬನ ವಂಶಜ ಮೆಹಮೂದ್ ತನ್ನ ಬದುಕಿನ ಕೊನೆಗಾಲದಲ್ಲಿ ಅದೆಂಥಾ ದರಿದ್ರ ಸ್ಥಿತಿಗೆ ಬಂದಿದ್ದರೆಂದರೆ ಇದ್ದ 187 ಎಕರೆಗಳಷ್ಟು ಭೂಮಿಯ ಪೈಕಿ 184 ಎಕರೆಗಳ ಸೊತ್ತಿಗೆ ಬ್ಯಾಂಕ್ ಸಾಲದ ಜಪ್ತಿ ನೋಟಿಸು ಬಂದಿತ್ತು. ಹಾಗೆ ಬ್ಯಾಂಕ್ ಸಾಲಕ್ಕೆ ಹರಾಜಾದ ಈ 184 ಎಕರೆ ಸೊತ್ತನ್ನು ಹರಾಜು ಕೂಗಿ ಖರೀದಿಸಿದ್ದು ಆ ಕಾಲದ ರಿಯಲ್ ಎಸ್ಟೇಟ್ ದೈತ್ಯರಾದ ದಯಾನಂದ ಪೈ ಮತ್ತು ಸತೀಶ್ ಪೈ.

ಲಕ್ಕಿಯ ಗಿಮ್ಮಿಕ್

ಸಾಯುವ ಮುನ್ನ ಮೆಹಮೂದ್ ದಯಾನಂದ್ ಪೈ ಕರೆಸಿಕೊಂಡು 'ನನ್ನೆಲ್ಲಾ ಆಸ್ತಿಯೇನೋ ನಿಮ್ಮ ಪಾಲಾಯಿತು. ನನ್ನ ಏಳು ಮಂದಿ ಮಕ್ಕಳ ಮೇಲೆ ದಯೆ ತೋರಿಸಿ. ಏನಾದರೂ ಸಹಾಯ ಮಾಡಿ...' ಎಂದು ಕಣ್ಣೀರಿಟ್ಟಿದ್ದ. ಅದಕ್ಕೆ ಮರುಗಿದ ಪೈಗಳು ಪ್ರತಿ ಮಕ್ಕಳಿಗೂ ತಲಾ ಮೂರು ಎಕರೆಯಂತೆ ಒಟ್ಟು 21 ಎಕರೆ ಬಿಟ್ಟುಕೊಟ್ಟರು. ಆದರೆ ಲಕ್ಕಿ ಆಲಿ ಮಾತ್ರ ಕ್ಯಾತೆ ತೆಗೆದವನು ತನಗೆ ಇನ್ನೂ ಒಂದು ಎಕರೆ ಹೆಚ್ಚಿಗೆ ಬೇಕೆಂದು ಹಠಕ್ಕೆ ಬಿದ್ದ. ಹಾಳಾಗಲಿ ಎಂದು ಇನ್ನೂ ಒಂದೆಕರೆ ಬಿಟ್ಟುಕೊಟ್ಟರು ಪೈಗಳು. ಇದಿಷ್ಟೂ ಮೆಹಮೂದ್‌ನ 187 ಎಕರೆ ಸೊತ್ತಿನ ಕತೆಯಾದರೆ ಈಗ ಏಕಾಏಕಿ ಲಕ್ಕಿ ಆಲಿ ತನಗೆ 2000 ಕೋಟಿ ರೂಪಾಯಿಗಳ ಆಸ್ತಿಯಿದೆಯೆಂದೂ ಅದನ್ನು ಬಿಲ್ಡರ್‌ಗಳು ಲಪಟಾಯಿಸಲು ಹಂತಕರಿಗೆ ಸುಪಾರಿ ಕೊಟ್ಟಿದ್ದಾರೆಂದೂ ತನಗೆ ಪ್ರಾಣಾಪಾಯವಿದೆಯೆಂದೂ ದೂರುಕೊಟ್ಟು ಸುದ್ದಿ ಮಾಡುತ್ತಿರುವುದೇಕೆ?

ಹಕೀಕತ್ತಿರುವುದೇ ಇಲ್ಲಿ. ಲಕ್ಕಿ ಆಲಿ ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕನೆಂಬುದರಲ್ಲಿ ಎರಡು ಮಾತಿಲ್ಲ. ಅಮಿತಾಬ್ ಜೊತೆ ಕಾಂಟೇ ಚಿತ್ರದಲ್ಲಿ ನಟಿಸಿದ್ದು, ಮಹೇಶ್ ಭಟ್‌ರ ಮರ್ಡರ್ ಚಿತ್ರದಲ್ಲಿ ಹೆಸರು ಮಾಡಿದ್ದು, ಹೃತಿಕ್ ರೋಶನ್‌ನ ಕಹೋ ನಾ ಪ್ಯಾರ್ ಹೈಗೆ ಹಾಡಿ ಕ್ರೇಜ್ ಹುಟ್ಟಿಸಿದ್ದು ಎಲ್ಲವೂ ಸರಿಯೆ.


ಖ್ಯಾತಿಗೆ ತಕ್ಕಂತೆ ವಿಲಾಸಿ ಬದುಕು, ಗ್ಲಾಮರ್ ಶೋಕಿ, ಬಣ್ಣದ ಲೋಕದ ಬೆಡಗಿಯರು ಮತ್ತು ಹೆಣ್ಣು ಚಾಕತನ ಹೇಗೆ ನಟನೊಬ್ಬನನ್ನು ವಂಚಕನನ್ನಾಗಿ ಮಾಡುತ್ತದೆ ಎಂಬುದಕ್ಕೆ ಆಲಿಗಿಂತ ಉದಾಹರಣೆ ಬೇಕಿಲ್ಲ. ಸದ್ಯ ದೆಹಲಿ, ಬಾಂಬೆ, ಪೂನಾಗಳಲ್ಲಷ್ಟೇ ಅಲ್ಲ, ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲೂ ಆಲಿ ವಿರುದ್ಧ ಫೋರ್ಜರಿ, ಬ್ಲಾಕ್‌ಮೇಲ್, ಗೂಂಡಾಗಿರಿಯ ಪ್ರಕರಣಗಳು ದಾಖಲಾಗಿವೆ. ಬೆಂಗಳೂರಿನ ವಿವಿಧ ಕೋರ್ಟುಗಳಲ್ಲಿ ಡಜನ್ನಿಗೂ ಮಿಗಿಲಾದ ವಂಚನೆ ಕೇಸುಗಳು ಆಲಿ ವಿರುದ್ಧ ವಿಚಾರಣಾ ಹಂತದಲ್ಲಿವೆ. ಇನ್ನು ಆಲಿ ಕೊಟ್ಟ ಲಕ್ಷ, ಕೋಟಿ ಮೊತ್ತದ ಯಾವ ಚೆಕ್ಕುಗಳೂ ಪಾಸಾಗದೇ ಬೌನ್ಸ್ ಹೊಡೆದ ಕೇಸುಗಳಿಗೆ ಲೆಕ್ಕವಿಲ್ಲ.

850 ಮಿಲಿಯನ್ ಡಾಲರ್‌ಗಳು ಅಂದರೆ ಬರೋಬ್ಬರಿ ಎರಡು ಸಾವಿರ ಕೋಟಿ ರೂಪಾಯಿಗಳ ಬೆಲೆಬಾಳುವ ಸೊತ್ತು ಬೆಂಗಳೂರಿನಲ್ಲಿರುವುದೇ ತನಗೆ ಆಪತ್ತಾಗಿದೆಯೆಂದು ಕಳೆದ ಹತ್ತು ವರ್ಷದಿಂದ ದೇಶದ ವಿವಿಧ ಟೀವಿ, ಪತ್ರಿಕೆಗಳಿಗೆ ಹೇಳಿಕೆ ನೀಡುತ್ತಲೇ ಬಂದ ಲಕ್ಕಿ ಆಲಿಗೆ ವಾಸ್ತವವಾಗಿ ಎರಡು ಸಾವಿರ ರೂಪಾಯಿಗಳಷ್ಟೂ ಆಸ್ತಿಯಿದ್ದಂತಿಲ್ಲ. ತಂದೆಯ ಅಷ್ಟೂ ಸೊತ್ತು ಯಾವುದೋ ಕಾಲಕ್ಕೆ ಹರಾಜಾಗಿದೆ. ಅಪ್ಪನ ಕಣ್ಣೀರಿಗೆ ಮರುಗಿ ಪೈಗಳು ಬಿಟ್ಟಿಯಾಗಿ ಕೊಟ್ಟ ನಾಲ್ಕು ಎಕರೆಯನ್ನೂ ಆಲಿ ಮಾರಿಕೊಂಡಾಗಿದೆ. ಇರುವುದು ಬಾಡಿಗೆ ಫ್ಲಾಟಿನಲ್ಲಿ, ಅಪರೂಪಕ್ಕೊಮ್ಮೆ ಸಿಗುವ ಹಿಂದಿ ಸಿನಿಮಾದ ಪಾತ್ರಗಳು ಮತ್ತು ದಿನೇ ದಿನೇ ಕ್ಷೀಣಿಸುತ್ತಿರುವ ಹಾಡುವ ಅವಕಾಶಗಳು!


ನಾಲ್ವರು ಪತ್ನಿಯರು!

ಇದೆಲ್ಲಕ್ಕೂ ಮಿಗಿಲಾಗಿ ಲಕ್ಕಿ ಆಲಿಯ ಶೋಕಿ, ವಿಲಾಸಿ ಲೈಫ್‌ಸ್ಟೈಲ್ ಮತ್ತು ಸ್ತ್ರೀಲೋಲ ಚಾಪಲ್ಯಗಳ ಫಲವೆಂಬಂತೆ ಆತನಿಗೆ ಒಂದಲ್ಲ ಎರಡಲ್ಲ ನಾಲ್ವರು ಪತ್ನಿಯರು, ಅಸಂಖ್ಯಾತ ಪ್ರೇಯಸಿಯರು. ಮೊದಲ ಪತ್ನಿಯ ಹೆಸರು ಮೇಘನ್ ಮ್ಯಾಕ್‌ಕ್ಲಾರಿ. ಈಕೆ ನ್ಯೂಜಿಲೆಂಡಿನವಳು. ಎರಡನೇ ಪತ್ನಿ ಮುಂಬಯಿಯ ಮಾಜಿ ಮಾಡೆಲ್ ಅನಾಹಿತಾ ಮಿಸ್ತ್ರಿ. ಮೂರನೇ ಪತ್ನಿ ಕೆಲಿಟ್ ಹಲ್ಲಮ್ ತಾನು ಮಾಜಿ ಮಿಸ್ ಇಂಗ್ಲೆಂಡ್ ಎಂದು ಹೇಳಿಕೊಳ್ಳುತ್ತಾಳೆ. ನಾಲ್ಕನೇ ಪತ್ನಿ ಅಫಘಾನಿಸ್ತಾನದ ಸೋಬಿತ್ ಜಾ. ಹೀಗೆ ವಿಶ್ವದ ನಾಲ್ಕೂ ಮೂಲೆಯ ನಾಲ್ಕೂ ದೇಶಗಳ ತರಹೇವಾರಿ ಮಾಡೆಲ್ ಬೆಡಗಿಯರನ್ನು ತಾನೊಬ್ಬ ಸೆಲೆಬ್ರಿಟಿ, 850 ಮಿಲಿಯನ್ ಡಾಲರ್‌ಗಳ ಆಸ್ತಿವಂತ, ಖ್ಯಾತಿವಂತ ಕುಬೇರ, ಕಂಠಸಿರಿಯ ಪ್ರತಿಭಾವಂತ ಎಂದುಕೊಂಡೇ ಪಟಾಯಿಸಿ ಪತ್ನಿಯರನ್ನಾಗಿಸಿಕೊಂಡ ಲಕ್ಕಿ ಆಲಿ ಹೆಸರಿಗೆ ತಕ್ಕಂತೆಯೇ ಸ್ತ್ರೀಲೋಲ ಲಕ್ಕಿ!

ಹೀಗೆ ಪತ್ನಿಯರಾಗಿ ಬಂದ ಯಾವ್ಯಾವುದೋ ದೇಶಗಳ ಕನ್ನಿಕೆಯರಿಗೆ ತಲಾ ಇಬ್ಬಿಬ್ಬರಂತೆ ಮಕ್ಕಳನ್ನು ಕರುಣಿಸಿದ್ದಾನೆ. ಅವರೆಲ್ಲರನ್ನೂ ಬೇರೆ ಬೇರೆ ಊರುಗಳಲ್ಲಿ ಪ್ರತ್ಯೇಕ ಫ್ಲಾಟು ಮಾಡಿಟ್ಟಿದ್ದಾನೆ. ನಾಲ್ವರು ಪತ್ನಿಯರಿಗೆ ಅವರ ಎಂಟು ಮಂದಿ ಮಕ್ಕಳು, ಅವರ ಮನೆಯ ಖರ್ಚು, ಶೋಕಿ ಐಷಾರಾಮಿ ಕಾರುಗಳು, ಸಾಲದ್ದಕ್ಕೆ ಅಸಂಖ್ಯಾತ ಪ್ರೇಯಸಿಯರು, ಗ್ಲಾಮರ್, ವಿಲಾಸಿ ಬದುಕು ಇತ್ಯಾದಿಗಳ ಖರ್ಚೆಂದು ತಿಂಗಳೊಂದಕ್ಕೆ ಲಕ್ಕಿ ಆಲಿಯ ದಾರಿದ್ರ್ಯ ಲಕ್ಕಿನ ಬಾಬತ್ತೇ ಹತ್ತೋ ಹದಿನೈದೋ ಲಕ್ಷ ಮೀರುತ್ತದೆ. ಸಿನಿಮಾ ನಟನೆ, ಹಾಡು, ಆರ್ಕೆಸ್ಟ್ರಾ, ಮ್ಯೂಜಿಕ್ ಆಲ್ಬಂ ಇತ್ಯಾದಿ ಏನೇ ಸರ್ಕಸ್ ಮಾಡಿದರೂ ಅಷ್ಟು ದುಡ್ಡು ಹುಟ್ಟುವುದಿಲ್ಲ. ಆದರೆ ಲಕ್ಕಿ ತನ್ನ ಶೋಕಿ ಬಿಡಲಿಲ್ಲ. ಕಲಿತ ಚಾಳಿಯನ್ನೂ ನಿಲ್ಲಿಸಿಲ್ಲ. ಸಿಕ್ಕಸಿಕ್ಕವರಿಗೆಲ್ಲ ತಾನು 2000 ಕೋಟಿ ರೂಪಾಯಿಗಳ ಆಸ್ತಿವಂತ, ತನ್ನ


ಲಕ್ಕಿ ಆಲಿ


ಆಲಿಯ ಮೊದಲ ಪತ್ನಿ ಮೇಘನ್


ಆಲಿ ಜೊತೆ ಎರಡನೆಯ ಪತ್ನಿ ಅನಾಹಿತಾ



ಮೂರನೆ ಪತ್ನಿಕೆಲಿಟ್ ಹಲ್ಲಮ್ ಜೊತೆ ಆಲಿ

ರೋಸತ್ತ ಒಡಹುಟ್ಟಿದವರೇ ತಿರುಗಿಬಿದ್ದರು


ಲಕ್ಕಿ ಆಲಿಯ ವಂಚನೆಯನ್ನು ಕಂಡು ಆತನ ಒಡಹುಟ್ಟಿದವರೇ ಅದೆಷ್ಟು ರೋಸತ್ತಿದ್ದಾರೆಂಬುದಕ್ಕೆ ಇತ್ತೀಚೆಗೆ ಹಿಂದೂ ಪತ್ರಿಕೆಯಲ್ಲಿ ಬಂದ ಈ ಜಾಹೀರಾತೇ ಸಾಕ್ಷಿ.

ಲಕ್ಕಿಯ ಅಣ್ಣ ಮಸೂದ್ ಆಲಿಯ ಮಗ ಮಾಹಿರ್ ಆಲಿ 2013 ರ ಜುಲೈ 12 ರಂದು ಹಿಂದೂ ಪತ್ರಿಕೆಗೆ ಜಾಹೀರಾತು ನೀಡಿ ಯಲಹಂಕ ಹೋಬಳಿ ವಾಸುದೇವಪುರದ ಆಲಿ ಎಸ್ಟೇಟಿಗೂ ಲಕ್ಕಿಗೂ ಯಾವುದೇ ಸಂಬಂಧವಿಲ್ಲ, ಸಾರ್ವಜನಿಕರು ಲಕ್ಕಿ ಆಲಿಯಿಂದ ಮೋಸ ಹೋಗಬಾರದು ಎಂದು ಜಾಹೀರಾತು ನೀಡಿದ್ದಾನೆ. ಲಕ್ಕಿಯ ಖಾಸಾ ತಮ್ಮ ಮನ್ಸೂರ್ ಆಲಿ ತನ್ನ ಸಹಿಯನ್ನು ಫೋರ್ಜರಿ ಮಾಡಿ ಲಕ್ಕಿ ತನ್ನ ಪಾಲಿನ ಆಸ್ತಿ ಮಾರಿದ್ದಾನೆಂದು ಹಾಕಿದ ಕೇಸು ಸದ್ಯ ಯಲಹಂಕ ಪೊಲೀಸರಿಂದ ವಿಚಾರಣೆಗೆ ಬಂದಿದೆ. ಅತ್ತ ಅಮೆರಿಕದಲ್ಲಿರುವ ಮತ್ತೊಬ್ಬ ತಮ್ಮ ಮಾಸೂಮ್ ಆಲಿಯೂ ತನ್ನ ಸಹಿ ಫೋರ್ಜರಿ ಮಾಡಿ ಲಕ್ಕಿ ಆಸ್ತಿ ಮಾರಿದ್ದಾನೆಂದು ಕೇಸು ದಾಖಲಿಸಿದ್ದಾನೆ. ಮಿಕ್ಕಂತೆ ಲಕ್ಕಿಯ ತಾಯಿ ಮತ್ತು ಎಲ್ಲಾ ತಮ್ಮಂದಿರೂ ಬೆಂಗಳೂರು ಪೊಲೀಸ್ ಕಮೀಷನರ್‌ಗೆ ವಿಶೇಷ ಮನವಿ ಮಾಡಿ ಲಕ್ಕಿಯ ವಂಚನೆ ವಿರುದ್ಧ ಮನವಿ ಮಾಡಿದ್ದಾರೆ.

ಹೆಸರೇನೋ ದೊಡ್ಡದು ನಿಜ. ಸ್ಟಾರ್ ಗಿರಿ, ಗ್ಲಾಮರ್, ಇಮೇಜಿಗೆ ತಕ್ಕಂತೆ ಲಕ್ಕಿ ಆಲಿಯ ಬುದ್ಧಿ ಇರಬೇಕಲ್ವ?



ದಾವೂದ್



ದಯಾನಂದ ಪೈ

ರೈ ಹೆಸರಲ್ಲಿ ದೂರಿನ ಗಿಮ್ಮಿಕ್

2004 ರ ಸೆಪ್ಟೆಂಬರ್ 26 ರಂದು ಬೆಂಗಳೂರು ಪೊಲೀಸ್ ಕಮೀಷನರ್‌ಗೆ ದೂರೊಂದನ್ನು ನೀಡಿದ ಲಕ್ಕಿ ಆಲಿ ತಾನು ಮುಂಬಯಿಯಲ್ಲಿ ಶೂಟಿಂಗ್‌ನಲ್ಲಿದ್ದಾಗ ತನ್ನ 9880166649 ಮೊಬೈಲ್ ನಂಬರಿಗೆ ಬಿಂದು ಎಂಬ ಮಹಿಳೆ ತನ್ನ 9448200343 ನಂಬರಿನಿಂದ ಫೋನ್ ಮಾಡಿ ಮುತ್ತಪ್ಪ ರೈ ಹೆಸರಲ್ಲಿ ಕೊಲೆ ಬೆದರಿಕೆ ಹಾಕಿದ್ದಾಳೆಂದು ಬರೆಯುತ್ತಾನೆ.

ತಾನು ಮುತ್ತಪ್ಪ ರೈ ಕಡೆಯವಳು, ಬಿಲ್ಡರ್‌ಗಳಾದ ಸತೀಶ್ ಪೈ ಯಶವಂತ್ ಶೆಣೈ ಪರವಾಗಿ ಮುತ್ತಪ್ಪ ರೈ ಅಣ್ಣ ನಿನಗೆ ವಾರ್ನ್ ಮಾಡಲು ಹೇಳಿದ್ದಾರೆ. ಈ ಕೂಡಲೇ ಪೈಗಳಿಗೆ ಆಸ್ತಿ ಬಿಟ್ಟುಕೊಡದೇ ಹೋದರೆ ನಿನ್ನನ್ನು ರೈ ಮುಗಿಸುತ್ತಾನೆ ಎಂದು ಬಿಂದು ಎಂಬ ಮಹಿಳೆ ಬೆದರಿಸುತ್ತಾಳಂತೆ. ಅದೇ ದೂರಿನಲ್ಲಿ ಆಲಿ ಮುತ್ತಪ್ಪ ರೈ ಮತ್ತು ಪೈ ಇಬ್ಬರೂ ಪಾಲುದಾರರು ಎನ್ನುತ್ತಾನೆ. ಮುತ್ತಪ್ಪ ರೈಗೆ ಮುಂಬಯಿ ಲಿಂಕ್ ಇದೆ ಎನ್ನುತ್ತಾನೆ. ಹೀಗೆ ನೀಡಿದ ದೂರನ್ನೇ ಮುಂಬಯಿ ಟೀವಿ ಪತ್ರಿಕೆಗಳಿಗೆ ಕಳಿಸಿ ದೊಡ್ಡ ಪುಕಾರೆಬ್ಬಿಸುತ್ತಾನೆ. ರಾಷ್ಟ್ರೀಯ ಪತ್ರಿಕೆಗಳ ವರದಿಗಾರರ ಕಾಟ ತಾಳಲಾರದೇ ಈ ಬಗ್ಗೆ ತನಿಖೆ ಮಾಡಿದ ಪೊಲೀಸ್ ಕಮೀಷನರ್‌ಗೆ ಕೊನೆಗೆ ಗೊತ್ತಾಗಿದ್ದೇನೆಂದರೆ ಖುದ್ದು ಲಕ್ಕಿಯೇ ಪೈಗಳನ್ನು ಬ್ಲಾಕ್‌ಮೇಲ್ ಮಾಡಲು ಇಂಥ ತಂತ್ರ ಮಾಡಿದ್ದ!

...ನ ಮೇಲೆ ಬಿಲ್ಡರ್‌ಗಳ ಕಣ್ಣುಬಿದ್ದಿದೆ. ತನಗೆ ...ಪಾಯವಿದೆ ಎಂದು ಪುಕಾರೆಬ್ಬಿಸಿಕೊಂಡೇ ...

...ಂಡಾಮೋಚೀ...

...ದರ ಫಲವೆಂಬಂತೆ ಲಕ್ಕಿ ಗಂಟು ಬಿದ್ದದ್ದು ... ಇಕ್ಬಾಲ್ ಎಂಬ ಕಟ್ಟಡ ವಿನ್ಯಾಸಕಾರನಿಗೆ. ...ಲತಃ ಬೆಂಗಳೂರಿನವರಾದರೂ ಪ್ಯಾರಿಸ್‌ನಲ್ಲಿ ...ನಿಯರಿಂಗ್ ಮುಗಿಸಿ ಕ್ರಮೇಣ ಲ್ಯಾಂಡ್ ...ಪರ್ ಆಗಿ ಹೆಸರು ಮಾಡಿದ ಆಸಿಫ್ ಇಕ್ಬಾಲ್ ...ಾಮ್ ದೇಶಕ್ಕೆ ಭಾರತದ ಗೌರವ ಪ್ರತಿನಿಧಿ ... ಕಾಂಗ್ರೆಸ್ ವರಿಷ್ಠ ದಿಗ್ವಿಜಯ್ ಸಿಂಗ್ ಜೊತೆ ...ವಿದೆ. ಪ್ರಮುಖ ರಾಜತಾಂತ್ರಿಕರ ಜೊತೆ ...ಾಟವಿದೆ. ಇಲ್ಲಿಗೆ ಆರು ವರ್ಷದ ಹಿಂದೆ ...ಯೊಂದರಲ್ಲಿ ಲಕ್ಕಿ ಆಲಿಗೆ ಪರಿಚಯವಾದ ... ಮೊದಮೊದಲು 2000 ಕೋಟಿಯ ಸೊತ್ತಿನ ...ನ್ನು ನಂಬಿದ್ದಾರೆ. ತನ್ನ ಆಸ್ತಿಗೆ ಬಿಲ್ಡರ್ ಓರ್ವ ... ದಾಖಲೆ ಸೃಷ್ಟಿಸಿ ವಂಚಿಸಿದ್ದಾನೆಂದೂ ಆತನ ...ನ್ಧ ಕೋರ್ಟಿನಲ್ಲಿ ಹೆಣಗಾಡಲು ತನಗೆ ದುಡ್ಡು ...ದೂ 15 ಲಕ್ಷ ಒಮ್ಮೆ 20 ಲಕ್ಷ ಇನ್ನೊಮ್ಮೆ ...ಮತ್ತೊಮ್ಮೆ ಹೀಗೆ ಒಟ್ಟು 90 ಲಕ್ಷದಷ್ಟು ಸಾಲ ...

...ಷ್ಟೆಂದರೂ ಬಾಲಿವುಡ್ ನಟ. ಖ್ಯಾತ ಗಾಯಕ ... 850 ಮಿಲಿಯನ್ ಡಾಲರ್‌ಗಳ ಆಸ್ತಿಯಿಲ್ಲದೆ ...ದರೂ ಕನಿಷ್ಠ ಐನೂರು ಮಿಲಿಯನ್ ಡಾಲರ್ ...ಾದರೂ ಇರಬಹುದೆಂದೇ ಲೆಕ್ಕ ಹಾಕಿದ್ದ ...ಗೆ ಸತ್ಯ ಗೊತ್ತಾಗುವ ಹೊತ್ತಿಗೆ ಕಾಲ ...ಚಿತ್ತು. ತನ್ನ ಪಾಲಿಗೆ ಬಂದಿದ್ದ ನಾಲ್ಕು ಎಕರೆಗಳ ... ಬುಜ್ಜಮ್ಮ ಎಂಬಾಕೆಗೆ ಎರಡು ಎಕರೆ ಜಂಟಿ ...ವೃದ್ಧಿಗೆ ಮಾರಿದ್ದ. ಅಭಿಮಾನ್ ಎಂಟರ್‌ಪ್ರೈಸಸ್‌ಗೆ ... ಎರಡೆಕರೆ ಮಾರಿದ್ದ. ಬುಜ್ಜಮ್ಮ ನಿಂದ 2.40 ...ಿ ರೂಪಾಯಿಗಳನ್ನು ಪಡೆದ ನಂತರವೂ ...ಟ್ ನಿರ್ಮಿಸದಂತೆ ರೌಡಿಗಳನ್ನು ಬಿಟ್ಟು ಗಲಾಟೆ ...ಸಿದ್ದ. ಗ್ರೀನ್ ಆರ್ಚರ್ಡ್ಸ್ ಎಂಬ ರಿಯಲ್ ...ಟ್ ಸಂಸ್ಥೆಗೂ ಎರಡೆಕರೆ ಜಮೀನಿಗೆ ನಕಲಿ ...ಲೆ ಸೃಷ್ಟಿಸಿ ವಂಚಿಸಿದ್ದ!

...ಕ್ಕಿ ಆಲಿಯ ವಂಚಕ ಪ್ರವೃತ್ತಿ ಕೊನೆಕೊನೆಗೆ ...ತ ಮಟ್ಟಕ್ಕೆ ಬಂದಿತ್ತೆಂದರೆ ಅಮೆರಿಕದಲ್ಲಿರುವ ತನ್ನ ... ಮಾಸೂಮ್ ಆಲಿಯ ಪಾಲಿಗೆ ಬಂದಿದ್ದ ...ು ಎಕರೆಯನ್ನೂ ಸೈಯದ್ ರಿಜ್ವಾನ್ ...ತನಿಗೆ ನಕಲಿ ದಾಖಲೆ ಸೃಷ್ಟಿಸಿ ಮಾರಿದ್ದ. ಆಂಧ್ರ ...ಲದ ರಿಯಲೇಟರ್ ಸೈಯದ್ ರಿಜ್ವಾನ್ ...ತನಿಂದ 65 ಲಕ್ಷ ರೂಪಾಯಿಗಳಷ್ಟು ಅಡ್ವಾನ್ಸ್ ಪಡೆದು ತನ್ನ ಮತ್ತೊಬ್ಬ ತಮ್ಮ ಮನ್ಸೂರ್ ಆಲಿಯ ಮೂರೆಕರೆಯನ್ನೂ ಮಾರಿಬಿಟ್ಟ. ಲಕ್ಕಿ ಆಲಿ ಇಲ್ಲಿ ಎಂಥಾ ವಂಚಕ ತಲೆ ಓಡಿಸಿದ್ದನೆಂದರೆ ತನ್ನ ಇಬ್ಬರೂ ತಮ್ಮಂದಿರು ತನಗೆ ಜಿಪಿಎ ಮಾಡಿಕೊಟ್ಟಿದ್ದಾರೆ ಎಂದು ಕಳ್ಳ ದಾಖಲೆ ಸೃಷ್ಟಿಸಿದ್ದ. ಈ ಹೊತ್ತಿಗಾಗಲೇ 90 ಲಕ್ಷದಷ್ಟು ದುಡ್ಡು ಕೊಟ್ಟಿದ್ದ ರಿಜ್ವಾನ್ ಸ್ಥಳಕ್ಕೆ ಬಂದರೆ ಜಮೀನು ಇಲ್ಲ, ದಾಖಲೆಗಳೇ ಫ್ರಾಡು. ಈ ಬಗ್ಗೆ ಯಲಹಂಕ ಪೊಲೀಸರಿಗೆ ದೂರುಕೊಟ್ಟ ರಿಜ್ವಾನ್‌ಗೆ ಲಕ್ಕಿ ಆಲಿ ಕೊಟ್ಟಿದ್ದ 92 ಲಕ್ಷ ರೂಪಾಯಿಗಳ ಚೆಕ್ಕೂ ಬೌನ್ಸ್ ಆಗಿತ್ತು. ವಿಧಿಯಿಲ್ಲದೆ ರಿಜ್ವಾನ್ ಕೋರ್ಟಿನಲ್ಲಿ ಕೇಸು ದಾಖಲಿಸಬೇಕಾಯ್ತು. ದೊಡ್ಡಬಳ್ಳಾಪುರದ ರಾಜೀವ್ ಎಂಬಾತನಿಗೆ 11 ಎಕರೆಗೆ ನಕಲಿ ದಾಖಲೆ ಸೃಷ್ಟಿಸಿ ಕೋಟಿಗಟ್ಟಲೇ ಪಡೆದು ವಂಚಿಸಿದ್ದೂ ಅಲ್ಲದೆ ಜೆ.ಪಿ. ನಗರದ ಶಾಸ್ತ್ರಿ ಡಾಲರ್ಸ್ ಕಾಲೋನಿಯ ಮಹೇಂದ್ರ ಸಿಂಗ್, ಪೂನಾದ ನಿಖಿಲ್ ಜೈನ್, ಮುಂಬಯಿಯ ಅಗಲವಾಲ್- ಹೀಗೆ ಯಾರ್‍ಯಾರಿಗೋ ತನ್ನದಲ್ಲದ ಸೊತ್ತನ್ನು ಕೋಟಿ ಕೋಟಿ ಕಿತ್ತು ವಂಚಿಸಿದ್ದ ಲಕ್ಕಿ ಆಲಿ.


ಬಲಿಯಾದ ಆಸಿಫ್

ಕೈಸಾಲವೆಂದೇ ಐದು, ಹತ್ತು, ಇಪ್ಪತ್ತು ಲಕ್ಷ ಪಡೆದು ಅದಕ್ಕೆ ಪ್ರತಿಯಾಗಿ ಆತ ಕೊಟ್ಟಿದ್ದ ಇಪ್ಪತ್ತಕ್ಕೂ ಅಧಿಕ ಚೆಕ್ಕುಗಳು ಬೌನ್ಸ್ ಆಗಿದ್ದವು. ಈ ಥರದ ಚೆಕ್ ಬೌನ್ಸ್ ವಂಚನೆಯ ಇಪ್ಪತ್ತಕ್ಕೂ ಅಧಿಕ ಪ್ರಕರಣಗಳು ಬೆಂಗಳೂರಿನ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿದ್ದವು. ಹೀಗೆ ಯಾರನ್ನೆಲ್ಲ ಆಲಿ ವಂಚಿಸಿದ್ದಾನೋ ಅಂಥವರು ತನ್ನ ತಂಟೆಗೆ ಬರದಿರಲಿ ಎಂದು ಅವರಿಂದ ತನ್ನ ಪ್ರಾಣಕ್ಕೆ ಆಪತ್ತಿದೆ, ಕೊಲೆಗೆ ಯತ್ನಿಸಿದ್ದಾರೆ ಎಂದು ಬೆಂಗಳೂರಿನ ಯಾವ್ಯಾವುದೋ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸುತ್ತಿದ್ದ. ಇದು ಗೊತ್ತಾಗಿದ್ದೇ ಕೊಟ್ಟ ದುಡ್ಡನ್ನು ಕೊಡು ಎಂದು ಆಸಿಫ್ ಇಕ್ಬಾಲ್ ವಸೂಲಿಗೆ ನಿಂತಿದ್ದಾರೆ. ಇದಕ್ಕೆ ಲಕ್ಕಿ ಆಲಿ ಎಂಥಾ ಕಂತ್ರಿ ಚಾಲು ನಡೆಸಿದನೆಂದರೆ; ಆಸಿಫ್ ಆಪ್ತರೊಬ್ಬರು ಪಕ್ಕದಲ್ಲೇ ಕಟ್ಟಿಸುತ್ತಿದ್ದ ಕಟ್ಟಡದ ಬಳಿ ಬಂದು ಕೆಲಸಗಾರರನ್ನೇ ರೌಡಿಗಳೆಂದು ವೀಡಿಯೋ ಮಾಡಿಕೊಂಡು ತನ್ನ ಹತ್ಯೆಗೆ ಬಂದ ಸುಪಾರಿ ಹಂತಕರು ಎಂದು ರಾಷ್ಟ್ರೀಯ ನ್ಯೂಸ್ ಚಾನಲ್ಲುಗಳಿಗೆ ಸುದ್ದಿ ಕೊಟ್ಟಿದ್ದ.


2007ರಲ್ಲಿ ಮುತ್ತಪ್ಪ ರೈ ಆಸ್ತಿಗಾಗಿ ತನ್ನನ್ನು ಕೊಲ್ಲಿಸುತ್ತಾನೆಂದೂ, ದಾವೂದ್ ಇಬ್ರಾಹಿಂನಿಂದ ತನಗೆ ಬೆದರಿಕೆ ಇದೆಯೆಂದೂ, ದಯಾನಂದ ಪೈ ತನ್ನ ಹತ್ಯೆಗೆ ಸುಪಾರಿ ಕೊಟ್ಟಿದ್ದಾನೆಂದೂ ಪೊಲೀಸರಿಗೆ ಸುಳ್ಳು ದೂರು ಕೊಡುತ್ತಲೇ ಬಂದಿದ್ದ ಲಕ್ಕಿ ಆಲಿ ಈಗ ಆಸಿಫ್ ವಿರುದ್ಧ ದೂರು ನೀಡಿದ್ದ. ನೇರವಾಗಿ ಪೊಲೀಸ್ ಕಮೀಷನರ್‌ಗೆ, ಗೃಹಸಚಿವರಿಗೆ ರಾಷ್ಟ್ರೀಯ ಟೀವಿ ಚಾನಲ್ಲುಗಳ ಆ್ಯಂಕರ್‌ಗಳು ಸಂಪರ್ಕಿಸಿ ಸಮಜಾಯಿಷಿ ಕೇಳುತ್ತಿದ್ದರು. ಈಗ ಬೆಂಗಳೂರು ಪೊಲೀಸರಿಗೆ ಲಕ್ಕಿ ಆಲಿಯ ಟೆಕ್ನಿಕ್ಕು ಗೊತ್ತಾದಂತಿದೆ. ಬಾಲಿವುಡ್ ನಟನಾಗಿ ಹೆಸರಾಂತ ಗಾಯಕನಾಗಿ ಆಲಿ ತನ್ನ ಜೊತೆ ತಂದೆಯ ಮಾನವನ್ನೂ ಹರಾಜಿಗಿಟ್ಟಿದ್ದ. ಆಸಿಫ್ ಇಕ್ಬಾಲ್ ತನ್ನ ಕೊಲೆಗೆ ಸುಪಾರಿ ಕೊಟ್ಟಿದ್ದಾನೆಂದು ಆಲಿ ನೀಡಿದ ದೂರೇ ಮತ್ತೊಂದು ವಂಚನೆಯಾಗಿತ್ತು.

ಸದ್ಯಕ್ಕಂತೂ ಯಲಹಂಕ ಪೊಲೀಸರು ಆಲಿ ಕೊಟ್ಟ ಕಳ್ಳ ದೂರಿಗೆ ಛೀಮಾರಿ ಮಾಡಿ ಕಳಿಸಿದ್ದಾರೆ. ಲಕ್ಕಿ ಆಲಿಯ ಪಾಲಿಗೆ ಜೈಲಂತೂ ಕೈಬೀಸಿ ಕರೆಯುತ್ತಲೇ ಇದೆ.

● ರಾ. ಸೋಮನಾಥ್



ಮಧು ಮತ್ತು ಮೆಹಮೂದ್


Friday, January 2, 2015 DECCAN HERALD 5

PUBLIC NOTICE

Lands Earlier known as ALI ESTATE, Yelahanka

We, (1) **Masoom M. Ali** (2) **Manzoor M. Ali** (3) **Mansoor M. Ali** (4) **Latifunissa alias Ginny** (5) **Bilquees** W/o Late Maqdoom Ali & Daughter-in-law of Late Mr. Mehmood Ali, (6) **Maher Ali & Maseeha Ali,** all children & grand children of late Mr. Mehmood Ali, cine Artist, would like to inform the general public that, in the recent media reports and claims made by our brother **Mr. MAQSOOD ALI** alias **LUCKY ALI** is making wild allegations against **Green Orchards Farm Houses & Others** who are the absolute owners and in possession of around **165 Acres** of Land situated in various survey Numbers located at Vasudevpura, Govindapura and Kenchanahalli Villages, Yelahanka Hobli, Bangalore North Taluk, Bangalore.

Through this notice, we inform the general public that the litigation between us and Green orchards Farm Houses & Others, to which even **Mr. Maqsood Ali** alias **Lucky Ali** was a party, ended up in a mutually agreed compromise and consequently culminated into a decree passed by the court. We along with our brother **Mr. MAQSOOD ALI** alias **LUCKY ALI** have also acted upon the Compromise Decree.


Recently **Mr. MAQSOOD ALI** alias **LUCKY ALI** has re-ignited a closed issue and is making unsubstantiated, wild and reckless allegations against Green Orchards Farm Houses (Present Owners) & Others and questioning the validity of the registered documents executed by our father **Late Mr. Mehmood Ali** in favour of Green Orchards Farm Houses and **Mr. H. Yeshwanth Shenoy** the present Land Owners and the same has been accepted by us and our brother **Mr. Maqsood Ali alias Lucky Ali** in the compromise and claiming that he has our support.

We would also like to confirm that, all the documents which **Mr. Maqsood Ali** alias **Lucky Ali** is alleging as forged documents are registered documents executed by our father late **Mr. Mehmood Ali** and **Mrs. Tahira Mehmood Ali** and we admit the genuineness of the documents executed by our father **Late Mr. Mehmood Ali** and **Mrs. Tahira Mehmood Ali.**

Through this notice, we hereby inform the general public that the illegal actions initiated by **Mr. Maqsood Ali** alias **Lucky Ali** does not have any of our support and we strongly refute the illegal actions of **Mr. Maqsood Ali** alias **Lucky Ali** and once again affirm that **Green Orchards Farm Houses** are the absolute owners of the lands and we have no claim against them.

(1) MASOOM M. ALI (2) MANZOOR M. ALI (3) MANSOOR M. ALI (4) LATIFUNISSA ALIAS GINNY all Children of Late Mr. Mehmood Ali. **(5) BILQUEES** W/o Late Maqdoom Ali & daughter-in-law of Late Mr. Mehmood Ali. **(6) MAHERA ALI & MASEEHA ALI,** both Grand Children of Late Mr. Mehmood Ali.

Place : Bangalore Dated : 31-12-2014




ಗಿನ್ನಿ, ಮೆಹಮೂದ್ ಮತ್ತು ಲಕ್ಕಿ ಆಲಿ



ಹುಸೇನ್, ಮೆಹಮೂದ್, ಖೈರುನ್ನೀಸಾ, ಜುಬೇದಾ, [illegible]

ಅರ್ಕಾವತಿ ವಿವಾದ

ಅದೇನ್ಲಾ ನಿಮ್ಮ ರಗಳೆ?





ಕಳೆದ ಕೆಲವು ತಿಂಗಳುಗಳಿಂದ ಕರ್ನಾಟಕದ ಬಿಜೆಪಿಯವರದು ಗದ್ದಲವೋ ಗದ್ದಲ. ವಿಧಾನಸಭೆಯ ಅಧಿವೇಶನದಲ್ಲಂತೂ ಕರು ಸತ್ತ ಹಸುವಿನಂತೆ ಒಂದೇ ಸಮನೆ ಅರಚಿದರು. ಈ ಗದ್ದಲದಿಂದಾಗಿ ಅಧಿವೇಶನ ಹಲವು ಬಾರಿ ಮುಂದೂಡಲ್ಪಟ್ಟಿತು. ನಮ್ಮದು ಸತ್ಯ ನ್ಯಾಯ, ಧರ್ಮಕ್ಕಾಗಿ ಹೋರಾಟ ಎಂದು ಹೂಳಿಟ್ಟರು. ಟಿವಿಗಳಲ್ಲಿ, ಪೇಪರ್‌ಗಳಲ್ಲಿ ಇವರದೇ ಬೊಬ್ಬೆ. ವಿಷಯ ಏನಪ್ಪಾ ಅಂದರೆ 'ಸಿಎಂ ಸಿದ್ದರಾಮಯ್ಯ ಅರ್ಕಾವತಿ ಬಡಾವಣೆಯಲ್ಲಿ ಡಿ-ನೋಟಿಫಿಕೇಷನ್ ಮಾಡಿ, ಅಕ್ರಮ ಎಸಗಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆಯಾಗಬೇಕು' ಎಂಬುದು ಇವರ ಕೂಗು.

ಬಿಜೆಪಿಯ ಭರಾಟೆಯನ್ನು ಕಂಡ ಹಲವರ ಮನದಲ್ಲಿ ಸಿದ್ದರಾಮಯ್ಯ ಕೂಡ ಯಡ್ಯೂರಪ್ಪನಂತೆ ಡಿ-ನೋಟಿಫಿಕೇಷನ್ ದಂಧೆಗೆ ಕೈಹಾಕಿರಬಹುದೆ? ಎಂಬ ಗುಮಾನಿ ಮೂಡಿರಲಿಕ್ಕೂ ಸಾಕು. ಯಾಕೆಂದರೆ ಕೇಸರಿ ಕೂಟದ ಬೊಬ್ಬೆ ಅಷ್ಟು ತೀವ್ರಗತಿಯಲ್ಲಿದೆ. ಇಂಥ ಗೊಂದಲದ ಗೂಡನ್ನು ಕೆದಕಲು ಹೊರಟ 'ಪತ್ರಿಕೆ'ಗೆ ಒಂದು ವಿಷಯವಂತೂ ನಿಚ್ಚಳವಾಗಿ ಗೋಚರಿಸಿತು. ಈ ಕೇಸರಿಕೂಟದ ಒರಾಟ ಅಮಿತ್ ಶಾನ ಸೂಚನೆಯ ಮೇರೆಗೆ ಕರ್ನಾಟಕ ಬಿಜೆಪಿಯವರು ಹೂಡಿದ ಸಂಘಟಿತ ಷಡ್ಯಂತ್ರ!!


ವಾಸ್ತವಾಂಶಗಳನ್ನು ಕೆದಕುತ್ತಾ ಹೊರಟ 'ಲಂಕೇಶ್' ಬಿಡಿಎ - ಅರ್ಕಾವತಿ ಬಡಾವಣೆಗೆ ಸಂಬಂಧಿಸಿದ ಹಲವು ಪ್ರಮುಖ ದಾಖಲೆಗಳನ್ನು ಸಂಗ್ರಹಿಸಿದೆ. ಪರೀಕ್ಷಕ ದೃಷ್ಟಿಯಿಂದ ಅವುಗಳನ್ನು ಅಧ್ಯಯನ ಮಾಡಿದಾಗ ಆಶ್ಚರ್ಯವೆನಿಸುವ ನಾನಾ ಅಂಶಗಳು ಹೊರಬೀಳುತ್ತವೆ. ಈ ಅರ್ಕಾವತಿ ಯೋಜನೆ ಆರಂಭವಾದದ್ದು 2003ರಲ್ಲಿ, ಎಸ್.ಎಂ. ಕೃಷ್ಣರ ಅವಧಿಯಲ್ಲಿ, ಅಂದಿನಿಂದ ಮೊದಲ್ಗೊಂಡು ಕಳೆದ ಶೆಟ್ಟರ್ ಸರ್ಕಾರದವರೆಗೆ ಇಡೀ ಒಂದು ದಶಕದ ಕಾಲ ಬಂದುಹೋದ ಎಲ್ಲ ಸರ್ಕಾರಗಳೂ ಈ ಯೋಜನೆಯಲ್ಲಿ ನಾನಾ ಅಕ್ರಮಗಳನ್ನೆಸಗಿವೆ. ಅದರಲ್ಲೂ ಮುಖ್ಯವಾಗಿ ಈಗ ಬೀದಿಯಲ್ಲಿ ಬಾಯಿ ಬಡಿದುಕೊಳ್ಳುತ್ತಿರುವ ಗುಂಪೇ ಈ ಡಿನೋಟಿಫಿಕೇಷನ್ ದಂಧೆಯ ಪ್ರಮುಖ ವಿಲನ್ ಎಂಬುದು ವಿಚಿತ್ರವೆನಿಸಿದರೂ ಅದೇ ಸತ್ಯ!

ಬೆಂಗಳೂರಿನ ನಾಗರಿಕರು ದಶಕಗಳಿಂದ ನಿರೀಕ್ಷಿಸಿದ್ದ ವಸತಿ ಯೋಜನೆಗೆ ಎಂಥಾ ದುರ್ಗತಿ ಬಂದಿದೆ ನೋಡಿ. ಈ ಯೋಜನೆಗೆ 2003ರ ಫೆಬ್ರವರಿಯಲ್ಲಿ ಪ್ರಾರಂಭಿಕ ಅಧಿಸೂಚನೆ ಹೊರಡಿಸಲಾಯ್ತು, ಆಗ ಯೋಜನೆಗೆ ಒಳಗೊಂಡಿದ್ದ ಒಟ್ಟು ಜಮೀನು 3,839 ಎಕರೆ. ಕಳೆದ ವರ್ಷ ಸಿಎಂ ಸಿದ್ದರಾಮಯ್ಯ ಸರ್ಕಾರ ಅನುಮೋದಿಸಿದ ಪರಿಷತ್ ಅಂತಿಮ ಯೋಜನೆಗೆ ಲಭ್ಯವಿರುವ ಜಮೀನು 1766 ಎಕರೆ ಮಾತ್ರ! ಅಂದರೆ 2073 ಎಕರೆ ಜಮೀನು ಅರ್ಥಾತ್ ಶೇಕಡ 54ರಷ್ಟು ಜಮೀನನ್ನು ಮೂಲ ಯೋಜನೆಯಿಂದ ಕೈಬಿಡಲಾಗಿದೆ. ಈ 2073 ಎಕರೆಯಲ್ಲಿ ವಿವಿಧ ಪಕ್ಷಗಳ ರಾಜಕಾರಣಿಗಳು ಮಾಡಿದ ಗೋಲ್‌ಮಾಲ್ ಇದೆ. ನ್ಯಾಯಾಲಯದ ಆದೇಶಗಳ ಪಾಲನೆಯೂ ಇದೆ. ಅಧಿಕಾರಿಗಳ ಅಂಧಾ ದರ್ಬಾರ್ ಕೂಡಾ ಇದೆ. ಆದರೆ ನೆನಪಿಡಿ. ಇದೆಲ್ಲ ನಡೆದುಹೋಗಿದ್ದು ಇಲ್ಲಿಗೆ ಎರಡು ವರ್ಷಗಳಿಗಿಂತಲೂ ಮುಂಚೆ. ಅಂದರೆ ಸಿದ್ದರಾಮಯ್ಯ ಸರ್ಕಾರ ಬರುವುದಕ್ಕೂ ಮುಂಚೆಯೇ.

ಕೆಲವು ಮುಖ್ಯಾಂಶಗಳತ್ತ ಗಮನ ಹರಿಸೋಣ.

2003-04ರ ಅವಧಿಯಲ್ಲಿ ಪ್ರಾರಂಭಿಕ ಅಧಿಸೂಚನೆಗೆ ರೈತರಿಂದ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿದ ಬಿಡಿಎ 589 ಎಕರೆ ಭೂಮಿಯನ್ನು ಭೂಸ್ವಾಧೀನದಿಂದ ಹೊರತುಪಡಿಸಿ, ಪರಿಷ್ಕೃತ ಯೋಜನೆಯನ್ನು ಅಂದಿನ ಎಸ್.ಎಂ. ಕೃಷ್ಣರ ಸರ್ಕಾರದ ಮುಂದಿರಿಸಿತು. (ಈ ಹಂತದಲ್ಲಿ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಕಾನೂನಿನಡಿ ಅವಕಾಶವಿದೆ.)

ಆದರೆ ಕೃಷ್ಣ ಸರ್ಕಾರ ಮಾಡಿದ್ದೇನು? ಬಿಡಿಎ ಸೂಚಿಸಿದ್ದ 589 ಎಕರೆ ಜಮೀನಿನ ಜೊತೆಗೆ ಹೆಚ್ಚುವರಿಯಾಗಿ 500 ಎಕರೆ ಜಮೀನನ್ನು ಭೂಸ್ವಾಧೀನದಿಂದ ಹೊರಗಿಡಲು ತೀರ್ಮಾನ ಕೈಗೊಂಡಿತು. ಇದು ಮೊಟ್ಟ ಮೊದಲ ಗೋಲ್‌ಮಾಲ್ ಡೀಲ್. ಇಂಥಾ ನಿರ್ಣಯಕ್ಕೆ ಪೂರಕವಾಗಿ ಯಾವುದೇ ತಕರಾರುಗಳಾಗಲಿ, ಅಧಿಕೃತ ವರದಿಗಳಾಗಲಿ, ಇನ್ನಿತರೆ ಆದೇಶಗಳಾಗಲಿ ಯಾವುದೂ ಇರಲಿಲ್ಲ, ಇದು ಕೇವಲ ಸರ್ಕಾರದ 'ವಿವೇಚನಾ ಜ್ಞಾನ'ದಿಂದ ಅಧಿಕಾರ ಚಲಾಯಿಸಿ ಮಾಡಿದ ತೀರ್ಮಾನವಾಗಿತ್ತು, ಈ 500 ಎಕರೆ ಭೂಮಿ ಯಾರ್‍ಯಾರಿಗೆ ಸೇರಿದ್ದು? ಈ ಡೀಲಿಂಗ್‌ನಲ್ಲಿ ಯಾರ್‍ಯಾರ ಕೈವಾಡವಿದೆ? ಎಂಬ ಹತ್ತು ಹಲವು ಪ್ರಶ್ನೆಗಳು ಮೂಡುವುದು ಸಹಜ. ಆದರೆ ಒಂದು ದಶಕದ ಹಿಂದಿನ ಈ ವ್ಯವಹಾರದ ಉಸಾಬರಿ ಇಂದು ಯಾರಿಗೂ ಬೇಡವಾಗಿದೆ.



ಹೀಗೆ ಒಟ್ಟು 1089 ಎಕರೆ ಜಮೀನನ್ನು ಬಿಟ್ಟು ಉಳಿಕೆ 16 ಗ್ರಾಮಗಳ 2,750 ಎಕರೆ ಪ್ರದೇಶದಲ್ಲಿ ಯೋಜನೆ ರೂಪಿಸಲು 2004ರ ಫೆಬ್ರವರಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಯ್ತು, ಹಲವು ಪ್ರಭಾವಿ ವ್ಯಕ್ತಿಗಳ ಜಮೀನುಗಳನ್ನು ಭೂಸ್ವಾಧೀನದಿಂದ ಕೈಬಿಟ್ಟು ತಮ್ಮ ಜಮೀನುಗಳನ್ನು ವಶಪಡಿಸಿಕೊಳ್ಳುತ್ತಿರುವ ಬಿಡಿಎ ಕ್ರಮವನ್ನು ಪ್ರಶ್ನಿಸಿ



ಹಲವು ರೈತರು ಹೈಕೋರ್ಟ್ ಮೆಟ್ಟಲೇರಿದರು. ಆದರೆ ಬಿಡಿಎ ಮತ್ತು ಸರ್ಕಾರ ಎಂಥಾ ಶೋಚನೀಯ ಸ್ಥಿತಿಯಲ್ಲಿತ್ತೆಂದರೆ 1089 ಎಕರೆ ಜಮೀನಿನ ಸ್ವಾಧೀನವನ್ನು ಕೈಬಿಟ್ಟ ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳಲು ಯಾವುದೇ ಕಡತಗಳು/ದಾಖಲಾತಿಗಳು ಪ್ರಾಧಿಕಾರದಲ್ಲಾಗಲಿ, ಸರ್ಕಾರದ ಬಳಿಯಲ್ಲಾಗಲಿ ಇರಲಿಲ್ಲ, ಇಂಥ ದುಸ್ಥಿತಿಯಲ್ಲಿ 'ಯಾವುದೇ ಕಡತಗಳು ಲಭ್ಯವಿರುವುದಿಲ್ಲ' ಎಂದು ಕೋರ್ಟ್‌ನಲ್ಲಿ ಅಫಿಡೆವಿಟ್ ಸಲ್ಲಿಸಲಾಯ್ತು.

ವ್ಯಾಪಕ ಅಕ್ರಮಗಳ ಬಗ್ಗೆ ಪ್ರಾಧಿಕಾರವನ್ನು ತರಾಟೆಗೆ ತೆಗೆದುಕೊಂಡ ಹೈಕೋರ್ಟ್ 2005ರ ಏಪ್ರಿಲ್‌ನಲ್ಲಿ ಇಡೀ ಅರ್ಕಾವತಿ ಬಡಾವಣೆಗೆ ಸಂಬಂಧಿಸಿದ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಗಳನ್ನು ರದ್ದುಪಡಿಸಿ ಆದೇಶ ಹೊರಡಿಸಿತು. ಬೇರೆ ದಿಕ್ಕಿಲ್ಲದೆ ಬಿಡಿಎ ಒಂದಷ್ಟು ಪೂರಕ ದಾಖಲಾತಿಗಳೊಂದಿಗೆ ಮೇಲ್ಮನವಿ ಸಲ್ಲಿಸಿ, ಯೋಜನೆಗೆ ಅನುಮತಿ ನೀಡದೆ ಹೋದರೆ ಪ್ರಾಧಿಕಾರಕ್ಕೆ ಆರ್ಥಿಕ ಹೊರೆ ಬೀಳುತ್ತದೆ ಮತ್ತು ನಿವೇಶನಾಕಾಂಕ್ಷಿಗಳಿಗೆ ಅನ್ಯಾಯವಾಗುತ್ತದೆ ಎಂದು ಕೋರ್ಟಿಗೆ ಮನವರಿಕೆ ಮಾಡಿಕೊಟ್ಟಿತು.

ಇಂಥ ಸಂದಿಗ್ಧ ಸನ್ನಿವೇಶವನ್ನು ಅವಗಾಹನೆಗೆ ತೆಗೆದುಕೊಂಡ ಕೋರ್ಟು ಹಿಂದಿನ ಏಕ ಸದಸ್ಯ ಪೀಠದ ಆದೇಶವನ್ನು 2005ರ ನವೆಂಬರ್‌ನಲ್ಲಿ ರದ್ದುಪಡಿಸಿ ಹೊಸ ಆದೇಶ ಹೊರಡಿಸಿತು. ಮಾತ್ರವಲ್ಲದೆ 'ಈ ಪ್ರಕ್ರಿಯೆಯಲ್ಲಿ ತಾರತಮ್ಯವಾಗಿದೆಯೆಂದು ಭೂಮಾಲಿಕರು ಮಾಡುತ್ತಿರುವ ಆಪಾದನೆಯಲ್ಲಿ ಸತ್ಯಾಂಶವಿದೆ'ಯೆಂದು ಅಭಿಪ್ರಾಯಪಟ್ಟು, ಇತರೆ ರೈತರಿಗೆ ಅನ್ಯಾಯವಾಗದಂತೆ ಈ ಯೋಜನೆಯನ್ನು ಜಾರಿಗೊಳಿಸಲು ಆರು ಮಾರ್ಗಸೂಚಿಗಳನ್ನು ಸೂಚಿಸಿ, ಈ ಮಾರ್ಗಸೂಚಿಗಳ ಅನುಸಾರ ಯೋಜನೆಯನ್ನು ಜಾರಿಗೊಳಿಸಲು ಆದೇಶಿಸಿತು.

ಜಮೀನುಗಳನ್ನು ಹೊರತುಪಡಿಸಲು ಕೋರ್ಟ್ ಸೂಚಿಸಿದ ಆರು ಮಾರ್ಗ ಸೂಚಿಗಳು ಹೀಗಿವೆ.

1. ಹಸಿರು ವಲಯದಲ್ಲಿರುವ ಜಮೀನುಗಳು
2. ಕಟ್ಟಡ ನಿರ್ಮಾಣವಾಗಿರುವ ಜಮೀನುಗಳು
3. ಶೈಕ್ಷಣಿಕ, ಧಾರ್ಮಿಕ ಹಾಗೂ ದತ್ತಿ ಸಂಸ್ಥೆಗಳ ಕಟ್ಟಡ ಸಮೇತವಾದ ಜಾಗ
4. ನರ್ಸರಿ ಜಮೀನು
5. ಚಾಲ್ತಿಯಲ್ಲಿರುವ ಕೈಗಾರಿಕೆಗಳು
6. ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡದ ಜಮೀನಿಗೆ ಹೊಂದಿಕೊಂಡಿರುವ ಅಥವಾ ಪ್ರಕ್ರಿಯೆಗೆ ಒಳಪಟ್ಟು ನಂತರ ಕೈಬಿಡಲಾಗಿರುವ ಜಮೀನಿಗೆ ಹೊಂದಿಕೊಂಡಿರುವ ಜಮೀನುಗಳನ್ನು ಕೂಡ ಭೂಸ್ವಾಧೀನದಿಂದ ಕೈಬಿಡಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿತು.

ಈ ಮಾರ್ಗಸೂಚಿಗಳ ಅನ್ವಯ ಬಿಡಿಎ ಒಟ್ಟು 140 ಎಕರೆ 32 ಗುಂಟೆ ಜಮೀನನ್ನು ಭೂಸ್ವಾಧೀನದಿಂದ ಹೊರತುಪಡಿಸಿ, ಇನ್ನುಳಿದ ಜಮೀನುಗಳಲ್ಲಿ ಯೋಜನೆಯನ್ನು ಮುಂದುವರೆಸುವುದಾಗಿ ಹಲವಾರು ಅರ್ಜಿದಾರರಿಗೆ ಹಿಂಬರಹ ನೀಡಿತು. ಈ ಹಿಂಬರಹವನ್ನು ಪ್ರಶ್ನಿಸಿ ಕೆಲವು ಭೂಮಾಲಿಕರು ಹೈಕೋರ್ಟ್‌ಗೆ ಮತ್ತೆ ರಿಟ್ ಅರ್ಜಿ ಸಲ್ಲಿಸಿದರು. ಈ ಬಗ್ಗೆ 2006ರಲ್ಲಿ ಹೈಕೋರ್ಟ್‌ನಿಂದ ಒಂದು ವಿಶೇಷ ತೀರ್ಪು ಹೊರಬಂದಿದೆ. ಹೊಸತೀರ್ಪು ರೈತರಿಗೆ ನೀಡಿದ್ದ ಹಿಂಬರಹಗಳು ರದ್ದುಪಡಿಸಿ, ನ್ಯಾಯವನ್ನು ನೆಲೆಗೊಳಿಸುವ ದೃಷ್ಟಿಯಿಂದ ಇಡೀ ಪ್ರಕ್ರಿಯೆಯನ್ನು "ರೀ-ಡೂ' ಮಾಡುವಂತೆ ಅಂದರೆ ಮತ್ತೊಮ್ಮೆ ಇಡೀ ಪ್ರಕ್ರಿಯೆಯನ್ನು ನಡೆಸುವಂತೆ ಆದೇಶ ನೀಡಿತು.

ಈ ಮಧ್ಯೆ ಕೆಲವು ಭೂಮಾಲಿಕರು ಹೈಕೋರ್ಟ್ ತೀರ್ಪನ್ನು ಒಪ್ಪದೆ ಸುಪ್ರೀಂಕೋರ್ಟ್‌ಗೆ ಅಪೀಲ್ ಹೋದರು. 2010ರ ಮೇನಲ್ಲಿ ತೀರ್ಪು ನೀಡಿದ ಸುಪ್ರೀಂಕೋರ್ಟ್ ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠದ ತೀರ್ಪನ್ನು ಎತ್ತಿ ಹಿಡಿಯಿತು. ಈ ಪ್ರಕರಣದ ವಿಶಿಷ್ಟತೆಗಳ ಕಾರಣದಿಂದ ಮಾತ್ರ ಇಂಥಾ 'ರೀ-ಡೂ' ಆದೇಶವನ್ನು ಹೊರಡಿಸಿರುವುದಾಗಿಯೂ, ಇದನ್ನು ಜನರಲ್ ಗೈಡ್‌ಲೈನ್ ಆಗಿ ಅರ್ಥಮಾಡಿಕೊಳ್ಳಬಾರದೆಂದೂ ಸ್ಪಷ್ಟಪಡಿಸಿತ್ತು.

ಕೋರ್ಟ್ ಆದೇಶದ ದುರುಪಯೋಗ

ಹೀಗೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳೆರಡೂ ಏಕೀಭವಿಸಿ ಮರು-ಪ್ರಕ್ರಿಯೆ ನಡೆಸಲು ಆದೇಶಿಸಿದ್ದರ ಪರಿಣಾಮವೇನಾಯ್ತು ಗೊತ್ತೆ? ಕಳ್ಳರನ್ನ ಕಾವಲಿಗಿಟ್ಟಂತಾಯ್ತು, ಆಗ ಹೇಳಿಕೇಳಿ ಯಡ್ಡಿ ಸರ್ಕಾರ! ತನ್ನ ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತು ಅಂತಾ ಭಾವಿಸಿದ ಯಡ್ಡಿ ಕೋರ್ಟ್ ಆದೇಶವನ್ನು ಅತ್ಯಂತ ಲಾಭದಾಯಕವಾದ ರೀತಿಯಲ್ಲಿ ಜಾರಿಗೊಳಿಸಲು ಸ್ಕೆಚ್ ಹಾಕಿಬಿಟ್ಟರು. ಪರಿಣಾಮವಾಗಿ ಒಂದೇ ತಿಂಗಳಲ್ಲಿ, ಅಂದರೆ 2010ರ ಜೂನ್‌ನಲ್ಲಿ ಒಂದು ಅಧಿಸೂಚನೆ ಹೊರಡಿಸಿ, ನ್ಯಾಯಾಲಯದ ಆದೇಶ 'ಪಾಲಿಸಲಿಕ್ಕಾಗಿ'

ನಾಮ ಹಾಕೋರಿಗೆ ನಾನಾ ದಾರಿ!

ಅಧಿಕಾರಿಗಳೊಂದಿಗೆ ಶಾಮೀಲಾಗಿ ಸರ್ಕಾರಿ ಆಸ್ತಿ ಪಾಸ್ತಿಗೆ ಕನ್ನ ಹಾಕುವವರು ಬಳಸುವ ಮಾರ್ಗಗಳು ಒಂದಲ್ಲ ಎರಡಲ್ಲ, ಅದರಲ್ಲೂ ಬಿಡಿಎ ವಿಚಾರದಲ್ಲಿ ಈ ಮಾತು ಇನ್ನಷ್ಟು ಸತ್ಯ.

ಅರ್ಕಾವತಿ ಬಡಾವಣೆ ವ್ಯಾಪ್ತಿಯಲ್ಲಿ 'ಖಾದಿ ಗ್ರಾಮೋದ್ಯೋಗ ಕಾರ್ಯಕರ್ತರ ಗೃಹ ನಿರ್ಮಾಣ ಸಹಕಾರ ಸಂಘ' ಎಂಬ ಹೆಸರಿನ ಸಂಘವೊಂದಿದೆ. ಈ ಸಂಘ ತನ್ನ ಸದಸ್ಯರಿಗಾಗಿ ಜಮೀನು ಖರೀದಿಸಿ, ಸುಮಾರು 498 ನಿವೇಶನಗಳನ್ನು ಹಂಚಿಕೆ ಮಾಡಿರುವುದಾಗಿ ಹೇಳಿ ಕೋರ್ಟ್ ಮೆಟ್ಟಲೇರಿತ್ತು, ಹಾಗೆ ಹಂಚಿಕೆ ಮಾಡಲಾಗಿದ್ದ ಜಮೀನನ್ನು ಬಿಡಿಎ ಸ್ವಾಧೀನ ಮಾಡಿಕೊಂಡಿರುವುದರಿಂದ ಅದಕ್ಕೆ ಬದಲಿಯಾಗಿ 498 ಬಿಡಿಎ ನಿವೇಶನಗಳನ್ನು ಮಂಜೂರು ಮಾಡಬೇಕೆಂಬುದು ಅದರ ವಾದ.

ಹೇಗೋ ಮಾಡಿ ಅಂತೂ ತನ್ನ ಪರವಾದ ನ್ಯಾಯಾಲಯದ ಆದೇಶವೊಂದನ್ನು ಪಡೆದುಕೊಳ್ಳುವಲ್ಲಿ ಸಂಘ ಯಶಸ್ವಿಯಾಯಿತು. ಹೀಗೆ ಸ್ವಾಧೀನಪಡಿಸಿಕೊಂಡಿದೆ ಎಂದು ಹೇಳಲಾದ ಭೂಮಿಯ ವಿವರಗಳನ್ನು ಪರಿಶೀಲಿಸಲಾಗಿ ಅಂತಿಮವಾಗಿ ಕಂಡುಬಂದದ್ದು 13 ಎಕರೆ ಭೂಮಿ ಮಾತ್ರ. ಯಾವ ರೀತಿಯಲ್ಲಿ ಲೆಕ್ಕ ಹಾಕಿದರೂ ಈ 13 ಎಕರೆಯಲ್ಲಿ 498 ನಿವೇಶನಗಳನ್ನು ಹಂಚಲು ಸಾಧ್ಯವಿಲ್ಲ, ಹೆಚ್ಚೆಂದರೆ 200 ನಿವೇಶನಗಳನ್ನು ವಿಭಾಗಿಸಬಹುದು.

ಅಂತಿಮವಾಗಿ ಬಿಡಿಎ ಅಧಿಕಾರಿಗಳು ಈ ಆದೇಶವನ್ನು ಪಾಲಿಸುವುದರಿಂದ ಬಿಡಿಎಗೆ ಆರ್ಥಿಕ ಹೊರೆಯಾಗುತ್ತದೆ ಎಂದು ತೀರ್ಮಾನಿಸಿ, 'ಖಾದಿ' ಸಂಘದ ಜಮೀನನ್ನು ಕೈಬಿಡಲು ತೀರ್ಮಾನ ಕೈಗೊಂಡು ಒಳ್ಳೆಯ ಕೆಲಸ ಮಾಡಿದ್ದಾರೆ.

498 ಸೈಟು ಲಪಟಾಯಿಸಲು ಸ್ಕೆಚ್ ಹಾಕಿದ್ದ ಆಸಾಮಿಗಳು ಕಳೆದುಕೊಂಡ ಹಣಕ್ಕೆ ಬಡ್ಡಿ ಬರುವುದಿರಲಿ, ಅಸಲೇ ಇಲ್ಲದಂತಾಗಿದೆ. ಹೀಗೆ ಕೆದಕುತ್ತಾ ಹೋದರೆ ಅರ್ಕಾವತಿಯಲ್ಲಿ ಬಚ್ಚಿಟ್ಟುಕೊಳ್ಳುವ ಉಪಕಥೆಗಳಿಗೆ ಲೆಕ್ಕವೇ ಇಲ್ಲ.



ಎನ್‌ಓಸಿ ಡೀಲಿಂಗ್!

ಅರ್ಕಾವತಿ ಡಿನೋಟಿಫಿಕೇಷನ್ ಅಕ್ರಮದ ಚರ್ಚೆಯಲ್ಲಿ ಎನ್‌ಓಸಿ (ನಿರಾಕ್ಷೇಪಣಾ ಪತ್ರ) ಕೊಡುವ ಹೆಸರಿನಲ್ಲಿ ಬಿಡಿಎನವರು ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂಬ ಆರೋಪವೊಂದು ಕೇಳಿಬಂದಿದೆ. ಏನಿದು ಎನ್‌ಓಸಿ ಡೀಲಿಂಗ್ ಅಂತಾ ಕೆದಕುತ್ತಾ ಹೋದರೆ ನಾನಾ ಒಳಸುಳಿಗಳು ತೆರೆದುಕೊಳ್ಳುತ್ತವೆ.

ಅರ್ಕಾವತಿ ಬಡಾವಣೆಗಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು ಒಟ್ಟು 3839 ಎಕರೆ. ಆದರೆ ಈಗ ಅಂತಿಮವಾಗಿ ಯೋಜನೆಗೆ ಲಭ್ಯವಾಗಿರುವ ಭೂಮಿ 1766 ಎಕರೆ ಮಾತ್ರ! ಅಂದರೆ ಬರೋಬ್ಬರಿ 2073 ಎಕರೆ ಭೂಮಿ ನಾನಾ ಕಾರಣಗಳಿಂದಾಗಿ ಯೋಜನೆಯಿಂದ ಕೈಬಿಟ್ಟಂತಾಯ್ತು. ರಿಯಲ್ ಎಸ್ಟೇಟ್ ಕುಳಗಳಿಗೆ ಹೀಗೆ ಕೈಬಿಟ್ಟಿರುವ ಜಮೀನು ಹಾಟ್ ಕೇಕ್ ಇದ್ದಹಾಗೆ.

ಆದರೆ ಇಲ್ಲೊಂದು ಪ್ರಮುಖವಾದ ತೊಡಕಿದೆ. ಬಿಡಿಎ ನೋಟಿಫಿಕೇಷನ್ ಪೆಂಡಿಂಗ್ ಇರುವ ಕಾರಣ ಈ ಭೂಮಿಯ ಮೇಲೆ ಹಣ ಹೂಡಲು ಯಾರೂ ಮುಂದೆ ಬರುವುದಿಲ್ಲ. ಇದಕ್ಕಾಗಿ ಹುಟ್ಟಿಕೊಂಡಿದ್ದೇ ಎನ್‌ಓಸಿ ಡೀಲಿಂಗ್ ಅಥವಾ ಎಂಡಾರ್ಸ್‌ಮೆಂಟ್(ಹಿಂಬರಹ) ಡೀಲಿಂಗ್!! ಅಂದರೆ ಬಿಡಿಎನ ಲೆಟರ್‌ಹೆಡ್‌ನಲ್ಲಿ 'ಅರ್ಜಿದಾರರ ಜಮೀನು ಬಿಡಿಎ ನಿರ್ಮಿಸುತ್ತಿರುವ ಅರ್ಕಾವತಿ ಬಡಾವಣೆಯ ವ್ಯಾಪ್ತಿಗೆ ಬರುವುದಿಲ್ಲ' ಎಂಬರ್ಥ ಬರುವಂತೆ ನಾಲ್ಕು ಸಾಲುಗಳನ್ನು ಬರೆದು ಅದಕ್ಕೆ ಅಧಿಕೃತ ಮುದ್ರೆ, ಸಹಿ ಹಾಕಿಕೊಟ್ಟರೆ ಅಲ್ಲಿಗೆ ಮುಗೀತು. ಆ ಜಮೀನಿನ ಬೆಲೆ ಕೋಟಿಗಳ ಲೆಕ್ಕದಲ್ಲಿ ದುಪ್ಪಟ್ಟಾಗಿ ಬಿಡುತ್ತದೆ.

ಹಣ ತೋರಿಸಲಿಕ್ಕೂ ಹಣ ವಸೂಲಿ ಮಾಡುತ್ತಿರುವ ನಮ್ಮ ಇಂದಿನ ವ್ಯವಸ್ಥೆಯಲ್ಲಿ ಇಂಥಾ ಸದವಕಾಶವನ್ನು ಅಧಿಕಾರಿಗಳು ಬಿಟ್ಟುಕೊಡುತ್ತಾರೆಯೆ? ಇದನ್ನು ಚೆನ್ನಾಗಿಯೇ ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇಂತಿಂಥಾ ಗ್ರಾಮದ ಎನ್‌ಓಸಿಗೆ ಇಂತಿಷ್ಟು ಲಕ್ಷ ಎಂದು ದರ ನಿಗದಿಯಾಗಿ ಯಾವುದೋ ಕಾಲವಾಗಿದೆ. ರಿಯಲ್ ಎಸ್ಟೇಟ್ ದರ ಏರಿದಂತೆ ಎನ್‌ಓಸಿ ದರವೂ ಏರಿಕೆಯಾಗಿದೆ. ಈ ಪ್ರದೇಶದಲ್ಲಿ ಎಕರೆ ಜಮೀನಿನ ಬೆಲೆ 4 ರಿಂದ 8 ಕೋಟಿಯವರೆಗೂ ಇದೆ. ಹೀಗಾಗಿ ಹಾಲಿ ಒಂದು ಎಕರೆ ಎನ್‌ಓಸಿ ಪತ್ರಕ್ಕೆ 25 ರಿಂದ 75 ಲಕ್ಷದವರೆಗೂ ದರ ನಿಗದಿಯಾಗಿದೆ ಎಂಬುದು ರಿಯಲ್ ಎಸ್ಟೇಟ್ ಲೋಕದಲ್ಲಿ ಒಂದು ಓಪನ್ ಸೀಕ್ರೆಟ್.

ಕೇವಲ ನಾಲ್ಕು ಸಾಲಿನ ಒಂದು ಎನ್‌ಓಸಿ ಪತ್ರಕ್ಕೆ ನಿಜಕ್ಕೂ ಇಷ್ಟೊಂದು ಹಣ ಕೊಡುತ್ತಾರಾ? ಎಂಬ ಪ್ರಶ್ನೆ ನಿಮಗೆ ಮೂಡುವುದು ಸಹಜ. ಆದರೆ ರಿಯಲ್ ಎಸ್ಟೇಟ್ ಆಸಾಮಿಗಳ ಲೆಕ್ಕಾಚಾರವೇ ಬೇರೆ. ಒಂದು ಎನ್‌ಓಸಿ ಪತ್ರದಿಂದ 3 ಕೋಟಿಯ ಭೂಮಿ 6 ಕೋಟಿ ಆಗೋದಾದರೆ ಅದರಲ್ಲಿ ಒಂದು ಪಾಲನ್ನು ಅಧಿಕಾರಿಗಳಿಗೆ ಕೊಟ್ಟರೆ ನಮಗೆ ಇನ್ನೂ ಮೂರುಪಾಲು ಲಾಭ ಉಳಿಯುತ್ತದಲ್ಲಾ ಎಂಬುದು ಅವರ ತರ್ಕ.

...ಆಪ್ತರಾದ ನಾಲ್ಕು ಮಂದಿ ವಿಶೇಷ ...ಸ್ವಾಧೀನಾಧಿಕಾರಿಗಳನ್ನು ನೇಮಿಸಿದರು. ಅವರಿಗೆ ...ನಾಲ್ಕು ಗ್ರಾಮಗಳ ಉಸ್ತುವಾರಿ ವಹಿಸಿ, ಅವರಿಗೆ ...ಜುಡಿಷಿಯಲ್ (ಅರೆ ನ್ಯಾಯಾಲಯ) ...ರವನ್ನು ಕೊಡಮಾಡಿದರು.

...ಕೈಕೋರ್ಟ್ ಹಾಕಿಕೊಟ್ಟಿದ್ದ 6 ...ಲೈನ್ಸ್‌ಗಳಲ್ಲಿ ಕೊನೆಯ ಅಂಶ ಬಹಳ ...ವಾದುದು. ಯಾಕೆಂದರೆ ಈ ಅಂಶವನ್ನೇ ...ದ ದಿನಗಳಲ್ಲಿ ಭ್ರಷ್ಟ ಅಧಿಕಾರಿಗಳು, ...ಕಾರಣಿಗಳು, ರಿಯಲ್ ಎಸ್ಟೇಟ್ ದಂಧೆಯವರು ... ಮೂಗಿನ ನೇರಕ್ಕೆ ವ್ಯಾಖ್ಯಾನಿಸಿ ಕೋಟಿಗಳನ್ನು ...ಕೊಂಡಿದ್ದು. ಈ ಮಾರ್ಗಸೂಚಿಯನ್ನು ...ಮಮಾಡಿ ಅಧಿಸೂಚನೆಯಿಂದ ...ತುಪಡಿಸುವ ಹೊಸ ದಂಧೆಯೊಂದು ...ತ್ ರಿಯಲ್ ಎಸ್ಟೇಟ್ ಭಾಷೆಯಲ್ಲಿ 'ಬಿಡಿಎ ...ಟ್' ದಂಧೆಯೊಂದು ತಲೆಯೆತ್ತಿದಂತಾಯ್ತು.

...ೀಗೆ ತಮಗೆ ಸಿಕ್ಕ ಅಧಿಕಾರವನ್ನು ...ಪಯೋಗಪಡಿಸಿಕೊಂಡ' ಈ ನಾಲ್ವರು ...ರಿಗಳು ಸುಮಾರು 544 ಎಕರೆ 31ಗುಂಟೆ ...ನನ್ನು 'ಡಿಲೀಟ್' ಮಾಡಿ ಆದೇಶ ...ಡಿಸಿದರು. ಇದಲ್ಲದೆ ಸುಮಾರು 40 ಎಕರೆ ...ನು ಈಗಾಗಲೇ ಕೆಐಎಡಿಬಿಯ ...ಸ್ವಾಧೀನದಲ್ಲಿದ್ದು, ಅದೂ ಕೂಡ ಕೋರ್ಟ್ ...ಏರಿತ್ತು. ಬಿಡಿಎ ಅನಿವಾರ್ಯವಾಗಿ ಈ ...ನನ್ನು ಕೈಬಿಡಬೇಕಾಯ್ತು. ಇದಿಷ್ಟೇ ಆಗಿದ್ದರೂ ...ಯಿಲ್ಲ. ಮೇ 2007ರಿಂದ ಆಗಸ್ಟ್ 2010ರ ...ನ ಅವಧಿಯಲ್ಲಿ ಅಧಿಕಾರದಲ್ಲಿದ್ದ ವಿವಿಧ ...ರಗಳು ಭೂಸ್ವಾಧೀನ ಕಾಯ್ದೆ ಕಲಂ 48(1)ರ ...ಏ 198 ಎಕರೆ 20 ಗುಂಟೆ ಜಮೀನನ್ನು ...ೋಟಿಫೈ ಮಾಡಿದ್ದಾರೆ. ಈ ವಿಚಾರದಲ್ಲಿ ಭಾರೀ ...ಲ್‌ಮಾಲ್ ನಡೆದಿದೆ ಎಂಬುದರಲ್ಲಿ ಯಾವುದೇ ...ಮಾನವಿಲ್ಲ.

...ಕುಮಾರಸ್ವಾಮಿ ಅವಧಿಯಲ್ಲಿ 78 ಎ - 28 ..., ಯಡ್ಯೂರಪ್ಪನ ಅವಧಿಯಲ್ಲಿ 72 ಎ - 12 ... ರಾಜ್ಯಪಾಲರ ಆಡಳಿತದಲ್ಲಿ 46 ಎ - 35 ...ದ ಹಾಗೂ ಸದಾನಂದ ಗೌಡರ ಅವಧಿಯಲ್ಲಿ 0 ... ಗುಂಟೆ ಜಮೀನು- ಹೀಗೆ ಒಟ್ಟು 198 ... 20 ಗುಂಟೆ ಜಮೀನನ್ನು ಡೀ-ನೋಟಿಫೈ ...ಲಾಗಿದೆ.

...ಇಲ್ಲಿ ನಾವು ಗಮನಿಸಲೇಬೇಕಾದ ಪ್ರಮುಖ ...ವೇನೆಂದರೆ ಈ ಮೇಲ್ಕಂಡ ಡಿ-ನೋಟಿಫಿಕೇಷನ್ ...ಕ್ಕೆ ಸಂಬಂಧಿಸಿದಂತೆ, ನಿಗದಿತ ...ಸ್ವಾಧೀನಾಧಿಕಾರಿಗಳ ಯಾವುದೇ ವರದಿ / ...ಗಳೂ ಇರಲಿಲ್ಲ. ಇದು ಆಯಾ ಸರ್ಕಾರಗಳು ... ಅಧಿಕಾರವನ್ನು ಚಲಾಯಿಸಿ ಮಾಡಿದ ...ೋಟಿಫಿಕೇಷನ್‌ಗಳು!!

...ಜೆಪಿಯ ಅಂದಿನ ಮುಖ್ಯಮಂತ್ರಿ ...ಯೂರಪ್ಪ ಜೈಲಿಗೆ ಹೋಗಲು ಪ್ರಮುಖ ...ವೇ ಈ ಅರ್ಕಾವತಿ ಡಿನೋಟಿಫಿಕೇಷನ್ ದಂಧೆ. ... ರಾಚೇನಹಳ್ಳಿಗೆ ಸಂಬಂಧಿಸಿದ 14 ಎಕರೆ ...ನನ್ನು ಡಿನೋಟಿಫೈ ಮಾಡಲು ಸನ್ಮಾನ್ಯರು ... ಕುಟುಂಬದ ಸಂಸ್ಥೆಯೊಂದಕ್ಕೆ ಕೋಟಿಗಟ್ಟಲೆ ... ಸ್ವೀಕರಿಸಿ ಸಿಕ್ಕಿಬಿದ್ದು ಅಧಿಕಾರ ಕಳೆದುಕೊಂಡು, ... ಪಾಲಾಗಬೇಕಾಯ್ತು. ಅದೇ ರೀತಿಯ ತನಿಖೆ ...ದ್ದೇ ಆದಲ್ಲಿ ಉಳಿದವರ ಗತಿ ಏನಾಗಬಹುದು ...ದು ನೀವು ಊಹೆಗೆ ಬಿಟ್ಟದ್ದು.

...ೀಗೆ ಡಿ-ನೋಟಿಫಿಕೇಷನ್ ಫಲಾನುಭವಿಗಳಲ್ಲಿ ... ರಾಜಕಾರಣಿಗಳು ಮಾತ್ರವಲ್ಲ ಭಾರೀ ...ಗಳೂ ಇದ್ದಾರೆ. ಮಾನ್ಯತಾ ಟೆಕ್‌ಪಾರ್ಕ್‌ಗೆ 60 ... ಹೌಸಿಂಗ್ ಸೊಸೈಟಿಗೆ 26 ಎಕರೆ ಇತ್ಯಾದಿಗಳು ಒಳಗೊಂಡಿವೆ. ಇದಲ್ಲದೆ ತೇಜರಾಜ್ ಗುಲೇಚ ಎಂಬ ಮಾರ್ವಾಡಿಯೊಬ್ಬ ಹತ್ತಾರು ರೈತರ ಹೆಸರಿನಲ್ಲಿ ಜಿ.ಪಿ.ಎ ಪಡೆದು ಕೋರ್ಟ್ ಮೊರೆಹೋಗಿ ಜಮೀನುಗಳನ್ನು ಹೊರತುಪಡಿಸುವ ಆದೇಶವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಹೀಗೆ ಅರ್ಕಾವತಿ ಯೋಜನೆ ಹುಚ್ಚನ ಮದ್ವೇಲಿ ಉಂಡೋನೇ ಜಾಣ ಎಂಬಂತಾಗಿ ಹೋಗಿಬಿಟ್ಟಿತ್ತು. ಹೀಗೆ ಒಟ್ಟಾರೆ 983 ಎಕರೆ 33 ಗುಂಟೆ ಜಮೀನು ಬಿಡಿಎ ಕೈಬಿಟ್ಟು ಹೋಗಿ ಅರ್ಕಾವತಿ ಬಡಾವಣೆ ಮತ್ತಷ್ಟು ಚಿಕ್ಕದಾಗಿ, ಅಂತಿಮವಾಗಿ ಈಗ ಉಳಿದಿರುವುದು ಕೇವಲ 1766 ಎಕರೆ 07 ಗುಂಟೆ ಮಾತ್ರ!

ಸಿದ್ದರಾಮಯ್ಯ ಪಾತ್ರವೇನು?

ಹೀಗೆ ಅಳಿದುಳಿದ 1766 ಎಕರೆ ಪ್ರದೇಶಕ್ಕೆ ಮರು ಪರಿಷ್ಕೃತ ಯೋಜನೆ ಸಿದ್ಧಪಡಿಸಿ ಅದರ ಅನುಮೋದನೆಗಾಗಿ ಬಿಡಿಎ ಅಧಿಕಾರಿಗಳು ಕಾಯುತ್ತಾ ಕೂತರು. ಆದರೆ ಯಾವಾಗ ಡಿನೋಟಿಫಿಕೇಷನ್ ಕೇಸಿನಲ್ಲಿ ಯಡ್ಡಿ, ಗಣಿ ಅವ್ಯವಹಾರದ ಕೇಸಿನಲ್ಲಿ ರೆಡ್ಡಿ ಜೈಲುಪಾಲಾದರೋ ಆಗಿನಿಂದ ಅಧಿಕಾರಸ್ಥ ಕೇಸರಿ ಕೂಟದ ಚೆಡ್ಡಿಯಲ್ಲಿ ನಡುಕ ಉಂಟಾಗಿದ್ದು ಸುಳ್ಳಲ್ಲ. ಹೀಗಾಗಿ ಅರ್ಕಾವತಿ ಪರಿಷ್ಕೃತ ಯೋಜನೆಯನ್ನು ಜಾರಿ ಮಾಡಲು ಹಿಂದೇಟು ಹಾಕುತ್ತಾ, ಮೀನ ಮೇಷ ಎಣಿಸುತ್ತಾ ಕಾಲ ಕಳೆದುಬಿಟ್ಟರು. ಅರ್ಕಾವತಿ ಭೂತ ಸಿದ್ದು ಸರ್ಕಾರದವರೆಗೂ ಮುಂದುವರೆಯಲು ಇದೇ ಕಾರಣ.

ಅರ್ಕಾವತಿ ನಿವೇಶನಗಳಿಂದ ವಂಚಿತರಾಗಿದ್ದ ಫಲಾನುಭವಿಗಳು ಮತ್ತೊಂದೆಡೆ ಕೋರ್ಟ್ ಮೆಟ್ಟಿಲೇರಿ ಯೋಜನೆಯನ್ನು ಪೂರ್ಣಗೊಳಿಸುವಂತೆ ಕೋರಿದ ಹಲವು ಪ್ರಕರಣಗಳಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಿದ ಕೋರ್ಟ್ ಒಂದು ತಿಂಗಳ ಕಾಲಾವಕಾಶ ನೀಡಿ ಅದರೊಳಗೆ ಪರಿಷ್ಕೃತ ಯೋಜನೆಯನ್ನು ಘೋಷಿಸುವಂತೆ ಆದೇಶಿಸಿತ್ತು. ಇದೆಲ್ಲಾ ಸಾಲದು ಎಂಬಂತೆ ಈ ಅರ್ಕಾವತಿ ಪ್ರದೇಶದ ಕೆಂಪಾಪುರ ಗ್ರಾಮದಲ್ಲಿ ಸ್ವತಃ ಬಿಜೆಪಿ ಶಾಸಕ ಹಾಗೂ ಮಾಜಿ ಮಂತ್ರಿ ಗುರುಪಾದಪ್ಪ ನಾಗಮಾರಪಲ್ಲಿಯ ಜಮೀನು ಕೂಡ ಇದೆ. ಪರಿಷ್ಕೃತ ಯೋಜನೆಯನ್ನು ಘೋಷಿಸಲು ಸರ್ಕಾರ ವಿಳಂಬ ಮಾಡಿ, ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿದೆ ಎಂದು ಪ್ರತಿಪಾದಿಸಿದ ನಾಗಮಾರಪಲ್ಲಿ ನ್ಯಾಯಾಂಗನಿಂದನೆ ದೂರು ದಾಖಲಿಸಿಬಿಟ್ಟ. ಈ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ಹೈಕೋರ್ಟ್



ಬಿಡಿಎ ಮತ್ತು ಸರ್ಕಾರಕ್ಕೆ 2014ರ ಏಪ್ರಿಲ್ 1ನೇ ತಾರೀಕು ನೋಟಿಸ್ ಜಾರಿ ಮಾಡಿತ್ತು. ಇಂಥಾ ಅನಿವಾರ್ಯತೆಯಲ್ಲಿ ಸಿದ್ದರಾಮಯ್ಯ ಸರ್ಕಾರ ಮರು ಪರಿಷ್ಕೃತ ಯೋಜನೆಗೆ ಅನುಮೋದನೆ ಕೊಟ್ಟಿದೆ. ಸಿದ್ದರಾಮಯ್ಯ ಸಹಿ ಹಾಕಿದ್ದಾರೆ ಎಂದು ಬಿಜೆಪಿಗರು ಬೊಬ್ಬೆ ಹೊಡೆಯುತ್ತಿರುವುದು ಇದೇ ಸಹಿಯ ಬಗ್ಗೆ.

ಇದಲ್ಲದೆ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಯೋಜನೆಯಿಂದ ಕೈಬಿಟ್ಟಿರುವ ಜಮೀನುಗಳೇನಾದರೂ ಇವೆಯೆ? ಎಂದು ಪ್ರಶ್ನಿಸಿದರೆ ಖಂಡಿತಾ ಇವೆ. ಅವು ಒಟ್ಟು 5 ಎಕರೆ ಜಮೀನು! ಅದರಲ್ಲಿ ಗುರುಪಾದಪ್ಪನ ಜಮೀನೂ ಇದೆ. ಸದರಿ 5 ಎಕರೆ ಜಮೀನುಗಳನ್ನು ಸ್ವಾಧೀನದಿಂದ ಕೈಬಿಡುವಂತೆ ನ್ಯಾಯಾಲಯದ ಸ್ಪಷ್ಟ ಆದೇಶವಿದೆ. ಇಂಥಾ ಹಿನ್ನೆಲೆಯಲ್ಲಿ ಯಾರೇ ಮುಖ್ಯಮಂತ್ರಿಯಾದರೂ ಏನು ಮಾಡಬಹುದು? ಸಿದ್ದರಾಮಯ್ಯ ಅದನ್ನೇ ಮಾಡಿದ್ದಾರೆ.

ಬಿಜೆಪಿಗಳಿಗೆ ಇದೆಲ್ಲಾ ಅರ್ಥವಾಗುತ್ತಿಲ್ಲವೇ? ಖಂಡಿತಾ ಅರ್ಥವಾಗುತ್ತಿದೆ. ಅವರೇನು ಅಷ್ಟು ದಡ್ಡರಲ್ಲ. ಆದರೆ ಈ ಗದ್ದಲ ಯಾಕೆಂದರೆ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಹೋರಾಡಲು ಅವರಿಗೆ ಸೂಕ್ತ ವಿಷಯ ಸಿಗುತ್ತಿಲ್ಲ. ಮೊನ್ನೆ ಮೊನ್ನೆ ಚೆಡ್ಡಿಗಳ ದೆಹಲಿ ಬಾಸ್ ಅಮಿತ್ ಶಾ ಬೆಂಗಳೂರಿಗೆ ಬಂದು ಇಲ್ಲಿನ ಎಲ್ಲಾ ನಾಯಕರನ್ನು ಕರೆದು ಸಿದ್ದು ಸರ್ಕಾರದ ಕ್ಲೀನ್ ಇಮೇಜಿಗೆ ಹೇಗಾದರೂ ಪೆಟ್ಟುಕೊಡಬೇಕೆಂದು, ಯಾವುದಾದರೂ ವಿಷಯ ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ತೀವ್ರ ಹೋರಾಟ ನಡೆಸಬೇಕೆಂದು ತಾಕೀತು ಮಾಡಿ ಹೋಗಿದ್ದಾನೆ. ಪರಿಣಾಮವಾಗಿಯೇ ಈ ವಿವೇಚನಾರಹಿತ ಬೊಬ್ಬೆ!

ಇಲ್ಲಿ ಮತ್ತೊಂದು ವಿಷಯವನ್ನು ಸಾಂದರ್ಭಿಕವಾಗಿ ನೆನಪಿಸುವುದು ಉಚಿತ. ಭ್ರಷ್ಟ ರಾಜಕಾರಣಿಗಳಿಗೆ ಸಿಂಹಸ್ವಪ್ನವಾಗಿ ಕಾಡಿದ ಜಸ್ಟೀಸ್ ಸಂತೋಷ್ ಹೆಗ್ಡೆಯವರನ್ನು ಕರ್ನಾಟಕದ ಜನತೆ ಎಂದೂ ಮರೆಯಲು ಸಾಧ್ಯವಿಲ್ಲ. ಅವರ ಲೋಕಾಯುಕ್ತ ತಂಡದ ದಕ್ಷ ಹಾಗೂ ಪ್ರಾಮಾಣಿಕ ಪ್ರಯತ್ನದಿಂದಾಗಿ ವಿಧಾನಸೌಧವನ್ನೇ ಖರೀದಿ ಮಾಡಿ ರಾಜ್ಯ ಆಳುತ್ತೇವೆ ಎಂಬಂತೆ ಅಬ್ಬರಿಸುತ್ತಿದ್ದ ಗಣಿಧಣಿಗಳಿಗೆ ನ್ಯಾಯದ ಕುಣಿಕೆ ಬೀಳುವಂತಾಯ್ತು. ಯಾವುದೇ ಎಗ್ಗೂ, ಸಿಗ್ಗೂ ಇಲ್ಲದೆ, ಕನಿಷ್ಟ ಕಾನೂನಿನ ಭಯವೂ ಇಲ್ಲದೇ ಹತ್ತಾರು ಕೋಟಿ ಭ್ರಷ್ಟ ಹಣವನ್ನು ಚೆಕ್ ಮೂಲಕ ಪಡೆದುಕೊಂಡಿದ್ದ ಮುಖ್ಯಮಂತ್ರಿ ಯಡ್ಡಿಯನ್ನು ಹಾಗೇ ಬಿಟ್ಟುಬಿಟ್ಟಿದ್ದರೆ ಕರ್ನಾಟಕದ ರಾಜಕಾರಣ ಯಾವ ಸ್ಥಿತಿಗೆ ತಲುಪಿರುತ್ತಿತ್ತು ಎಂಬುದನ್ನು ನೆನಪಿಸಿಕೊಂಡರೆ ದಿಗಿಲೆನಿಸುತ್ತದೆ. ಇಂಥಾ ಪರಮ ಬ್ರಹ್ಮಾಂಡ ಭ್ರಷ್ಟರಿಗೆ ಕಡಿವಾಣ ಹಾಕಿ ದೇಶಮಟ್ಟದಲ್ಲಿ ರಾಜ್ಯದ ಮರ್ಯಾದೆ ಉಳಿಸಿದ ಕಾರಣಕ್ಕಾಗಿ ಕರ್ನಾಟಕದ ಸಾತ್ವಿಕ ಜನತೆ ಸಂತೋಷ್ ಹೆಗ್ಡೆಯವರಿಗೆ ಎಂದೆಂದಿಗೂ ಆಭಾರಿಯಾಗಿರಬೇಕಲ್ಲವೆ?

ಆದರೆ ಇಂಥಾ ಲೋಕಾಯುಕ್ತರ ಬಗ್ಗೆ ಈ ಮೋದಿ ಶಿಷ್ಯರು ಹೇಗೆ ನಡೆದುಕೊಂಡಿತ್ತು ಎಂಬುದನ್ನು ಒಮ್ಮೆ ನೆನಪಿಸಿಕೊಳ್ಳಿ. ಸಂತೋಷ ಹೆಗ್ಡೆಯವರನ್ನು ಕಾಂಗ್ರೆಸ್ ಏಜೆಂಟ್ ಎಂದು ಕರೆದು ತಮ್ಮ ಎಲುಬಿಲ್ಲದ ನಾಲಗೆ ಹರಿಯಬಿಟ್ಟಿದ್ದರು. ಅಂಥಾ ಮಹಾನುಭಾವರನ್ನೇ ಬಿಡದೆ ಅವರಿಗೆ ಮಸಿ ಹಚ್ಚಲು ಯತ್ನಿಸಿದ ಈ ಕೂಟಕ್ಕೆ ಕಾಂಗ್ರೆಸ್ ಪಕ್ಷದ ಒಬ್ಬ ರಾಜಕಾರಣಿ ಯಾವ ಲೆಕ್ಕ ಹೇಳಿ.

ಹೀಗಾಗಿ ತಮ್ಮ ಗುರು ಅಮಿತ್ ಶಾ ಆದೇಶದ ಹುರುಪಿನಲ್ಲಿ ಕೇಸರಿ ಕೂಟ ಸಿದ್ದರಾಮಯ್ಯನವರ



ವಿರುದ್ಧ ಗದ್ದಲ ಎಬ್ಬಿಸಿದೆ. ನಿಜಕ್ಕೂ ಸರಿಯಾದ ತನಿಖೆ ನಡೆದದ್ದೇ ಆದರೆ ಭ್ರಷ್ಟ ಜನತಾ ಪಕ್ಷದ ಮತ್ತಷ್ಟು ಡಿನೋಟಿಫಿಕೇಷನ್ ಡೀಲ್‌ಗಳಷ್ಟೇ ಹೊರಬೀಳಬಹುದೇ ಹೊರತು ಸಿದ್ದು ಸರ್ಕಾರಕ್ಕೂ ಈ ಅರ್ಕಾವತಿ ಬಡಾವಣೆ ಡೀಲ್‌ಗೂ ಯಾವುದೇ ಸಂಬಂಧ ಕಂಡುಬರುತ್ತಿಲ್ಲ. ಸದನದಲ್ಲಿ ಈ ಬಗ್ಗೆ ಬೇಡಿಕೆ ಬಂದಾಗಲೇ ನಿವೃತ್ತ ನ್ಯಾಯಮೂರ್ತಿ ಕೆಂಪಣ್ಣನವರ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಿದ್ದಾರೆ. ತನಿಖೆ ಪ್ರಗತಿಯಲ್ಲಿದೆ. ಆದರೆ ಆಯೋಗಕ್ಕೆ ದಾಖಲಾತಿಗಳನ್ನು ಒದಗಿಸಿಲ್ಲವೆಂಬ ಊಹಾಪೋಹಗಳನ್ನು ಹರಿಯಬಿಡಲಾಗುತ್ತಿದೆ. ವಾಸ್ತವಾಂಶವೇನೆಂದರೆ ಎಲ್ಲ ದಾಖಲೆಗಳು ಸಾರ್ವಜನಿಕರಿಗೂ ಲಭ್ಯವಿದ್ದು, ಈಗಾಗಲೇ ಮಾಹಿತಿ ಹಕ್ಕಿನಡಿ ಹಲವರು ಈ ದಾಖಲೆಗಳನ್ನು ಪಡೆದುಕೊಂಡಿದ್ದಾರೆ. ಹತ್ತಾರು ಕೋರ್ಟ್ ಕೇಸುಗಳಲ್ಲೂ ಈ ದಾಖಲೆಗಳು ನ್ಯಾಯಾಲಯದಲ್ಲಿವೆ. ಇದರಲ್ಲಿ ಗೌಪ್ಯವಾದದ್ದು ಏನೂ ಇಲ್ಲವೆಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಗೌಪ್ಯತೆ ಇದ್ದರೂ ಅದು ಸಿದ್ದು ಸರ್ಕಾರಕ್ಕೆ ಸಂಬಂಧಿಸಿದ್ದಲ್ಲ ಎಂಬುದನ್ನಂತೂ ಖಚಿತವಾಗಿ ಹೇಳಬಹುದು.


ಹಿಂದುಮುಂದು ವಿಚಾರಿಸದ ಮಾಧ್ಯಮಗಳು ಮಾಮೂಲಿಯಂತೆ ಟಿಆರ್‌ಪಿ ಪತ್ರಿಕೋದ್ಯಮ ನಡೆಸುತ್ತಿವೆ. ಆದರೆ ಬರಬರುತ್ತಾ ಬಿಜೆಪಿಗಳ ಬಾಣ ಅವರಿಗೇ ಬೂಮರಾಂಗ್ ಆಗುವ ಲಕ್ಷಣಗಳು ಕಂಡುಬರುತ್ತಿರುವುದು ಒಂದು ಕುಚೋದ್ಯವೇ ಸರಿ. ಪರಿಸ್ಥಿತಿ ತಮ್ಮ ವಿರುದ್ಧವೇ ತಿರುಗುತ್ತಿರುವುದನ್ನು ಕಂಡು ಬಿಜೆಪಿಗಳ ಸ್ಥಿತಿ ಬಿಸಿಹಾಲು ಕುಡಿದ ತೆನಾಲಿಯ ಬೆಕ್ಕಿನಂತಾಗಿದೆ. ಆದ್ದರಿಂದ ಈಗ ಕಾನೂನು ಹೋರಾಟ ನಡೆಸುವ, ಸ್ವಲ್ಪ ದಿನ ಕಾದು ನೋಡುವ ಮಾತುಗಳನ್ನಾಡುತ್ತಾ ಮುಖ ಉಳಿಸಿಕೊಳ್ಳುವ ಯತ್ನದಲ್ಲಿದ್ದಾರೆ.

ಬೆಟ್ಟ ಅಗೆದು ಇಲಿ ಹಿಡಿದವರ ಕತೆಯನ್ನು ನಾವೆಲ್ಲಾ ಕೇಳಿದ್ದೇವೆ. ಬಿಜೆಪಿಯವರ ಇಂದಿನ ಸ್ಥಿತಿ ಅದಕ್ಕಿಂತ ಅಧ್ವಾನ. ಯಾಕೆಂದರೆ ಇವರಿಗೆ ಇಲಿಯೂ ಸಿಗಲಿಲ್ಲ. ಅಷ್ಟೇ ಆಗಿದ್ದರೆ ಏನೂ ಚಿಂತೆ ಇರಲಿಲ್ಲ. ಬೆಟ್ಟ ಅಗೆಯುವ ಭರದಲ್ಲಿ ಈ ಆಸಾಮಿಗಳು ತಮ್ಮ ಕಾಲ ಮೇಲೆ ತಾವೇ ಗುದ್ದಲಿ ಹಾಕಿಕೊಂಡಿದ್ದಾರೆ. ರಾಜಕಾರಣದಲ್ಲಿ ಇಂಥಾ ತಮಾಷೆ ಸಿಗೋದು ಬಹಳ ಅಪರೂಪ. ನಮ್ಮ ರಾಜಕಾರಣ ಹಿಡಿದಿರುವ ದುಸ್ಥಿತಿ ಜೊತೆಜೊತೆಗೆ ನೆನಪಾಗುತ್ತಿದ್ದರಿಂದ ಈ ತಮಾಷೆಯನ್ನು ಎಂಜಾಯ್ ಮಾಡಲು ಕಷ್ಟ ಅನಿಸುತ್ತಿದೆ ಅಷ್ಟೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ನಿಜಸುಖಿ ಅಪ್ಪಣ್ಣ, ನಿಜಮುಕ್ತೆ ಲಿಂಗಮ್ಮ

'ಸುಖಿಪತಿಗಳೊಂದಾದ ಭಕ್ತಿ ಹಿತವಹುದು ಶಿವಂಗೆ' ಎಂಬ ನುಡಿಗೆ ಹಡಪದ ಅಪ್ಪಣ್ಣ ಮತ್ತು ಅವರ ಪುಣ್ಯಸ್ತ್ರೀ ಲಿಂಗಮ್ಮ ಸಾಕ್ಷಿಯಾಗಿದ್ದಾರೆ. 'ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ' ಎಂದು ಲಿಂಗಮ್ಮ ಹೇಳುವಲ್ಲಿ ಶರಣ ಸಂಕುಲದ ಮಹತ್ವ ಎಷ್ಟಿತ್ತು ಎಂಬುದರ ಅರಿವಾಗದೆ ಇರದು. ಬಸವಣ್ಣನವರ ಶರಣ ಸಂಕುಲದಲ್ಲಿ ಜನಸಾಮಾನ್ಯರು



ಸ್ವರೂಪ ಗೊಂದಲದಿಂದ ಮುಕ್ತರಾಗಿ ನವಮಾನವರಾದದ್ದು ಮಾನವ ಇತಿಹಾಸದಲ್ಲಿ ಮರೆಯಲಾಗದ ಅನುಭವ. ಕಾಯಕ ಜೀವಿಗಳು ತಮ್ಮ ದೈನಂದಿನ ದುಡಿಮೆಯ ಅನುಭವದ ಮೂಲಕವೇ ಅನುಭಾವದ ಎತ್ತರಕ್ಕೆ ಏರುವ ಅನುಪಮ ಕ್ರಮವನ್ನು ಬಸವಣ್ಣನವರು ತೋರಿಸಿಕೊಟ್ಟರು.

ಅಂಥ ಅನುಭಾವದ ಎತ್ತರಕ್ಕೆ ಏರಿದವರಲ್ಲಿ ಹಡಪದ ಅಪ್ಪಣ್ಣ ಮತ್ತು ಲಿಂಗಮ್ಮ ದಂಪತಿ ಸೇರಿದ್ದಾರೆ. ಬಸವಧರ್ಮ ನಿಜವಾದ ಅರ್ಥದಲ್ಲಿ ಯೋಗಧರ್ಮವಾಗಿದೆ. ಬಸವಧರ್ಮದಲ್ಲಿ ಎರಡು ಪ್ರಕಾರದ ಯೋಗಗಳಿವೆ. ಅವುಗಳನ್ನು ಇಷ್ಟಲಿಂಗಯೋಗ ಮತ್ತು ಕಾಯಕಯೋಗ ಎಂದು ಕರೆಯಲಾಗುತ್ತದೆ. ಇಷ್ಟಲಿಂಗಯೋಗವು ಅನುಭಾವದ ಎತ್ತರಕ್ಕೆ ಒಯ್ಯುವುದರ ಮೂಲಕ ಆತ್ಮತೃಪ್ತಿಯನ್ನುಂಟುಮಾಡುತ್ತದೆ. ಹೀಗೆ ಆತ್ಮಕಲ್ಯಾಣಕ್ಕಾಗಿ ಇಷ್ಟಲಿಂಗಯೋಗವಿದೆ. ಕಾಯಕಯೋಗವು ಅನುಭವದ ಎತ್ತರಕ್ಕೆ ಒಯ್ಯುವುದರ ಮೂಲಕ ಲೋಕತೃಪ್ತಿಗೆ ಕಾರಣವಾಗುತ್ತದೆ. ಹೀಗೆ ಲೋಕಕಲ್ಯಾಣಕ್ಕಾಗಿ ಕಾಯಕಯೋಗವಿದೆ.

ವಿಶ್ವತತ್ತ್ವವು ಕಾಯಕದ ಮೇಲೆ ನಿಂತಿದೆ. ವಿಶ್ವದಲ್ಲಿ ಚರಾಚರ ವಸ್ತುಗಳೆಲ್ಲ ಕಾಯಕದ ಮೇಲೆ ಜೀವಂತವಾಗಿವೆ. ಸೂರ್ಯ ಬೆಳಕು ಕೊಡುವ ಕಾಯಕದಲ್ಲಿ ನಿರತನಾಗಿದ್ದರೆ ಚಂದ್ರ ಬೆಳದಿಂಗಳು ಕೊಡುವ ಕಾಯಕದಲ್ಲಿ ನಿರತನಾಗಿರುತ್ತಾನೆ. ಗಿಡಮರಗಳು ಕೂಡ ಕಾಯಕಯೋಗದಲ್ಲಿ ತೊಡಗಿ ಫಲ ಕೊಡುತ್ತ ದಾಸೋಹಿಗಳಾಗುತ್ತವೆ! ಹೀಗೆ ಕಾಯಕಯೋಗವು ಪ್ರಸಾದ ಪ್ರಜ್ಞೆ ಮೂಡಿಸಿ ದಾಸೋಹಂಭಾವ ಸೃಷ್ಟಿಸುವಲ್ಲಿ ಯಶಸ್ವಿಯಾಗುತ್ತದೆ. ಸಮತೆ ಎಂಬುದೇ ಯೋಗವಾಗಿರುವುದರಿಂದ ಬಸವಧರ್ಮದ ಒಳಗಿನ ಮತ್ತು ಹೊರಗಿನ ಯೋಗಗಳು ಮಾನವರಲ್ಲಿ ಸಮಾನತೆಯ ಭಾವ ಮೂಡಿಸಿ ಸಕಲಜೀವಾತ್ಮರಿಗೆ ಲೇಸನೇ ಬಯಸುವಂಥ ಮನಸ್ಸನ್ನು ರೂಪಿಸುತ್ತವೆ. ಇಂಥ ಸಾಧನೆಯನ್ನು ಅಪ್ಪಣ್ಣ ಮತ್ತು ಲಿಂಗಮ್ಮನವರ ವಚನಗಳ ಮೂಲಕ ಅರಿತುಕೊಳ್ಳಬಹುದು.

"ಮನವ ನಿರ್ಮಲ ಮಾಡಿ ಆ ಘನವ
ಕಾಂಬುವದಕ್ಕೆ
ಆ ಮನ ಎಂತಾಗಬೇಕೆಂದಡೆ
ಗಾಳಿಬೀಸದ ಜಲದಂತೆ,
ಮೋಡವಿಲ್ಲದ ಸೂರ್ಯನಂತೆ
ಬೆಳಗಿದ ದರ್ಪಣದಂತೆ ಮನ
ನಿರ್ಮಲವಾದಲ್ಲದೆ
ಆ ಮಹಾಘನವ
ಕಾಣಬಾರದೆಂದರು
ನಮ್ಮ ಅಪ್ಪಣ್ಣ ಪ್ರಿಯ
ಚೆನ್ನಬಸವಣ್ಣ"

ಎಂದು ಲಿಂಗಮ್ಮನವರು ಹೇಳುತ್ತಾರೆ. ಒಳ ಮತ್ತು ಹೊರಗಿನ ಬಸವಯೋಗಗಳಲ್ಲಿ ಯಶಸ್ಸು ಸಾಧಿಸಬೇಕಾದರೆ ಎಂಥ ಮನಸ್ಥಿತಿ ಇರಬೇಕು ಎಂಬುದನ್ನು ಸೂಕ್ಷ್ಮಜೀವಿ ಲಿಂಗಮ್ಮ ಸೂಚಿಸುತ್ತಾರೆ.


"ಕಟ್ಟಬೇಕು ಮನವ ಮೆಟ್ಟಬೇಕು
ಮದವ
ಸುಟ್ಟುರುಹಬೇಕು ಸಪ್ತವ್ಯಸನಂಗಳ,
ಆ ತೊಟ್ಟಿಲ ಮುರಿದು, ಕಣ್ಣಿಯ ಹರಿದು ಆ
ಬಟ್ಟ ಬಯಲಲ್ಲಿ ನಿಂದರೆ
ಬಸವಪ್ರಿಯ ಕೂಡಲಚೆನ್ನಬಸವಣ್ಣನಾಗುವಿರಿ,
ದೇವತ್ವವನ್ನು ಪಡೆಯುವಿರಿ."

ಎಂದು ಅಪ್ಪಣ್ಣನವರು ಅಂಥ ಮನವನ್ನು ಹದಗೊಳಿಸುವ ಕ್ರಮವನ್ನು ಅರಹುತ್ತಾರೆ. ಹೀಗೆ ಈ ಸತಿಪತಿಗಳ ವಚನಗಳು ಒಂದಕ್ಕೊಂದು ಪೂರಕವಾಗಿದ್ದು ನಿಜದ ನಿಲುವನ್ನು ಅರಿಯುವಲ್ಲಿ ಸಹಾಯಕವಾಗುತ್ತವೆ.

ಹಡಪದ ಅಪ್ಪಣ್ಣನವರು ಬಸವಣ್ಣನವರ ಆಪ್ತರಲ್ಲಿ ಮುಖ್ಯರೆನಿಸಿ ಅವರ ನೆರಳಾಗಿ ಬದುಕಿದವರು. ಎಂಥ ಪ್ರಸಂಗದಲ್ಲೂ ತಮಗೆ ಅನಿಸಿದ್ದನ್ನು ನಿಸ್ಸಂಕೋಚವಾಗಿ ಆದರೆ ಗಂಭೀರವಾಗಿ ಹೇಳಿದ್ದು ಅವರ ಘನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಅಂತೆಯೆ ಶರಣರು ಅಪ್ಪಣ್ಣನವರನ್ನು 'ನಿಜಸುಖಿ ಅಪ್ಪಣ್ಣ' ಎಂದು ಕರೆಯುತ್ತಿದ್ದರು. ಲಿಂಗಮ್ಮನವರನ್ನು 'ನಿಜಮುಕ್ತೆ' ಎಂದು ಕೊಂಡಾಡುತ್ತಿದ್ದರು.


ಹಡಪದ ಅಪ್ಪಣ್ಣನವರ 246 ವಚನಗಳು ಸಿಕ್ಕಿವೆ. ಅವರ ವಚನಾಂಕಿತ 'ಬಸವಪ್ರಿಯ ಕೂಡಲಚೆನ್ನಬಸವಣ್ಣ'. ಲಿಂಗಮ್ಮನವರ 114 ವಚನಗಳು ಸಿಕ್ಕಿವೆ. ಲಿಂಗಮ್ಮನ ಹೆಸರಿನಲ್ಲಿ ಒಂದು ಮಂತ್ರಗೋಪ್ಯ ಹಾಗೂ ಒಂದು ಸ್ವರವಚನ ಕೂಡ ಸಿಕ್ಕಿದೆ. 'ಅಪ್ಪಣ್ಣಪ್ರಿಯ ಚೆನ್ನಬಸವಣ್ಣ' ಎಂಬುದು ಲಿಂಗಮ್ಮನವರ ವಚನಾಂಕಿತ.

ಸಂಸಾರದಲ್ಲಿದ್ದುಕೊಂಡು ಪವಿತ್ರಾತ್ಮರಾಗಿ ಬದುಕುತ್ತ ಮಹತ್ತನ್ನು ಸಾಧಿಸುವುದೇ ಬಸವಧರ್ಮದ ಪರಮಗುರಿ ಯಾಗಿದೆ. ಸಂಸಾರ ಎಂಬುದೇ ಸಮತ್ವದ ಯೋಗ ಎಂಬದನ್ನು ಈ ದಂಪತಿ ಬದುಕಿ ತೋರಿಸಿದ್ದಾರೆ.




● ರಂಜಾನ್ ದರ್ಗಾ

ಗಲೀಜು ಗುಜರಾತ್ ಮತ್ತು 'ಸ್ವಚ್ಛ ಭಾರತ್' ಆಂದೋಲನ



ಮೋದಿ ಅಂಡ್ ಕಂಪೆನಿ ಚುನಾವಣೆಯುದ್ದಕ್ಕೂ 'ಗುಜರಾತ್ ಮಾದರಿ' ಬಗ್ಗೆ ಹಗಲೂರಾತ್ರಿ ಕೊರೆದ ಭಾಷಣಗಳನ್ನು ಕೇಳಿದ ಮತದಾರರಿಗೆ ಗುಜರಾತ್ ಅಂದರೆ ಸಾಕ್ಷಾತ್ ಧರೆಯ ಮೇಲಣ ಸ್ವರ್ಗವೆಂದು ಅನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಯಾಕೆಂದರೆ ಅಂಥಾ ಲೊಟ್ಟೆ ಹೇಳಿಕೆಗಳಿಗೆ ಸವಾಲು ಹಾಕಬೇಕಾಗಿದ್ದ ಹೆಚ್ಚಿನ ಮುಖ್ಯವಾಹಿನಿಯ ಮಾಧ್ಯಮಗಳು ಯಾಕೋ ಸುಮ್ಮನಾಗಿದ್ದವು. ಆದರೂ ಕೆಲವೊಂದು ಕರ್ತವ್ಯನಿಷ್ಠ ಪತ್ರಕರ್ತರು ಮತ್ತು ಮಾಧ್ಯಮಗಳ ಮೂಲಕ ಸತ್ಯಾಂಶಗಳು ಒಂದೊಂದಾಗಿಯೇ ಹೊರಬೀಳುತ್ತಿವೆ. ಉದಾಹರಣೆಗೆ ಗುಜರಾತಿನಲ್ಲಿ ಸ್ವಚ್ಛತೆಯ ಮಟ್ಟವೂ ಮಾದರಿಯಾಗಿಯೇ ಇರಬೇಕೆಂದು ಭಾವಿಸುತ್ತಿರುವವರಿಗೆಲ್ಲಾ ಆಘಾತ ಕಾದಿದೆ.

ಅಹಮದಾಬಾದ್ ವಿಮಾನ ನಿಲ್ದಾಣದಿಂದ ಗಾಂಧಿನಗರಕ್ಕೆ ಹೋಗುವ ನಳನಳಿಸುವ ರಸ್ತೆಯಲ್ಲಿ ಸಬರಮತಿ ನದಿಗಡ್ಡವಾಗಿ ಸೇತುವೆಯೊಂದು ಸಿಗುತ್ತದೆ. ಈ ಸೇತುವೆ ಪಕ್ಕದಲ್ಲಿ ಕೊಳಗೇರಿಯೊಂದಿದೆ. ನಂಬಿದರೆ ನಂಬಿ ಇಲ್ಲಾ ಬಿಡಿ, ಇಲ್ಲಿನ ಜನರಿಗೆ ಇಂದಿಗೂ ನದೀತೀರದ ಬಯಲು ಶೌಚಾಲಯವೇ ಗತಿ! ಹಿಂದೆ ಅವರ ಸಾಲುಸಾಲು ಹಿಂಭಾಗಗಳು ಕಾರುಗಳಲ್ಲಿ ಪಯಣಿಸುವ ಗಣ್ಯಾತಿಗಣ್ಯರ ಕಣ್ಣಿಗೆ ರಾಚುತ್ತಿದ್ದವು. ಆ ದೃಶ್ಯಗಳಿಂದು ಕಾಣಿಸುತ್ತಿಲ್ಲವಾದರೆ ಅದರರ್ಥ ಜನ ಸ್ವಚ್ಛತಾ ಅಭಿಯಾನದಡಿ ನಿರ್ಮಿಸಿರುವ ಶೌಚಾಲಯಗಳನ್ನು ಉಪಯೋಗಿಸಲು ಪ್ರಾರಂಭಿಸಿದ್ದಾರೆಂದಲ್ಲ, ವಾಸ್ತವವಾಗಿ ಆ ದೃಶ್ಯಾವಳಿಗಳನ್ನು ಅಗೋಚರವಾಗಿಸಲಾಗಿದೆ! ಅದು ಹೇಗೆಂದರೆ ಅಲ್ಲೊಂದು ಅಡ್ಡಗೋಡೆ ನಿರ್ಮಿಸಿ ಬದಿರಿನ ತೋಹು ಬೆಳೆಸಲಾಗಿದೆ!



ಗಾಂಧಿನಗರದಲ್ಲೊಂದು ವೈಭವೋಪೇತ ಮಹಾತ್ಮ ಮಂದಿರ ಇದೆ. ಅಲ್ಲಿ ಹೆಚ್ಚಿನ ವೇಳೆ ನಡೆಯುವುದು "ವೈಬ್ರೆಂಟ್ ಗುಜರಾತ್"ನಂತಹ ವಾಣಿಜ್ಯ ಶೃಂಗಸಭೆಗಳು. ಆ ಕಟ್ಟಡವನ್ನು ತಲುಪಲು ಸರ್ಕೇಜ್-ಗಾಂಧಿನಗರ ಹೆದ್ದಾರಿಯಿಂದ ಪುಟ್ಟದೊಂದು ರಸ್ತೆ ಇದೆ. ರಸ್ತೆಯ ಎರಡೂ ಬದಿಗಳಲ್ಲಿ ಅಡ್ಡಗೋಡೆಗಳಿವೆ. ಹೀಗಿದ್ದರೂ ಅದರಾಚೆಯಿಂದ ಹೊಡೆಯುವ ದುರ್ವಾಸನೆಯೇ ಹೇಳುತ್ತದೆ ಅಲ್ಲೇನಿದೆ ಎಂದು!

ರಾಜ್ಯದ ಸಚಿವಾಲಯವಾದರೂ ಸ್ವಚ್ಛತೆಯ ಮಾದರಿ ಆಗಿರಬಹುದೆಂದು ನೀವೆಲ್ಲಾದರೂ ಯೋಚಿಸಿದರೆ ಅದೂ ತಪ್ಪು! ಮುಖ್ಯಮಂತ್ರಿ ಬ್ಲಾಕ್ ಒಂದನ್ನು ಬಿಟ್ಟು ಉಳಿದೆಲ್ಲಾ ಟಾಯ್ಲೆಟ್ಟುಗಳು ತಮ್ಮ ಇರವನ್ನು ಬಹುದೂರದಿಂದಲೇ ತಿಳಿಯಪಡಿಸುತ್ತವೆ!

ಗಾಂಧಿನಗರದಿಂದ 164 ಕಿಮೀ ದೂರದಲ್ಲಿದೆ ಸರಂಗ್‌ಪುರ್ ಹನುಮಾನ್ ಮಂದಿರ. ಇದರ ಪಕ್ಕದಲ್ಲಿ ಶೌಚಾಲಯಗಳು ಇವೆ. ಆದರೆ ಸದಾ ಬೀಗ ಜಡಿದಿರುವುದರಿಂದ ಅವು ಬರೀ ನಾಮಮಾತ್ರಕ್ಕೆ ಎಂದಾಗಿವೆ. ನಾಲ್ಕು ರೂ. ತೆತ್ತರೆ ಜವಾನನೊಬ್ಬ ಬೀಗ ತೆರೆದುಕೊಡುತ್ತಾನಾದರೂ ಸ್ವಚ್ಛತೆಯ ಖಾತರಿ ನೀಡುವುದಿಲ್ಲ! ಇನ್ನು ನೀರು ಇದ್ದರೆ ನಿಮ್ಮ ಪುಣ್ಯ!!

ತನ್ನ ರಾಜ್ಯದಲ್ಲಿ ಮಲಹೊರುವ ಪದ್ಧತಿ ಇಲ್ಲವೇ ಇಲ್ಲವೆಂದು 2004ರಲ್ಲಿ ಪ್ರಮಾಣಪತ್ರ ಬರೆದುಕೊಟ್ಟ ಗುಜರಾತ್ ಸರ್ಕಾರ ಮಲಹೊರುವವರ ಮರುವಸತಿಗೆಂದು ಕೇಂದ್ರದಿಂದ ಸಹಾಯಧನ ಕೂಡ ಪಡೆದುಕೊಂಡಿತ್ತು ಗೊತ್ತೇ? ತಮಾಷೆಯೆಂದರೆ ಎರಡು ವರ್ಷ ಕಳೆದು ಇದೇ ಗುಜರಾತ್ ಸರ್ಕಾರ ಮಲಹೊರುವ ಪದ್ಧತಿಯ ಅಧ್ಯಯನ ನಡೆಸಿದೆ! ಆ ಕಾರ್ಯಕ್ಕಾಗಿ ಟಾಟಾ ಸಮಾಜವಿಜ್ಞಾನ ಸಂಸ್ಥೆಯನ್ನು ನೇಮಿಸಿದೆ! ಟಾಟಾ ಸಂಸ್ಥೆಯ ಸಮೀಕ್ಷೆಯಲ್ಲಿ ಗುಜರಾತಿನಲ್ಲಿ 12,000 ಮಲಹೊರುವವರು ಇರುವುದಾಗಿ ತಿಳಿದುಬಂದಿದೆ!! ಇದರಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ಹಳಿಗಳನ್ನು ಸ್ವಚ್ಛ ಮಾಡುವವರೂ ಸೇರಿದ್ದಾರೆ.

'ಮಾದರಿ ರಾಜ್ಯ' ಗುಜರಾತಿನಾದ್ಯಂತದ ನಗರಗಳಲ್ಲಿ ಸಾರ್ವಜನಿಕ ಶೌಚಾಲಯಗಳು ವಿರಳಾತಿ ವಿರಳವಾಗಿವೆ. ರಾಜಧಾನಿ ಗಾಂಧಿನಗರದ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಇರುವ ಕೆಲವು ಟಾಯ್ಲೆಟುಗಳು ವಾಕರಿಕೆ ಬರಿಸುವಷ್ಟು ಕೊಳಕಾಗಿವೆ. ಘನ ತ್ಯಾಜ್ಯ ನಿರ್ವಹಣೆಯಲ್ಲಿ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸದಿರುವ 8 ಕಾರ್ಪೊರೇಷನ್ನು ಮತ್ತು 159 ಮುನಿಸಿಪಾಲಿಟಿಗಳಿಗೆ ಗುಜರಾತ್ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ನೋಟಿಸ್ ಜಾರಿಮಾಡಲಾಗಿದೆ. 'ಮಾದರಿ ರಾಜ್ಯ'ದ 52 ಲಕ್ಷ ಮನೆಗಳಲ್ಲಿ ಶೌಚಾಲಯಗಳಿಲ್ಲ. 49 ಲಕ್ಷ ಮಂದಿಗೆ ಈಗಲೂ ಬಯಲು ಶೌಚಾಲಯಗಳೇ ಗತಿ. 64 ಲಕ್ಷಕ್ಕೂ ಅಧಿಕ ಮನೆಗಳಿಗೆ ಇದುವರೆಗೂ ಒಳಚರಂಡಿ ಸಂಪರ್ಕ ಇಲ್ಲ. 2012ರ ಮಾರ್ಚ್ ತನಕದ ಸಿಎಜಿ ವರದಿ ಪ್ರಕಾರ ರಾಜ್ಯದಾದ್ಯಂತ ಇರುವ ಒಟ್ಟು ಅಂಗನವಾಡಿಗಳ ಪೈಕಿ 18,321ರಲ್ಲಿ ಶೌಚಾಲಯಗಳೇ ಇಲ್ಲ.

ಹೀಗಿರುವಾಗ ಮೋದಿ ಸರ್ಕಾರ ದೇಶಾದ್ಯಂತ "ಸ್ವಚ್ಛ ಭಾರತ ಆಂದೋಲನ್" ಶುರುಮಾಡಿರುವುದಕ್ಕೆ ಏನೆನ್ನಬೇಕು? ಯಾವುದಕ್ಕಾಗಿ ಗಾಂಧಿ ತಮ್ಮ ಪ್ರಾಣವನ್ನೆ ತೆತ್ತರೋ ಆ ಸಾಮಾಜಿಕ ಸಾಮರಸ್ಯದ ಬಗ್ಗೆ ಯಾವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳದೆ ಗಾಂಧಿ ಜನ್ಮದಿನವನ್ನು ಕೇವಲ ಪೊರಕೆ ಹಿಡಿದು ಫೋಟೋಗೆ ಪೋಸ್ ಕೊಡುವಂತಹ ಈ ಕ್ಷುಲ್ಲಕ ವಿಷಯಕ್ಕೆ ಸೀಮಿತಗೊಳಿಸಿರುವ ಮೋದಿ ಸರ್ಕಾರದ ಉದ್ದೇಶವೇನು? ಗಾಂಧೀಜಿ ಎತ್ತಿಹಿಡಿದ ಕೋಮು ಸೌಹಾರ್ದ ಮತ್ತಿತರ ಉದಾತ್ತ ಮೌಲ್ಯಗಳನ್ನು ಜನರ ಮನಃಪಟಲದಿಂದ ಅಳಿಸುವ ಹುನ್ನಾರವೊಂದು ಜಾರಿಯಾಗಿದೆಯೇ?

●

ಧರ್ಮದ ನಕಾಶೆಗೆ ಶಸ್ತ್ರಕ್ರಿಯೆ ಬೇಕಿದೆ

ಜಗತ್ತಿನ ಯಾವ ಧರ್ಮಗಳು
ಮನುಷ್ಯನ ಮಾನಭಂಗದ ಸಂಕೇತಗಳಲ್ಲ
ಹಾಗೆ ಒಂದು ವೇಳೆ ಮನುಷ್ಯ ರಕ್ತವೇ ಧರ್ಮದ ಬೇರನ್ನಾಗಿಸಿ
ಜೀವಕುಲ ಅಧಃಪತನಕ್ಕೆ ತಳ್ಳಿ
ಕೋಮುದಳ್ಳುರಿಯಾಗುವುದಾದರೆ
ಧರ್ಮಗಳೇ ನೀವು ಮೊದಲು ಆಗಸ ನೆತ್ತಿಯ ಬೀಜಗಳಾಗಿ.


ಜಗತ್ತಿನ ಯಾವ ಧರ್ಮಗಳು
ಸಮಾಜದ ನಡುವೆ ಮತೀಯವಾದದ ಸಂಕೇತಗಳಲ್ಲ
ಹಾಗೆ ಒಂದು ವೇಳೆ ಧರ್ಮದ ಕುಣಿಕೆಯ ನುಸಿಯಲಿ
ಸಹಬಾಳ್ವೆಯ ಸಂಭ್ರಮದೊಳಗೆ
ಮನುಷ್ಯರ ಕರಳು ಕುಯ್ಯೋ ಅರಿವುಗೆಟ್ಟ ನೆರಳುಗಳಾಗಿದ್ದರೆ
ಧರ್ಮಗಳೇ ನೀವು ಮೊದಲು ನೆಲದ ನಗೆಯ ಸ್ವಾಭಿಮಾನಿಗಳಾಗಿ.

ಜಗತ್ತಿನ ಯಾವ ಧರ್ಮಗಳು
ಶೋಷಣೆಯ ಅಸ್ತ್ರಗಳಾಗಿ ಶೋಷಿತರ ಕುತ್ತಿಗೆ ಇರಿಯುವ ಸಂಕೇತಗಳಾಗಿಲ್ಲ
ಹಾಗೆ ಒಂದು ವೇಳೆ ಉರಿಗದ್ದುಗೆಯನ್ನೇರಿ ಪಂಡತನ ಮೆರೆವ ಬಂಡಗೇಡಿಗಳಾಗಿ
ಅಮಾಯಕರ ನಾಲಿಗೆ ಕಟ್ಟಿ ದಿಗ್ಬಂಧನ ಹೇರಿ
ಜೀವಬಡಿತದ . ಗಂಟಲ ನಳಿಕೆಯಲಿ ಕೊಳಕುನಾಲೆಯಾಗುವುದಾದರೆ
ಧರ್ಮಗಳೇ ನೀವು ಮೊದಲು ನಿಮ್ಮ ಒಡಲುರಿಯ ಒಕ್ಕಳನ್ನು ಬೆಳಕಿನಲ್ಲಿ ಅದ್ದಿ.

ಜಗತ್ತಿನ ಯಾವ ಧರ್ಮಗಳು
ಮನುಷ್ಯ ಧರ್ಮದ ವಿರೋಧಿಯ ಸಂಕೇತಗಳಾಗಿಲ್ಲ
ಹಾಗೆ ಒಂದು ವೇಳೆ ಮನುಷ್ಯ ವಿರೋಧಿಯ
ಅತಂತ್ರದ ಬಿತ್ತನೆಯ ಕ್ರಿಯೆಯಲ್ಲಿ ತೊಡಗಿದ್ದರೆ
ಅದು ಧರ್ಮವೇ ಅಲ್ಲ, ಜಗದ ನೀತಿಯೊಳಗ ಅದೊಂದು ಕುತಂತ್ರದ ಬಲ

ಮನುಷ್ಯ ಧರ್ಮದ ಪಾಠವೇ ಧರ್ಮಗಳ ಮೂಲಧ್ಯೇಯವಾಗಬೇಕಿದೆ
ಧರ್ಮಗಳು ಜಗದ ನೆತ್ತಿಗಳ ಸುಡುವ ಲಾವಾಗ್ನಿಗಳಾಗದಿರಲಿ
ನಾವೆಲ್ಲ ಒಂದೇ ನರಕುಲದ ಬೀಜಗಳೆಂಬ ಏಕತೆಯಿರುವ
ಆತ್ಮ ಸ್ಥೈರ್ಯದ ಆಧಾರವೇ
ಸಬರಿಸಬೇಕಾದ ನಡತೆ

ಸಮಾಜದ ನೆತ್ತಿಯ ಕಾವು
ಬಯಲುಗೊಂಡ ಮಹಲಿನ ಆಲಯಗಳಾಗಲು
ಈ ಧರ್ಮಗಳೊಳಗೆ ವಿವೇಕದ
ಬತ್ತಳಿಕೆಯ ಅಸ್ತ್ರಗಳು ಮರುಜನ್ಮ ಪಡೆಯಲಿ



● ಕಿರಸೂರ ಗಿರಿಯಪ್ಪ

ಜಾನಪದ ವಿವಿ ಅವ್ಯವಹಾರ: ಚಂದ್ರ ಪೂಜಾರಿ ಟೀಕೆ

ಪತ್ರಿಕೆ ಕಳೆದ ವಾರ ಜಾನಪದ ವಿಶ್ವವಿದ್ಯಾಲಯದ ...ಗಳ ಬಗ್ಗೆ ಸವಿವರವಾಗಿ ವರದಿಯನ್ನು ಪ್ರಕಟಿಸಿತ್ತು. ...ರದಿ ಊಹಾಪೋಹಕ್ಕೆ ಎಡೆಮಾಡದೆ ದಾಖಲೆಗಳ ... ವಿಶ್ಲೇಷಣಾತ್ಮಕವಾಗಿತ್ತು. ಈ ವರದಿಗೆ ವ್ಯಾಪಕ ...ಮೆಯೂ ಬಂದಿದೆ. ಪಾರದರ್ಶಕತೆ ಬಗ್ಗೆ ಮಾತನಾ... ಜಾನಪದ ವಿವಿ ಕುಲಪತಿಗಳಾದ ಅಂಬಳಿಕೆ ...ಣ್ಣ ಅವರು ಪತ್ರಿಕೆ ಎತ್ತಿದ ಪ್ರಶ್ನೆಗಳಿಗೆ ಉತ್ತರಿಸ...ಗುತ್ತದೆ. ಅಂತೆಯೆ ಈ ತನಕ ನಮಗೆ ದೂರು ...ಲ್ಲ ಎಂದು ಹೇಳಿದ ಉನ್ನತ ಶಿಕ್ಷಣ ಸಚಿವರಾದ ...ಎ.ದೇಶಪಾಂಡೆ ಅವರು ವರದಿಯನ್ನು ದೂರೆಂದು ... ಪತ್ರಿಕೆ ಬಯಲು ಮಾಡಿದ ಅಕ್ರಮಗಳ ಬಗ್ಗೆ ... ಶಿಕ್ಷಣ ಸಚಿವಾಲಯ ಮತ್ತು ರಾಜ್ಯಪಾಲರು ತನಿಖೆ ...ಬೇಕಾಗುತ್ತದೆ.

...ಚೆಗೆ ಡಾ.ಎಂ.ಚಂದ್ರ ಪೂಜಾರಿ ಅವರು ಜಾನಪದ ...ಅಕ್ರಮಗಳ ಬಗ್ಗೆ ಕುಲಪತಿಗಳಿಗೆ ಬರೆದ ಪತ್ರದ ...ಂದು ಪತ್ರಿಕೆಗೆ ಲಭ್ಯವಾಗಿದೆ. ಪೂಜಾರಿಯವರು ...1.15 ರಂದು ಕುಲಪತಿಗಳಿಗೆ ಈ ಪತ್ರ ಬರೆದಿದ್ದಾರೆ. ... ಶಿಕ್ಷಣ ಸಚಿವಾಲಯವು ಪತ್ರಿಕೆಗಳ ವರದಿ ಬಗ್ಗೆ ...ಕೇಳಿದಾಗ ಈ ಬಗ್ಗೆ ಚರ್ಚಿಸಲು ವಿವಿಯ ಎಲ್ಲಾ ...ಪಕ/ಬೋಧಕೇತರ ಸಿಬ್ಬಂದಿಯನ್ನು 16.01.15 ರಂದು ...ತಿ ಮತ್ತು ಕುಲಸಚಿವರ ಸಮ್ಮುಖದಲ್ಲಿ ಸಭೆ ...ಲಾಗಿದೆ. ಆಗ ಬಹುಪಾಲು ಸಿಬ್ಬಂದಿಗಳು ಜಾನಪದ ...ಬಗ್ಗೆ ಬಂದ ವರದಿಗಳು ಸತ್ಯಕ್ಕೆ ದೂರವಾಗಿದೆ ... ಕುರುಡಾದ ಒಮ್ಮುಖ ಅಭಿಪ್ರಾಯವನ್ನು ಮಂಡಿಸಿ ...ಈ ಸಂದರ್ಭದ ಒಮ್ಮುಖ ಅಭಿಪ್ರಾಯಕ್ಕೆ ವಿರುದ್ಧ ...ತಮ್ಮ ನಿಲುವನ್ನು ತಿಳಿಸಲು ಚಂದ್ರ ಪೂಜಾರಿ ... ಹಿಂದೇಟು ಹಾಕಿ ತಮ್ಮ ಅಭಿಪ್ರಾಯವನ್ನು ಒಂದು ...ಲ್ಲಿ ಬರೆದು ಲಿಖಿತವಾಗಿ 19.01.15 ರಂದು ...ಪತಿಗಳಿಗೆ ನೀಡಿದ್ದಾರೆ.


...ಪೂಜಾರಿಯವರು ಪತ್ರದಲ್ಲಿ 'ಬಹುತೇಕ ಸಿಬ್ಬಂದಿಗಳು ...ಗಳ ವರದಿಗಳು ಸರಿಯಲ್ಲ ಎಂದು ವಾದಿಸುವುದು ...ದಾಗ ಒಂದು ಕ್ಷಣ ನನಗೆ ಬೇಸರವಾಯಿತು. ...ಅದೇ ಸಂದರ್ಭದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕೆಲಸ ...ವ ಬೋಧಕ ಸಿಬ್ಬಂದಿಗಳಿಂದ ಮತ್ತು ಹೊರಗುತ್ತಿಗೆ ...ಲ್ಲಿ ದುಡಿಯುವ ಬೋಧಕೇತರ ಸಿಬ್ಬಂದಿಗಳಿಂದ ...ದ್ಯಾಲಯದ ಆಡಳಿತದ ಜವಾಬ್ದಾರಿ ಹೊತ್ತವರ ...ರ್ಣಯಗಳ ವಸ್ತುನಿಷ್ಠ ವಿಮರ್ಶೆಯನ್ನು ಅವರ ಎದುರೇ ...ಸುವುದು ಎಷ್ಟು ಸರಿ ಎನ್ನುವ ಪ್ರಶ್ನೆ ನನ್ನನ್ನು ಕಾಡಿದೆ. ...ಗೆ ಕೆಲವು ತೀರ್ಮಾನಗಳನ್ನು ಕೈಗೊಳ್ಳುವ ...ರ್ಭದಲ್ಲಿ ಆನ್ವಯಿಕ ಜಾನಪದ ನಿಖಾಯದ ಡೀನ್ ...ನು ಪಾಲುಗೊಂಡಿದ್ದೆ. ಆದುದರಿಂದ ಪತ್ರಿಕೆಗಳಲ್ಲಿ ... ಕೆಲವು ಲೋಪಗಳಿಗೆ ನಾನು ಪರೋಕ್ಷವಾಗಿ ...ದ್ದಾರನಾಗಿದ್ದೇನೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ...ಕವಾಗಿ ಅಥವಾ ಬರಹ ಮೂಲಕ ನನ್ನ ...ಮತವನ್ನು ಕುಲಪತಿಗಳ ಗಮನಕ್ಕೆ ತಂದಿದ್ದೇನೆ' ...ದ್ದಾರೆ.

...ಮುಂದುವರಿದು 'ಹೊಸ ವಿಶ್ವವಿದ್ಯಾಲಯದ ಕೆಲಸ ...ಗಳಿಗೆ ಅಡ್ಡಿಯಾಗಬಾರದೆಂದು ನನ್ನ ಅಭಿಪ್ರಾಯ ... ಪರಿಗಣಿಸಬೇಕೆಂದು ತಮ್ಮನ್ನು ಒತ್ತಾಯಿಸಲಿಲ್ಲ ...ನನ್ನ ಭಿನ್ನಮತವನ್ನು ಸಾರ್ವಜನಿಕಗೊಳಿಸಿಲ್ಲ. ಈಗ ... ಸಾರ್ವಜನಿಕಗೊಂಡಿವೆ. ಈವಾಗಲೂ ನನ್ನ ...ವನ್ನು ಬರಹ ಮೂಲಕ ದಾಖಲಿಸದಿದ್ದರೆ ...ಒಂದು ದಿನ ಸಾರ್ವಜನಿಕ ಸಂಸ್ಥೆಗಳ ಲೋಪಗಳ ...ಪುಟಗಟ್ಟಲೆ ಬರೆಯುವ ವೇದಿಕೆಗಳಲ್ಲಿ ಮತ್ತು ...ಗಳಲ್ಲಿ ಗಂಟೆಗಟ್ಟಲೆ ಮಾತನಾಡುವ ನೀವು ನಿಮ್ಮದೇ ...ಗಡದಲ್ಲಿ ಇಷ್ಟೆಲ್ಲಾ ಲೋಪಗಳು ನಡೆದಾಗ ಏನು ...ತ್ತಿದ್ದೀರೆಂದು ಕೇಳಿದರೆ ಉತ್ತರಿಸುವುದು ನನಗೆ ...ಗುತ್ತದೆ. ಈ ಎಲ್ಲಾ ಕಾರಣಗಳಿಂದ ನನ್ನ ...ಯವನ್ನು ಪ್ರತ್ಯೇಕವಾಗಿ ಈ ಪತ್ರದ ಮೂಲಕ ... ಗಮನಕ್ಕೆ ತರುತ್ತಿದ್ದೇನೆ. ಪತ್ರಿಕೆಗಳಲ್ಲಿ ಬಂದ ...ಪಗಳ ಕುರಿತು ನನ್ನ ನಿಲುವುಗಳು ಇಂತಿವೆ' ಎಂದು ...ನಿಲುವನ್ನು ದಾಖಲಿಸಿದ್ದಾರೆ.

...ಪೂಜಾರಿ ಅವರು ತಮ್ಮ ಪತ್ರದಲ್ಲಿ 'ಪತ್ರಿಕೆಗಳಲ್ಲಿ ...ಎಲ್ಲವೂ ಸತ್ಯವಲ್ಲ ಹಾಗೆ ಎಲ್ಲವೂ ಅಸತ್ಯವೂ ...ನೇಮಕಾತಿಯಲ್ಲಿ ಜಾತಿ ಅಥವಾ ಹಣದ ...ಗಳು ನಡೆದಿರುವ ಅಂಶ ನನ್ನ ಗಮನಕ್ಕೆ ಬಂದಿಲ್ಲ. ...ವಾರ ಪತ್ರಿಕೆಯಲ್ಲಿ ಬಂದ ಈ ಕೆಳಗಿನ ಅಂಶಗಳು ...ಸತ್ಯವಾಗಿವೆ' ಎಂದು ಹೇಳುತ್ತಾ ಮುಖ್ಯವಾಗಿ ... ನಡೆದ ಬಗ್ಗೆ ಈ ಕೆಳಗಿನಂತೆ ವಿವರಿಸಿದ್ದಾರೆ. ...ರೋಸ್ಟರ್ ಪಾಲಿಸ ಇಲ್ಲದ.

...ಮೀಸಲಾತಿ ಪ್ರಶ್ನೆ- ಮೀಸಲಾತಿ ಲೋಪ ಕೇವಲ ...ಹೈದರಾಬಾದ್ ಕರ್ನಾಟಕದ ಮೀಸಲಾತಿಗೆ ...ಸೀಮಿತವಾಗಿರುವುದಲ್ಲ, ಪರಿಶಿಷ್ಟ ಜಾತಿ ಮತ್ತು ಕೆಟಗರಿ ...ಮೀಸಲಾತಿಯಲ್ಲೂ ಸಮಸ್ಯೆ ಇದೆ. ದಿನಾಂಕ 6/6/13ರಂದು ವಿಶ್ವವಿದ್ಯಾಲಯ ನೀಡಿದ ಜಾಹಿರಾತಲ್ಲಿ ವಿಭಾಗಾವಾರು ಮೀಸಲಾತಿ ನೀಡಲಾಗಿತ್ತು. ವಿಭಾಗಾವಾರು ಮೀಸಲಾತಿಯನ್ನು ದಿನಾಂಕ 10/6/13ರಂದು ನೀಡಿದ ಜಾಹಿರಾತಲ್ಲಿ ಬದಲಾಯಿಸಿ ಎಲ್ಲಾ ಹುದ್ದೆಗಳಿಗೆ ಸೇರಿಸಿ (ಪೂಲ್ ಮಾಡಿ) ಮೀಸಲಾತಿ ನೀಡಲಾಗಿದೆ. ವಿಭಾಗಾವಾರು ನೀಡುವಾಗ ಒಟ್ಟು ಅರ್ಜಿಗಳನ್ನು ಪರಿಗಣಿಸಿ ನಿರ್ದಿಷ್ಟ ಅರ್ಜಿಗಳನ್ನು ಪರಿಗಣಿಸಿ ನಿರ್ದಿಷ್ಟ ಮೀಸಲಾತಿ ಅಭ್ಯರ್ಥಿ ಎಲ್ಲಿ ಇದ್ದಾರೋ ಅಲ್ಲಿ ಮೀಸಲಾತಿ ನೀಡಬೇಕು. ಆದರೆ ಆಯ್ಕೆ ಸಂದರ್ಭದಲ್ಲಿ ಆ ರೀತಿ ಆಗಿಲ್ಲ. ಎಸ್‌ಸಿ ಮಹಿಳೆ ಮತ್ತು ಕೆಟಗರಿ 1ರ ಮೀಸಲಾತಿಯನ್ನು ಆ ಅಭ್ಯರ್ಥಿಗಳು ಇದ್ದ ವಿಭಾಗಗಳಲ್ಲಿ ನೀಡದೆ ಫೋಕ್ ಟೂರಿಸಂ ವಿಭಾಗದಲ್ಲಿ ಪರಿಗಣಿಸಲಾಗಿದೆ. ಆದರೆ ಫೋಕ್ ಟೂರಿಸಂ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಹಾಕಿದವರಲ್ಲಿ ಎಸ್‌ಸಿ ಮಹಿಳೆ ಮತ್ತು ಕೆಟಗರಿ 1ರ ಅಭ್ಯರ್ಥಿ ಇಲ್ಲದ ಕಾರಣ ಆ ಎರಡು ಹುದ್ದೆಗಳು ಭರ್ತಿಯಾಗದೆ ಖಾಲಿ ಉಳಿದವು.

ಆ. ಶ್ರೀಮತಿ ಭಾರತಿ ಮರವಂತೆಯರ ಅರ್ಹತೆಯ ಪ್ರಶ್ನೆ: 2009ರೊಳಗೆ ಪಿಹೆಚ್‌ಡಿ ಪಡೆದವರು ನೆಟ್ ಪರೀಕ್ಷೆಯಿಂದ ವಿನಾಯಿತಿ ಪಡೆಯುತ್ತಾರೆ ಎನ್ನುವ ಯುಜಿಸಿ ಸುತ್ತೋಲೆಯಲ್ಲಿ 2009 ಜೂನ್ ಒಳಗೆ ಪಿಹೆಚ್‌ಡಿ ನೋಂದಾವಣಿ ಪಡೆದವರು ಕೂಡ ವಿನಾಯಿತಿ ಪಡೆಯುತ್ತಾರೆ ಎನ್ನುವ ಅಂಶವೂ ಸೇರಿತ್ತು. 2009ರಲ್ಲಿ ನೋಂದಾಯಿಸಲ್ಪಟ್ಟವರು ಯಾವ ದಿನಾಂಕದೊಳಗೆ ಪಿಹೆಚ್‌ಡಿ ಡಿಗ್ರಿ ಪಡೆದಿರಬೇಕೆನ್ನುವ ವಿಚಾರದಲ್ಲಿ ಸುತ್ತೋಲೆ ಸ್ಪಷ್ಟವಾಗಿರಲಿಲ್ಲ. ಆ ಕಾರಣ 2009 ರೊಳಗೆ ಪಿಹೆಚ್‌ಡಿ ಡಿಗ್ರಿ ಪಡೆದವರು ಮಾತ್ರ ನೆಟ್ ಪರೀಕ್ಷೆಯಿಂದ ವಿನಾಯಿತಿ ಪಡೆಯುತ್ತಾರೆನ್ನುವ ವಿಶ್ವವಿದ್ಯಾಲಯದ ನಿರ್ಣಯದಲ್ಲಿ ನಾನು ಭಾಗಿಯಾಗಿದ್ದೆ. ಈ ನಿರ್ಣಯ ಕೈಗೊಂಡ ನಂತರ ಶ್ರೀಮತಿ ಭಾರತಿಯವರು ಕೆಲವು ಯುಜಿಸಿ ನಿಯಮಗಳನ್ನು ನನಗೆ ತಾನು ವಿನಾಯತಿ ಪಡೆಯಲು ಅರ್ಹರೆಂದು ವಾದಿಸಿದರು. ಅವರ ವಾದದಲ್ಲಿ ಮತ್ತು ಅವರು ತಂದ ದಾಖಲೆಗಳಲ್ಲಿ ಬಲ ಇರುವುದು ಕಂಡು ಈ ವಿಷಯವನ್ನು ತಮ್ಮ ಗಮನಕ್ಕೆ ತಂದು ಶ್ರೀಮತಿ ಭಾರತಿ ಅವರಿಗೆ ಸಂದರ್ಶನಕ್ಕೆ ಅವಕಾಶ ನೀಡಬೇಕೆಂದು ಕೋರಿದೆ. ತಾವು ಇತರೆ ಅಧಿಕಾರಿಗಳೊಂದಿಗೆ ಚರ್ಚಿಸಿದಾಗ ಹಿಂದಿನ ತೀರ್ಮಾನಕ್ಕೆ ಬದ್ಧರಾಗಿರುವುದು ಸರಿಯೆನ್ನುವ ತೀರ್ಮಾನ ಬಂತು. ಸಂದರ್ಶನಕ್ಕೆ ಒಂದೆರಡು ದಿನ ಇರುವಾಗ ಶ್ರೀಮತಿ ಭಾರತಿಯವರು ಪುನಃ ನನ್ನನ್ನು ಕಂಡು ಸಂದರ್ಶನಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೋರಿದರು. ಅವರ ಕೋರಿಕೆಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ನಿಯಮಾನುಸಾರ ಅವಕಾಶವಿದ್ದರೆ ಖಂಡಿತ ಅವಕಾಶ ನೀಡುವೆ ಎಂದು ತಾವು ನನಗೆ ಭರವಸೆ ನೀಡಿದ್ದೀರಿ. ಆದರೆ ವಿಶ್ವವಿದ್ಯಾಲಯ ಶ್ರೀಮತಿ ಭಾರತಿಯವರಿಗೆ ಸಂದರ್ಶನಕ್ಕೆ ಹಾಜರಾಗಲು ಅವಕಾಶ ನೀಡಲಿಲ್ಲ. ಕಾರಣ ಅವರು ಕೋರ್ಟ್‌ಗೆ ಹೋಗಿದ್ದಾರೆ ಮತ್ತು ಸಂದರ್ಶನಕ್ಕೆ ಹಾಜರಾಗಲು ಶ್ರೀಮತಿ ಭಾರತಿಯವರಿಗೆ ಅವಕಾಶ ನೀಡಬೇಕೆಂದು ಕೋರ್ಟ್ ತೀರ್ಪು ನೀಡಿದೆ. ಅದರಂತೆ ವಿಶ್ವವಿದ್ಯಾಲಯ ಜಾನಪದ ಸಾಹಿತ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಸಂದರ್ಶನಕ್ಕೆ ಹಾಜರಾಗಲು ಅವಕಾಶ ನೀಡಿದೆ. ಆದರೆ ಜಾನಪದ ಕಲೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಸಂದರ್ಶನಕ್ಕೆ ಹಾಜರಾಗಲು ಶ್ರೀಮತಿ ಭಾರತಿಯವರಿಗೆ ಅವಕಾಶ ಸಿಕ್ಕಿಲ್ಲ. ಈ ಕೊರತೆಯನ್ನು ಶ್ರೀಮತಿ ಭಾರತಿಯವರು ಕೋರ್ಟ್ ಮುಂದೆ ವಿಸಂತಿಸಿಕೊಂಡರೆ ಜಾನಪದ ಕಲೆ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಸಂದರ್ಶನವನ್ನು ಪುನಃ ನಡೆಸಬೇಕೆಂದು ಕೋರ್ಟ್ ಸೂಚಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ.



ಡಾ.ಎಂ.ಚಂದ್ರ ಪೂಜಾರಿ

ಇ. ಒಂದು ಹುದ್ದೆಗೆ ಹೆಚ್ಚು ಸಂಖ್ಯೆಯಲ್ಲಿ ಅರ್ಜಿಗಳು ಬಂದ ಸಂದರ್ಭದಲ್ಲಿ ಯೋಗ್ಯ ಮಾನದಂಡಗಳನ್ನು ಬಳಸಿಕೊಂಡು ಪ್ರತಿ ಹುದ್ದೆಗೆ ಸಂದರ್ಶನ ಯೋಗ್ಯ ಹತ್ತು ಜನ ಅಭ್ಯರ್ಥಿಗಳ ಹೆಸರನ್ನು ಪಟ್ಟಿ ಮಾಡಬೇಕೆನ್ನುವ ಯುಜಿಸಿ ನಿಯಮವಿದೆ. ವಿವಿಧ ವಿಭಾಗಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಹತ್ತಕ್ಕಿಂತ ಹೆಚ್ಚು ಅರ್ಜಿಗಳು ಬಂದಿವೆ. ಆದರೆ ಸಂದರ್ಶನ ಯೋಗ್ಯ ಅಭ್ಯರ್ಥಿಗಳ ಪಟ್ಟಿ ಮಾಡದೆ ಎಲ್ಲರನ್ನು ಸಂದರ್ಶನಕ್ಕೆ ಕರೆಯಲಾಗಿದೆ.

ಈ. ಡಾ.ಕೆ.ಪ್ರೇಮಕುಮಾರ ಇವರು ಸಂದರ್ಶನ ಸಮಿತಿಯಲ್ಲಿ ಸದಸ್ಯರಾಗಿರುವ ಪ್ರಶ್ನೆ - ಬೋಧಕೇತರ ಹಿನ್ನೆಲೆಯಿಂದ ವಿಶ್ವವಿದ್ಯಾಲಯಕ್ಕೆ ಬಂದಿರುವ ಡಾ.ಕೆ.ಪ್ರೇಮಕುಮಾರ ಇವರ ಹುದ್ದೆಯನ್ನು 11/4/14ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಪ್ರಾಧ್ಯಾಪಕರ ಹುದ್ದೆಗೆ ವಿಲೀನಗೊಳಿಸಲಾಯಿತು. ಬೋಧಕೇತರ ಹಿನ್ನೆಲೆಯಿಂದ ಬಂದ ಹಾಗು ಪ್ರಾಧ್ಯಾಪಕರ ಹುದ್ದೆಗೆ ಬೇಕಾಗಿರುವ ಅರ್ಹತೆಯನ್ನು ಹೊಂದಿರದ ಡಾ.ಕೆ.ಪ್ರೇಮಕುಮಾರ ಅವರ ಹುದ್ದೆಯನ್ನು ಪ್ರಾಧ್ಯಾಪಕರ ಹುದ್ದೆಗೆ ವಿಲೀನಗೊಳಿಸಿರುವುದು ಸರಿಯಲ್ಲವೆಂದು ಸಿಂಡಿಕೇಟ್ ಸಭೆಯಲ್ಲಿ ಹಾಗು ಖಾಸಗಿಯಾಗಿಯೂ ನಾನು ಹಾಗು ಇತರರು ತಮ್ಮ ಗಮನಕ್ಕೆ ತಂದಿದ್ದೇವೆ. ಇವೆಲ್ಲದರ ಮಧ್ಯೆ ಇವರನ್ನು ಸಾಮಾನ್ಯ ಜಾನಪದ ನಿಖಾಯದ ಡೀನ್ ಮಾಡಲಾಯಿತು. ಸಾಮಾನ್ಯ ಜಾನಪದ ನಿಖಾಯದ ಡೀನ್ ಆಗಿ ಇವರು ಈ ನಿಖಾಯದಲ್ಲಿ ಬರುವ ಎಲ್ಲ ವಿಭಾಗಗಳ ಸಂದರ್ಶನ ಸಮಿತಿ ಸದಸ್ಯರಾಗಿದ್ದಾರೆ. ಇವರ ಪ್ರಾಧ್ಯಾಪಕ ಹುದ್ದೆಯ ವಿಲೀನತಿ ಸರಕಾರದ ಒಪ್ಪಿಗೆ ಪಡೆಯುವ ಮುನ್ನವೆ ಇವರು ಸಂದರ್ಶನ ಸಮಿತಿಯ ಸದಸ್ಯರಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲುಗೊಂಡಿದ್ದಾರೆ. ಇವರು ಪಾಲುಗೊಂಡ ನೇಮಕಾತಿ ಸಮಿತಿಯ ನಿರ್ಣಯಗಳು ಎಷ್ಟು ನ್ಯಾಯಸಮ್ಮತ ಎನ್ನುವ ಪ್ರಶ್ನೆ ಇದೆ.

ಉ. ಬೋಧಕೇತರ ಹುದ್ದೆಯ ಆಯ್ಕೆಯ ಪ್ರಶ್ನೆ- ಬೋಧಕೇತರ ಹುದ್ದೆಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ ನಡೆಸಿದೆ ಎನ್ನುವ ವಿಚಾರ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಲು ಕಸ್ಟೋಡಿಯನ್ ಆಗಿ ನನ್ನನ್ನು ನೇಮಕ ಮಾಡಿದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿದೆ. ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ 40 ಅಂಕಗಳ ಒಬ್ಜೆಕ್ಟಿವ್ 60 ಅಂಕಗಳ ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿತ್ತು. ವಿವರಣಾತ್ಮಕ ಉತ್ತರಗಳ ಮಾಪನಕ್ಕೆ ಒಂದು ನಿರ್ದಿಷ್ಟ ಮಾನದಂಡ ಕಂಡುಕೊಳ್ಳುವುದು ಕಷ್ಟವೆಂದು ನಾನು ಕಸ್ಟೋಡಿಯನ್ ಜವಾಬ್ದಾರಿಯಿಂದ ಹಿಂದಕ್ಕೆ ಸರಿದಿದ್ದೆ ಮತ್ತು ಆ ಸಂದರ್ಭದಲ್ಲಿ ನಡೆದಿರುವ ಪರೀಕ್ಷೆಯನ್ನು ರದ್ದುಗೊಳಿಸಿ ಪ್ರತ್ಯೇಕ ಪರೀಕ್ಷೆ ನಡೆಸುವುದು ಸೂಕ್ತ ಎನ್ನುವ ಸಲಹೆ ಕೂಡ ನೀಡಿದ್ದೇನೆ.

ಈ ಎಲ್ಲದರ ಹಿನ್ನೆಲೆಯಲ್ಲಿ ನೋಡಿದರೆ ಪತ್ರಿಕೆಗಳಲ್ಲಿ ಬಂದ ವರದಿಗಳಲ್ಲೂ ಸಾಕಷ್ಟು ಸತ್ಯಾಂಶವಿದೆ ಎನ್ನುವುದು ನನ್ನ ನಿಲುವು. ಪತ್ರಿಕೆಗಳ ವರದಿಯ ಪರಾಮರ್ಶೆಗೆ ದಿನಾಂಕ 16/1/15ರ ಸಭೆಯ ನಡಾವಳಿಯನ್ನು ಅಂತಿಮಗೊಳಿಸಿ ಸರಕಾರಕ್ಕೆ ಕಳುಹಿಸಿದ್ದರೆ ನನ್ನ ನಿಲುವನ್ನು ಪ್ರತ್ಯೇಕವಾಗಿ ದಾಖಲಿಸಿ ಸರಕಾರದ ಗಮನಕ್ಕೆ ತರಬೇಕೆಂದು ತಮ್ಮನ್ನು ಕೋರುತ್ತೇನೆ' ಎಂದಿದ್ದಾರೆ.


ಈ ಪತ್ರದ ಕುರಿತಂತೆ ಪತ್ರಿಕೆಯೊಂದಕ್ಕೆ ಕುಲಪತಿಗಳು 'ರೋಸ್ಟರ್ ಪ್ರಕಾರವೇ ಹುದ್ದೆಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಸಂದರ್ಶನದಲ್ಲಿ ಪಾರದರ್ಶಕತೆ ಅನುಸರಿಸಲಾಗಿದೆ. ಈ ಎಲ್ಲಾ ಸಂದರ್ಭದಲ್ಲೂ ಚಂದ್ರ ಪೂಜಾರಿ ಜೊತೆಗೇ ಇದ್ದರು. ಆಗ ಎಲ್ಲೂ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ಈಗ ಏಕಾಏಕಿ ಆರೋಪಗಳನ್ನು ಮಾಡಿರುವುದನ್ನು ನೋಡಿದರೆ ದುರುದ್ದೇಶಪೂರಿತ ಎನಿಸುತ್ತದೆ' ಎಂದು ಖಾರವಾಗಿಯೇ ಪ್ರತಿಕ್ರಿಯೆ ನೀಡಿದ್ದಾರೆ. ಪೂಜಾರಿ ಅವರು ಪತ್ರದಲ್ಲಿ ನನ್ನ ಮಾತಿಗೆ ಬೆಲೆಯನ್ನೇ ಕೊಟ್ಟಿಲ್ಲ ಎಂದು ಹೇಳಿಕೊಂಡಿದ್ದರೂ ಕುಲಪತಿಗಳು ಆಕ್ಷೇಪ ವ್ಯಕ್ತಪಡಿಸಿಲ್ಲ ಎಂದಿದ್ದಾರೆ. ಅಂತೆಯೇ ತೀರಾ ಹತಾಶೆಯಿಂದ ಹರಿಹಾಯ್ದಂತಿದೆ. ಕುಲಪತಿಗಳು ಪ್ರಾಮಾಣಿಕವಾಗಿದ್ದದ್ದು ನಿಜವೇ ಆಗಿದ್ದರೆ, ಈಗ ನಡೆದಿರುವ ಅಕ್ರಮಗಳು ತಮ್ಮ ಗಮನಕ್ಕೆ ಬರದೆ ನಡೆದದ್ದೇ ಆದಲ್ಲಿ ಈ ಎಲ್ಲದರ ಸೂತ್ರಧಾರರಾದ ಡಾ.ಕೆ.ಪ್ರೇಮಕುಮಾರ್ ಮತ್ತು ಡಾ.ಸ.ಚಿ.ರಮೇಶ್ ಅವರ ಮೇಲೆ ಕೋಪಿಸಿಕೊಳ್ಳಬೇಕಿದೆ. ಅವರನ್ನು ವಿವಿಯಿಂದ ಹೊರಹಾಕಬೇಕಿದೆ. ಅಂತೆಯೇ ಅವರ ಅಕ್ರಮಗಳ ಕುರಿತು ತನಿಖೆ ಮಾಡಲು ಕುಲಪತಿಗಳೇ ಉನ್ನತ ಶಿಕ್ಷಣ ಸಚಿವಾಲಯಕ್ಕೆ ಮತ್ತು ರಾಜ್ಯಪಾಲರಿಗೆ ದೂರು ನೀಡಬೇಕಿದೆ. ಹೀಗೆ ಮಾಡಿದ್ದಾದಲ್ಲಿ ಸ್ವಲ್ಪ ಮಟ್ಟಿಗಾದರೂ ಕುಲಪತಿಗಳಾದ ಅಂಬಳಿಕೆ ಹಿರಿಯಣ್ಣ ಅವರ ಪ್ರಾಮಾಣಿಕತೆ ಬಗ್ಗೆ ಜನರಿಗೆ ಸ್ವಲ್ಪವಾದರೂ ನಂಬಿಕೆ ಬರುತ್ತದೆ. ಆದರೆ ಅದಕ್ಕೆ ವಿರುದ್ಧವಾಗಿ ಪ್ರಾಮಾಣಿಕರಾದ ಚಂದ್ರ ಪೂಜಾರಿ ಅವರ ಪತ್ರ ದುರುದ್ದೇಶಪೂರಿತ ಎಂದಿರುವುದು ನಿಜಕ್ಕೂ ಕುಲಪತಿಗಳ ಬಗ್ಗೆ ಸಂಶಯ ಮೂಡುವಂತೆ ಮಾಡಿದೆ.

ಈ ಪತ್ರದಲ್ಲಿ ಚಂದ್ರ ಪೂಜಾರಿಯವರು ಅಕ್ರಮ ನಡೆದ ಬಗ್ಗೆ ಹೇಳಿದ ಕೆಲವು ಸಂಗತಿಗಳನ್ನು ಪತ್ರಿಕೆ ಕಳೆದ ವಾರದ ವರದಿಯಲ್ಲಿಯೂ ವಿಶ್ಲೇಷಿಸಲಾಗಿತ್ತು. ಇಲ್ಲಿನ ವಿವರಗಳು ಪತ್ರಿಕೆಯ ವರದಿಯ ಮತ್ತೊಂದು ಮುಖವನ್ನು ತೋರುವಂತಿವೆ. ದಲಿತ (ಎಸ್ಸಿ) ಮಹಿಳೆಗೆ ಇರುವ ಮೀಸಲಾತಿಯನ್ನು ತಪ್ಪಿಸಿರುವುದನ್ನು ನೋಡಿದರೆ ನಿಸ್ಸಂಶಯವಾಗಿ ಇಲ್ಲಿ ದಲಿತ ವಿರೋಧಿ ನಿಲುವು ಎದ್ದು ಕಾಣುತ್ತದೆ. ಹಾಗಾಗಿ ರಾಜ್ಯ ದಲಿತ ಸಂಘರ್ಷ ಸಮಿತಿಯನ್ನು ಒಳಗೊಂಡಂತೆ ಹಾವೇರಿ, ಶಿಗ್ಗಾವಿಯ ದಲಿತಪರ ಸಂಘಟನೆಗಳು ಈ ಪ್ರಕ್ರಿಯೆಯ ವಿರುದ್ಧ ಧ್ವನಿ ಎತ್ತಬೇಕಾಗಿದೆ. ಎರಡನೆಯದಾಗಿ ಡಾ.ಕೆ.ಪ್ರೇಮಕುಮಾರ ಅವರ ಪ್ರೊಫೆಸರ್, ಡೀನ್, ಸಿಂಡಿಕೇಟ್ ಮೆಂಬರ್ ಸ್ಥಾನಗಳ ಭಡ್ತಿಯು ಒಳಗಿನವರ ವಿರೋಧವನ್ನು ಲೆಕ್ಕಿಸದೆಯೂ ಕುಲಪತಿಗಳು ಅನುಮೋದಿಸಿದ್ದಾರೆ ಎಂದಾಯಿತಲ್ಲವೆ? ಈ ವಿಷಯದಲ್ಲಿ ಕುಲಪತಿಗಳ ವಿರುದ್ಧವೆ ತನಿಖೆ ನಡೆಸಬೇಕಾಗಿದೆ. ಮೂರನೆಯದಾಗಿ ಪರೀಕ್ಷೆಯ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ನಡೆದಿರಬಹುದಾದ ಅಕ್ರಮದ ಸ್ಪಷ್ಟ ಚಿತ್ರಣ ಪೂಜಾರಿಯವರ ಪತ್ರದಿಂದ ತಿಳಿಯುತ್ತದೆ. ಅಂತೆಯೇ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಅಂಬಳಿಕೆ ಹಿರಿಯಣ್ಣ ಅವರು ಈ ಪತ್ರವನ್ನು ಉನ್ನತ ಶಿಕ್ಷಣ ಸಚಿವಾಲಯ ಮತ್ತು ರಾಜ್ಯಪಾಲರಿಗೆ ಕಳಿಸಿಕೊಡಬೇಕಾಗುತ್ತದೆ. ಹಾಗೆ ಕಳಿಸದಿದ್ದರೆ ಅಕ್ಷಮ್ಯ ಅಪರಾಧವಾಗುತ್ತದೆ.

ಡಾ.ಚಂದ್ರ ಪೂಜಾರಿ ಅವರು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು. ನಿಯೋಜನೆ ಮೇರೆಗೆ ಜಾನಪದ ವಿಶ್ವವಿದ್ಯಾಲಯದಲ್ಲಿ ಆನ್ವಯಿಕ ಜಾನಪದ ನಿಖಾಯದ ಡೀನ್ ಆಗಿದ್ದಾರೆ. ಕರ್ನಾಟಕದ ಅಭಿವೃದ್ಧಿ ಮತ್ತು ಸಮಾಜ ವಿಜ್ಞಾನ ಸಂಶೋಧನೆಯ ಬಗ್ಗೆ ಗಮನಾರ್ಹ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಜನಪರ ಚಳವಳಿಗಳ ಸಂಗಾತಿಯೂ ಆಗಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಕೆಲವು ಸೂಕ್ಷ್ಮ ವಿದ್ವಾಂಸರಲ್ಲಿ ಚಂದ್ರ ಪೂಜಾರಿ ಕೂಡ ಒಬ್ಬರು. ಇಂತಹ ನಿಷ್ಠುರ ವಿದ್ವಾಂಸರು ಜಾನಪದ ವಿಶ್ವವಿದ್ಯಾಲಯದ ಒಳಗೆ ನಡೆದ ಅಕ್ರಮಗಳ ಬಗ್ಗೆ ಬರೆದ ಪತ್ರ ನಿಜಕ್ಕೂ ದಿಟ್ಟತನದ್ದು. ವಿಶ್ವವಿದ್ಯಾಲಯಗಳ ಒಳಗಿದ್ದು ಅಲ್ಲಿನ ಅಕ್ರಮಗಳ ಬಗ್ಗೆ ಧ್ವನಿ ಎತ್ತದ ಪ್ರಾಮಾಣಿಕ ನಿಷ್ಠುರ ವಿದ್ವಾಂಸರಿಗೆ ಇದೊಂದು ಪಾಠವೂ ಹೌದು. ಅಂತಾರಾಷ್ಟ್ರೀಯ ಮಟ್ಟದ ವಿದ್ವತ್ತನ್ನು ಹೊಂದಿದ ಚಂದ್ರ ಪೂಜಾರಿ ಅವರನ್ನು ವಿಶ್ವವಿದ್ಯಾಲಯದ ಬೆಳವಣಿಗೆಗೆ ವಿಶ್ವಾಸನೀಯವಾಗಿ ಅವರ ವಿದ್ವತ್ತನ್ನು ಕುಲಪತಿಗಳು ಬಳಸಿಕೊಂಡಿದ್ದರೆ ನಿಜಕ್ಕೂ ಜಾನಪದ ವಿಶ್ವವಿದ್ಯಾಲಯಕ್ಕೆ ಹೊಸ ಚಹರೆಯನ್ನು ಅವರು ಕೊಡುತ್ತಿದ್ದರು. ಆದರೆ ಕುಲಪತಿಗಳು ಪ್ರೇಮಕುಮಾರ್ ಮತ್ತು ಸ.ಚಿ.ರಮೇಶ ಅವರಿಗೆ ಪ್ರಾಧಾನ್ಯತೆ ಕೊಟ್ಟ ಪರಿಣಾಮ ಜಾನಪದ ವಿಶ್ವವಿದ್ಯಾಲಯದ ಘನತೆ ಮಣ್ಣುಪಾಲಾಗಿದೆ. ಇಷ್ಟೆಲ್ಲಾ ಅವಘಡಗಳು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿರುವುದರಿಂದ ರಾಜ್ಯಪಾಲರು ಈ ಕುರಿತು ತನಿಖೆ ನಡೆಸಲು ಆದೇಶ ಹೊರಡಿಸಬೇಕಾಗಿದೆ.


● ಸಾವಿತ್ರಿ



ಕಥೆಗಾರ ಅಮಿನ್ ಕಮಿಲ್ ಮೂಲತಃ ಕಾಶ್ಮೀರಿ ಕಣಿವೆಯವರು. ಹುಟ್ಟಿದ್ದು 1924ರಲ್ಲಿ ಕಪ್ರೆನ್ ಕುಲ್ಗಮ್ ಎಂಬ ಪುಟ್ಟ ಹಳ್ಳಿ ಯಲ್ಲಿ. ಅಲಿಘರ್ ಮುಸ್ಲಿಂ ವಿವಿಯಲ್ಲಿ ಓದಿದ್ದು ಕಾನೂನು ಪದವಿಯಾದರೂ ವಕೀಲಿಕೆಗಿಂತ ಅಕ್ಷರ ಕೃಷಿಯಲ್ಲೆ ಹೆಚ್ಚು ತೊಡಗಿಸಿ ಕೊಂಡಂತವರು. ಆ ಕಾಲಘಟ್ಟದ ಹಲವಾರು ಸಾಹಿತಿಗಳಂತೆ ಕಮಿಲ್ ಕೂಡಾ ಮಾರ್ಕ್ಸಿಸ್ಟ್ ಸಾಹಿತ್ಯದಿಂದ ಪ್ರಭಾವಿತ ಆದಂತವರೆ. ಮೊದಮೊದಲು ಉರ್ದು ಮಾಧ್ಯಮದ ಮೂಲಕ ಸಾಹಿತ್ಯ ಬದುಕು ಆರಂಭಿಸಿದರಾದರು ಬಹುಬೇಗನೆ ಕಾಶ್ಮೀರಿ ಭಾಷೆಗೆ ತಮ್ಮ ಅಕ್ಷರ ಕೃಷಿಯನ್ನು ಪಲ್ಲಟಗೊಳಿಸಿದರು. ಕಾಶ್ಮೀರಿ ನೆಲದ ಸಂಕೀರ್ಣ ಸಾಮಾಜಿಕ ಬದುಕುಗಳನ್ನು ತಮ್ಮ ಬರಹಗಳಲ್ಲಿ ಪಾತ್ರವಾಗಿ ಸುವ ಅಮಿನ್ ಸಣ್ಣ ಕಥೆಗಳಲ್ಲಿ ಪಳಗಿದಂತವರು. ಭ್ರಮನಿರಸನ ಮತ್ತು ಸಮಕಾಲೀನ ಸಾಮಾಜಿಕ ಹತಾಶೆಗಳನ್ನು ಅವರ ಕಥೆಗಳು ವಿಡಂಬನಾತ್ಮಕವಾಗಿಯೇ ತೆರದಿಡುತ್ತವೆ. ಅಫ್ಸಾನಾಗಳು (ಸಣ್ಣ ಕಥೆಗಳು) ಕೇವಲ ರಂಜನೆ ಮತ್ತು ಟೈಮ್‌ಪಾಸ್‌ಗೆ ಮಾತ್ರ ಸೀಮಿತವಾಗಿರದೆ ಸಾಮಾಜಿಕ ಚಿಂತನೆಗಳನ್ನು ಬಿತ್ತುವ ಪರಿಣಾಮಕಾರಿ ಸಾಧನಗಳು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ತ್ವರಿತ ಗ್ರಹಿಕೆಗೆ ಲಭಿಸುವ ಮತ್ತು ಸೂಕ್ಷ್ಮ ಸಂವೇದನೆ ಯ ಅವರ ಕಥೆಗಳ ಪಾತ್ರಗಳು ಬಹುದೊಡ್ಡ ಸಾಮಾಜಿಕ ಹೊಣೆಯನ್ನು ಹೊತ್ತುಕೊಂಡು ರೂಪತಳೆದಂತೆ ಓದುಗರನ್ನು ಆವರಿಸುತ್ತವೆ. 'ಹಂಬಲ' ಎನ್ನುವ ಈ ಕಥೆಯು ಕೂಡಾ ಅಂತಹ ಒಂದು ಸಂಘರ್ಷವನ್ನು ತೆರೆದಿಡುವಂತದ್ದು. ಅಂದಹಾಗೆ, ತಮ್ಮ ಕವನ, ಕಥೆ, ಗಝಲ್‌ಗಳ ಮೂಲಕವಲ್ಲದೇ 'ಸೂಫಿ ಸಾಹಿತ್ಯ'ವನ್ನು ಮೂರು ಆವೃತ್ತಿಯಲ್ಲಿ ಪರಿಷ್ಕರಿಸಿದ ಕಾರಣಕ್ಕಾಗಿ ಕಾಶ್ಮೀರ ಸಾಹಿತ್ಯ ವಲಯದಲ್ಲಿ ಅಮಿನ್ ಕಮಿಲ್ ಹೆಚ್ಚು ಆಪ್ತರಾದಂತವರು.

ಕತೆ

ಹಂಬಲ



ಆ ದಿನ ಅಪರಾಹ್ನದಿಂದಲೂ ರಾಜಿ ಕೊಂಚಮಟ್ಟಿಗೆ ಅವಿಶ್ರಾಂತಳಾಗಿಯೇ ಇದ್ದಳು. ಬೆಚ್ಚನೆಯ ಹಾಸಿಗೆ ಕೂಡ ಅವಳ ನಿದ್ರೆಗೆ ನೆರವಾಗಿರಲಿಲ್ಲ, ಇತ್ತ ಇವಳು ಹಾಸಿಗೆಯಲ್ಲಿ ಉರುಳಾಡುತ್ತಲೇ ಇದ್ದರೆ ಅತ್ತ ಅವಳ ಅತ್ತೆ ಪಕ್ಕದ ರೂಮಿನಲ್ಲಿ ಏರಿದ ದನಿಯಲ್ಲಿ ಗೊರಕೆ ಹೊಡೆಯುತ್ತಿದ್ದಳು. ರಾಜಿಯ ಅತ್ತೆ ಲಘುವಾಗಿ ನಿದ್ರಿಸುತ್ತಿದ್ದಳು ಸಾಮಾನ್ಯವಾಗಿ. ಹರೆಯದ ಪ್ರಾಯದಲ್ಲಿ ತಾನು ನಿಧಾನವಾಗಿ ನಿದ್ರೆಯಿಂದ ಎದ್ದಿದ್ದರೆ ತನ್ನ ಮೂಳೆಗಳು ತನ್ನ ಕಸುವನ್ನು ಇನ್ನೂ ಉಳಿಸಿಕೊಳ್ಳುತ್ತಿದ್ದವು ಎಂಬ ಅಂಶ ಈಗ ಅವಳಿಗೆ ಮನವರಿಕೆಯಾಯಿತು.

ರಾಜಿಗೆ ನಿಖಾ ಆಗಿ ನವವಸಂತಗಳು ಉರುಳಿದ್ದವು. ಆದರೆ ಆಕೆ ಇನ್ನು ಗರ್ಭವತಿಯಾಗಿರಲಿಲ್ಲ, ಇವಳಂತೆಯೇ ಇರುವ ಇತರೆ ಎಲ್ಲ ಸ್ತ್ರೀಯರ ಅವಸ್ಥೆಯಂತೆಯೇ, ರಾಜೀ ಕೂಡ ಬಂಜೆತನ ಎಂಬ ಮಾನಸಿಕ ಯಾತನೆಯ ನೋವನ್ನು ಉಂಡಿದ್ದಳು. ಅವಳ ಅತ್ತೆ ಆಗಾಗ್ಗೆ "ಮಕ್ಕಳಿಗಾಗಿ ಏತಕ್ಕೆ ಕೊರಗುತ್ತೀಯಾ, ನೀನೆ ಇನ್ನೂ ಮೊಲೆ ಕುಡಿಯುವವಳಂಗಿದ್ದೀಯಾ? ಇನ್ನೂ ಸಾಕು ಬೇಕಾದಷ್ಟು ಸಮಯ ಇದೆ, ವಯಸ್ಸೂ ಇದೆ ನೀನ್ಯೇನು ಮಕ್ಕಳಾಗದೆ ಇರಲ್ಲ" ಎಂದು ಸಮಾಧಾನದ ಮಾತುಗಳನ್ನು ಆಡುತ್ತಿದ್ದಳು. ಆದರೆ ಆ ಮಾತುಗಳೂ ಅವಳ ಸಂಕಟವನ್ನು ಮತ್ತಷ್ಟು ತೀಕ್ಷ್ಣಗೊಳಿಸುತ್ತಿದ್ದವು. ರಾಜಿ ಸಂಪೂರ್ಣವಾಗಿ ನಿರಾಶೆಗೊಂಡಿದ್ದಳು. ಆದರೆ ರಾಜಿಯ ಗಂಡ ಮಾತ್ರ ಇನ್ನೂ ಆಶಾವಾದಿಯಾಗಿಯೇ ಇದ್ದ ಆತ ಓರ್ವ ದೈವಭಕ್ತ, ವಿಶೇಷವಾಗಿ ಈ ದಿನವೂ ಕೂಡ, ಇಸ್ಲಾಮಿಕ್ ವಿದ್ವಾಂಸರ ಆಶೀರ್ವಾದಕ್ಕಾಗಿ ಹೊರಗೆ ಹೋಗಿದ್ದ. ಪಕ್ಕದ ಹಳ್ಳಿಯ ನೆಂಟರೊಬ್ಬರು ಆ ವಿದ್ವಾಂಸರ ಬಗ್ಗೆ ಹೇಳಿದ್ದರು. ಆ ಪವಿತ್ರ ಪುರುಷನ ಪವಾಡಸದೃಶ ಶಕ್ತಿಯನ್ನು ತನ್ನ ಗಂಡನಿಂದ ಕೇಳಿದ ಆಕೆ ದಿಕ್ಕು ತೋಚದ ವಿಷಮ ಪರಿಸ್ಥಿತಿಗೆ ಬಂದು ನಿಂತಿದ್ದಳು. 'ಪವಿತ್ರ ಪುರುಷರ ಆಶೀರ್ವಾದ ಪಡೆದ ನನಗೆ ಈವರೆಗೆ ಬಂದ ಭಾಗ್ಯವಾದರೂ ಎಂತಾದ್ದು?' ಎಂದು ಚಿಂತಿಸಿದಳು. ಆದರೆ ಅದೇ ವೇಳೆಗೆ ಆಕೆ ಸರಿಯಾಗಿ ಪರ್ಯಾಲೋಚಿಸುತ್ತಾ: "ಕೆಲವೊಮ್ಮೆ ಸಾಧಾರಣವೆನಿಸದ ಚಿಕಿತ್ಸೆಗಳು ತೀಕ್ಷ್ಣ ಹಾಗೂ ನಿರಾಶಾದಾಯಕ ಕಾಯಿಲೆಗಳನ್ನು ಗುಣಪಡಿಸುತ್ತವೆ. ಈ ಪುಣ್ಯ ಪುರುಷನ ಆಶೀರ್ವಾದ ನನ್ನ ಬಂಜೆತನದ ಶೃಂಖಲೆಗಳನ್ನು ಕಿತ್ತೊಗೆಯಲು ಸಹಾಯ ಮಾಡುವ ಸಾಧ್ಯತೆಗಳುಂಟು" ಎಂದುಕೊಂಡಳು ತನಗೆ ತಾನೇ.

ಯಾವಾಗ ರಾಜಿಗೆ ಕಣ್‌ರೆಪ್ಪೆ ಕೂಡ ಮುಚ್ಚಲಾಗಲಿಲ್ಲವೋ ಆಗ ಅವಳ ಅವಿಶ್ರಾಂತತೆ ಮತ್ತೂ ಹೆಚ್ಚಿತು, ಹಾಸಿಗೆ ಮೇಲೆ ಹಾಗೆಯೇ ಕುಳಿತು ಗೋಡೆಗೆ ಒರಗಿದಳು. ಇಡೀ ಖೋಲಿಯನ್ನು ಮತ್ತೆ ಮತ್ತೆ ನೋಡಿದಳು. ಶೆಲ್ಫ್, ಸೀಲಿಂಗ್, ಗೋಡೆ, ಕೊನೆಗೆ ಬಾಗಿಲು. ಬಾಗಿಲಿಗೂ ಪಕ್ಕದ ಖೋಲಿಗೂ ಸಂಪರ್ಕವಿತ್ತು, ಅಲ್ಲಿ ಅವಳ ಅತ್ತೆ ನಿದ್ರೆ ಮಾಡುತ್ತಿದ್ದಳು. ಅವಳ ದೃಷ್ಟಿ ಬಾಗಿಲ ಮೇಲೆಯೇ ಬಹು ಹೊತ್ತಿನಿಂದ ನೆಟ್ಟಿತ್ತು ಅದರ ಉದ್ದಳತೆಯನ್ನು ಅಳೆಯುವವಳಂತೆ. ಬಳಿಕ ದೃಷ್ಟಿ ಕಿಟಕಿಯ ಕಡೆಗೆ ವಾಲಿತು. ಹಾಸಿಗೆ ಮೇಲಿಂದ ನಿಧಾನವಾಗಿ ಮೇಲೆದ್ದಳು. ಕಿಟಕಿ ಬಳಿಗೆ ಹೋದಳು. ಬಹು ಎಚ್ಚರಿಕೆಯಿಂದ ಹಾಗೂ ಚಿಂತಾಕ್ರಾಂತಳಾಗಿ ತಲೆಬಾಗಿಸಿ ಅಂಗಳದ ಮೇಲೆ ಕಣ್ಣು ಹಾಯಿಸಿದಳು. ಮತ್ತೊಮ್ಮೆ ಬಾಗಿಲ ಕಡೆ ನೋಡಿದಳು, ಒಡನೆಯೇ ಕಿಟಕಿ ಸರಳನ್ನು ಭದ್ರವಾಗಿ ಹಿಡಿದು ಕೆಳಗೆ ಇಳಿದು ಅಂಗಳಕ್ಕೆ ಬಂದಳು. ಅತಿ ಪ್ರಯಾಸದಿಂದ ಅಲ್ಲಿಂದ ಕೆಳಗೆ ಇಳಿದಳು. ಅಂಗಳದಲ್ಲಿ ನಿಂತು ಪುನಃ ಕಿಟಕಿಯ ಕಡೆ ಕಣ್ಣು ಹಾಯಿಸಿದಳು ತಾನು ಮೇಲಿಂದ ಇಳಿಯುವಾಗ ಏನೂ ಪೆಟ್ಟು ಮಾಡಿಕೊಳ್ಳದೆ ಇಳಿದು ಬಂದೆನೆಂದು ಹಿರಿಹಿರಿ ಹಿಗ್ಗಿದಳು.

ರಾಜೀ ಅಂಗಳದ ಬಾಗಿಲನ್ನು ಮೆತ್ತಗೆ ತೆಗೆದು ಬಿರಬಿರನೆ ಹೆಜ್ಜೆ ಹಾಕಿದಳು. ಕೆಲವು ಸಲ ಅವಳ ಹೆಜ್ಜೆದಾಪು ಓಟಕ್ಕೂ ತಿರುಗುತ್ತಿತ್ತು, ಕೆಲವೊಮ್ಮೆ ಯಾವುದೋ ಶಬ್ದ ಆಲಿಸಿ ಶಿಲೆಯಂತೆ ನಿಂತು ಬಿಡುತ್ತಿದ್ದಳು ಹಾಗೂ ಪದೇ ಪದೇ ಹಿಂದಿರುಗಿ ನೋಡುತ್ತಿದ್ದಳು. ತನ್ನನ್ನು ಅತ್ತೆ ಹಿಂಬಾಲಿಸುತ್ತಿರುವಳೆಂಬ ಆಧಾರರಹಿತ ಗ್ರಹಿಕೆ ಅವಳಲ್ಲಿತ್ತು. ಹಿಂದಿರುಗಿ ನೋಡುವ ಅವಳ ಕಣ್ನೋಟ ಅಲ್ಲಿ ಏನನ್ನೂ ಗುರುತಿಸುತ್ತಿರಲಿಲ್ಲ, ಏಕೆಂದರೆ ಅಸಾಧ್ಯವಾದ ಕಗ್ಗತ್ತಲು ಬಲಗೈಗೆ ಎಡಗೈ ಕಾಣಿಸದಂತೆ ಮಾಡಿತ್ತು, ಚಂದಿರ ಥಳಥಳಿಸುವ ಅಂಬರಕ್ಕೆ ಇನ್ನೇನು ಇನ್ನೊಂದು ಅಥವಾ ಒಂದೂವರೆ ಗಂಟೆಯಲ್ಲಿ ದಾಪುಗಾಲಿಡಲಿದ್ದ.

ರಾಜಿ ಕಾಂಕ್ರೀಟ್ ದಾರಿಗುಂಟ ನಡೆದಳು. ಸರ್ಪದಂತೆ ಕೃಷಿ ಹೊಲದ ಮೂಲಕ ಹಾದುಹೋಗುವ ಕಾಲುದಾರಿ ಆ ಜಾವದಲ್ಲಿ ಕಾಣಿಸುತ್ತಿರಲಿಲ್ಲ, ಅವಳೇನಾದರೂ ಆ ಹಾದಿ ತುಳಿದಿದ್ದರೆ, ಮತ್ತೆಮತ್ತೆ ಮುಗ್ಗರಿಸಿ ಬೀಳಬೇಕಿತ್ತು. ಆಕೆಗೆ ಒಂದಿಷ್ಟೂ ಭಯವಿರಲಿಲ್ಲ ಹಾಗೂ ಅವಳ ಸದ್ಯದ ಬಣ್ಣಗುಂದಿದ ಪರಿಸ್ಥಿತಿಯ ಬಗ್ಗೆ ಅರಿವಿಲ್ಲದಂತಿದ್ದಳು. ಅವಳು ಗೂಬೆಗಳ ಘೂತ್ಕಾರಕ್ಕೆ, ನರಿಗಳ ಹುಯ್ಲಿಗೆ ಅನ್ಯಮನಸ್ಕಳಂತಿದ್ದಳು. ಅವಳ ಅಸ್ತಿತ್ವದ ಪ್ರತಿಯೊಂದು ಎಳೆಯೂ ಅವಳಿಗೆ ಇನ್ನು ಮುಂದಕ್ಕೆ ರಭಸದ ಹೆಜ್ಜೆ ಇಡಲು ಅಧಿಕ ಹೊರೆಯನ್ನು ಹೊರಿಸಿತ್ತು, ಆಕೆ ತನ್ನನ್ನು ಯಾರೂ ಕೂಡ ಮನೆಗೆ ಹಿಂದಿರುಗೆಂದು ಒತ್ತಾಯಿಸಬಾರದೆಂದು ಬಯಸಿದ್ದಳು.

ರಾಜಿ ಧಾರೆಧಾರೆಯಾಗಿ ಧುಮ್ಮಿಕ್ಕುವ ಜಲಪಾತದ ಭೋರ್ಗರೆತ ಕಿವಿಗೆ ಕೇಳಿಸುವವರೆಗೂ ತನ್ನ ಮುಂದಿರುವ ಪಯಣವನ್ನು ಮುಂದುವರಿಸಿದಳು. ವಸಂತದಲ್ಲೂ ಅದೇ ವಾದಿಜ್, ಪ್ರವಾಹ ಉಕ್ಕಿಬಂದ ನದಿಯಂತೆ ಭೋರ್ಗರೆಯುತ್ತಿತ್ತು, ವಾದಿಜ್‌ನ ಭೋರ್ಗರೆತ ಆಲಿಸಿದ ರಾಜೀ ತಾನು ಈಗಾಗಲೇ ಮನೆ ಬಿಟ್ಟು ಐದು ಮೈಲಿ ಬಂದಿರುವೆನೆಂದುಕೊಂಡಳು. ಅವಳಿನ್ನೂ ಕೇವಲ ಒಂದು ಮೈಲಿ ಮಾತ್ರ ಹೆಚ್ಚು ನಡೆಯಬೇಕಿತ್ತು. "ಬರೀ ಒಂದೇ ಮೈಲಿ", ಇದೇ ಪ್ರಥಮ ಬಾರಿಗೆ ದೀರ್ಘವಾಗಿ ಚಿಂತಿಸಲು ಪ್ರಾರಂಭಿಸಿದಳು. ಒಂದೇ ಒಂದು ಮೈಲಿ ಆದರೆ ವಾದಿಜ್‌ನ್ನು ದಾಟದ ಮೇಲೆ, ದೂರ ಇನ್ನೂ ಕಡಿಮೆ ಆಗಲಿದೆ." ಈ ವೇಳೆಗೆ ಚಂದಿರ ಥಳಥಳಿಸುವ ತಾರೆಗಳ ಬಾಂದಳದಲ್ಲಿ ದಾಪುಗಾಲಿಡಲು ಶುರುವಾಗಿದ್ದ. ಅವಳು ವಾದಿಜ್‌ನ ಆ ಕಡೆ ಅರ್ಧ ಮೈಲಿ ದಾರಿ ಸವೆಸಿದಾಗಲೇ ಚಂದಿರ ಆದಾಗಲೇ ಆಕಾಶದಲ್ಲಿ ಅನಂತ. ದೂರಕ್ಕೆ ಮುಸ್ಸುಗಿದ್ದ ಹಾಗೂ ಇಡೀ ಭೂದೃಶ್ಯ ಉಜ್ವಲತೆಯನ್ನು ನೀಗಿಕೊಂಡು ನಿಸ್ತೇಜವಾಗಿತ್ತು, ಈಗ ಆಕೆ ತನ್ನ ತವರಿಗೆ ತೀರಾ ಸನಿಹದಲ್ಲಿದ್ದಳು. ರಸ್ತೆಯ ಎಡಭಾಗದಲ್ಲಿ ಒಂದು ಝರಿ ಬಳುಕುತ್ತಾ ಮುನ್ನುಗ್ಗುವುದನ್ನು ರಾಜೀ ಗಮನಿಸಿದಳು. ತಿಂಗಳ ಬೆಳಕಿನಲ್ಲಿ ಅದು ಪಾದರಸದ ರಾಶಿಯಂತೆ ಮಿನುಗುತ್ತಿತ್ತು, ರಾಜಿಗೆ ಈಗ ಬಾಯಿ ಬತ್ತಿ ಹೋಗಿ ನೀರಡಿಕೆಯಾಯಿತು. ಈಗ ಅವಳು ನಾಲಿಗೆಯ ತುದಿಯಿಂದ ತನ್ನ ಅಧರಗಳನ್ನು ಒದ್ದೆ ಮಾಡಿಕೊಂಡಳು. ಆಮೇಲೆ ನೀರನ್ನು ಬೊಗಸೆಯಲ್ಲಿ ಮೊಗೆದು ಕುಡಿಯಲು ಶುರುವಾದಳು. ಒಂದು ಬೊಗಸೆ, ಎರಡು, ಮೂರು! ತನ್ನ ಇಡೀ ಜೀವನ ಪೂರಾ ನೀರಡಿಕೆಯಿಂದಲೇ ಇದ್ದಳೇನೋ ಎಂಬಂತೆ ನೀರು ಕುಡಿಯುವುದನ್ನು ಮುಂದುವರಿಸಿದಳು. "ನನ್ನ ತವರಿನ, ನನ್ನ ಹುಟ್ಟಿದೂರಿನ ನೀರು ಆಹಾ! ಎಷ್ಟು ಸಿಹಿಯಾಗಿದೆ!" ಎಂದು ಆಲೋಚಿಸಿದಳು. ಈ ಜಲರಾಶಿಯನ್ನು ಕಾಣುವ, ಸುಖಿಸುವ ಸೌಭಾಗ್ಯಕ್ಕೆ ನನಗೆ ಕಳೆದ ಒಂಬತ್ತು ವರ್ಷಗಳಿಂದ ಅಡ್ಡಿಪಡಿಸಲಾಗಿದೆ. ನನ್ನದೇನು ತಪ್ಪು? ನಾನೆಲ್ಲಿ ಎಡವಿರುವೆ? ನನ್ನ ನಿಖಾ ಆದ ದಿನದಿಂದಲೇ, ನನ್ನ ಕುಟುಂಬ ಹಾಗೂ ನನ್ನ ಗಂಡನ ಕುಟುಂಬ ಪರಸ್ಪರ ಒಂದು ಬಗೆಯ ಹಗೆಯನ್ನು ಬೆಳೆಸಿಕೊಂಡಿತು. ಅದಕ್ಕೆ ನನ್ನನ್ಯೇಕೆ ದೂಷಿಸಬೇಕು? ಈ ಒಂಬತ್ತು ವರ್ಷಗಳಲ್ಲಿ ನೀವೆಂದೂ ನನ್ನ ತವರಿನ ದರ್ಶನ ಮಾಡಲು ನನಗೆ ಅವಕಾಶ ನೀಡಲಿಲ್ಲ, ಇಷ್ಟು ವರುಷಗಳ ತನಕವೂ ನೀವು ನನ್ನನ್ನು ಕೂಡಿಹಾಕಿದ್ದೀರಿ. ಎರಡು ಮನೆಗಳ ನಡುವಿನ ಆರು ಮೈಲಿ ಅಂತರ ಈಗ ಅದು ಆರುನೂರು ಕರಾರುಗಳ ಹಾಗೆ ಆಗಿದೆ. ಆದರೆ, ನಾನೀಗ ನನ್ನ ಮಾವನ ಮನೆಗೆ ಇನ್ನೆಂದು ಹಿಂದಿರುಗಲಾರೆ. ನನ್ನ ಪೋಷಕರು ಇನ್ನೂ ಜೀವಂತವಾಗಿದ್ದಾರೆ. ನನ್ನ ಅತ್ಯಗತ್ಯಗಳನ್ನು ಭರಿಸುವ ಸಿರಿತನ ಅವರಿಗಿದೆ." ಪುನಃ ಆಕೆಗೀಗ ನೀರು ಕುಡಿಯಬೇಕೆನಿಸಿ ಮತ್ತೊಂದು ಬೊಗಸೆ ಕುಡಿದಳು. ಬಳಿಕ ಮುಖಕ್ಕೆ ಒಂದೆರಡು ಬೊಗಸೆ ನೀರು ಎರಚಿಕೊಂಡಳು. "ನನ್ನ ಹುಟ್ಟೂರಿನ ಜಲರಾಶಿ ಧನ್ಯ! ಅದರ ಆಶೀರ್ವಾದ ನನ್ನ ಮೇಲಿರಲಿ, ನನ್ನ ಅಂತರ್ಯದ ನೀರಡಿಕೆಯ ಅಸ್ತಿತ್ವವೀಗ ನೀಗಿತು!" ಹೀಗೆಂದು ಗೊಣಗುತ್ತಾ, ಮೇಲೆದ್ದ ಅವಳು ತನ್ನ ತವರಿನ ಕಡೆ ಹೆಜ್ಜೆಯ ನಡಿಗೆಯನ್ನು ಚುರುಕುಗೊಳಿಸಿದಳು.

ಖುಷಿ ಮತ್ತು ವಿಸ್ಮಯಗಳ ಸಂಗಮದೊಂದಿಗೆ ಎಡಬಲ ನೋಡಿದಳು. ಬೇಕೆಂದೇ ಉಸಿರನ್ನು ಗಾಢವಾಗಿ ಹೊರಗೆ ಬಿಟ್ಟಳು. ಅವಳ ಸುತ್ತಮುತ್ತಲಿನ ಹೊಲ ಹೃದಯ ಸ್ಪರ್ಶಿ ಸುವಾಸನೆಯನ್ನು ಹೊರಸೂಸಿತ್ತು, ತವರೂರಿನ ಸನಿಹ ಬರುತ್ತಿದ್ದಂತೆ, ಗುಡ್ಡದ ಮೇಲಿನ ಪಹರೆಯವನ ಇಜ್ಜಾರು ಛಾವಣಿಯಂತಿರುವ ಒಂದು ಕುಟೀರವನ್ನು ಪ್ರಾಸಂಗಿಕವಾಗಿ ನೋಡಿದಳು. "ಅದು ಫಾರ್ಜಿ ಮಾಸಿ ಮನೆ. ಅದೇ ಮನೆ, ನಮ್ಮ ಊರಿನ ಪ್ರಾರಂಭದ ಸರಹದ್ದು" ಎಂದುಕೊಂಡಳು. ಅವಳ ಹಿಗ್ಗು ಈಗ ದಮನಗೊಂಡ ಹಂತದಲ್ಲಿತ್ತು, ಹಳ್ಳಿಯ ವಾಸಿಗಳು ಹಾಗೂ ಅವಳ ಬಾಲ್ಯದ ಅನುಭವ ಅವಳ ಕಣ್ಮುಂದೆ ಸಿನಿಮಾ ಪರದೆ ಮೇಲೆ ಪಡಿಮೂಡಿದಂತೆ ಮೂಡಿ ಬಂದಿತು.

"ಪಾರ್ಜಿ ಮಾಸಿ! ಪಾರ್ಜಿ ಮಾಸಿ! ನಿನ್ನ ಕೂದಲು ಬೆಳ್ಳಗಾಗಿವೆ."

"ಹೋಗೆ, ಹೋಗೆ ಮೂರು ಬಿಟ್ಟ ಗುಡಿಸೆಟ್ಟಿ! ನನ್ನ ಕೂದಲು ಬೆಳ್ಳಗಾಗಿವೆ ಏನೇ? ಇಲ್ಲ, ಒಂಚೂರು ಹೊಟ್ಟು ಇದ್ದಿರಬಹುದು."

'ಪಾರ್ಜಿ ಮಾಸಿ! ಸುಮಾರು ಎಂಬತ್ತರ ಹತ್ತಿರದವಳು! ಹಳ್ಳಿಯ ಬಹು ಹಳೆಯ ತಲೆ. ಆದ್ದರಿಂದ ಆಕೆಯನ್ನು ಮಾಸಿ ಎಂದು ಕರೆಯಲಾಗುತ್ತಿತ್ತು, ಒಳ್ಳೆ ಸಾವು ಬರಲಿ ಅವಳಿಗೆ! ಆಟವಾಡುವ ಮಕ್ಕಳ ಒಡನಾಡಿ ಅವಳು, ಬೆಳೆದು ನಿಂತ ದೊಡ್ಡವರಿಗೆ ವ್ಯವಹಾರಿಕ ಬುದ್ಧಿವಂತಿಕೆಯ ಸಲಹೆಗಾರಳವಳು. ದಂಪತಿಗಳ ನಡುವೆ ಜಗಳ ಟಿಸಿಲೊಡೆದೊಡನೆ ಅವಳು ಉಪಶಮನ ಮಾಡುತ್ತಿದ್ದಳು. ನಾನು ನಿಖಾ ಆಗುವ ಸಮಯದಲ್ಲಿ ಆಕೆ ತೀವ್ರ ಕಾಯಿಲೆಗೆ ತುತ್ತಾಗಿ ಬೇಗನೆ ತೀರಿಕೊಂಡಿದ್ದಳು. ಇಲ್ಲಾಂದ್ರೆ ನನ್ನ ಪೋಷಕರು ಹಾಗೂ ನನ್ನ ಗಂಡನ ಮನೆಯವರು ಇಷ್ಟು ದೀರ್ಘಕಾಲ ಪರಸ್ಪರ ತಲೆತಲೆ ಹೊಡೆದುಕೊಳ್ಳುತ್ತಿರಲಿಲ್ಲ, ಅದಂತೂ ಖಂಡಿತ ಸಾಧ್ಯವಾಗ್ತಿರಲಿಲ್ಲ!' ಹೀಗೆ ಸಾಗಿತ್ತು ಅವಳ ದೀರ್ಘ ಆಲೋಚನೆ. ಪಾರ್ಜಿ ಮಾಸಿಯ ಗುಡಿಸಲಿನ ಇಜ್ಜಾರು ಛಾವಣಿ ಕಂಡೊಡನೆ, ಇಡೀ ಊರಿನ ಎಲ್ಲ ಮನೆಗಳು ಅವಳ ಕಣ್ಮುಂದೆ ಒತ್ತಾಗಿ ನಿಂತವು. ಅದೊಂದು ಖುಷಿ ಕೊಡುವ ದೃಶ್ಯ, ಆಳವಾದ ನಿಟ್ಟುಸಿರುಬಿಟ್ಟಳು. "ಈ ಎಲ್ಲ ಮನೆಮಠ ಗುಡಿಸಲುಗಳನ್ನು ನನ್ನ ಎದೆಗೆ ಭದ್ರವಾಗಿ ಅಪ್ಪಿಕೊಳ್ಳಲೇ!" ರಾಜಿ ಆಶಿಸಿದಳು. ಅದೇ ಸಮಯಕ್ಕೆ ಹಳೆಯ ಕಾಲದ ಒಂದು ಕಾಲುದಾರಿ, ಈಗ ಜಲ್ಲಿಕಲ್ಲು ಹಾಕಿದ, ಟಾರು ಹಾಕಿದ, ರಸ್ತೆಯಾಗಿ ಬದಲಾಗಿರುವುದನ್ನು ಕಂಡಳು. ಕೋಪ ಉಕ್ಕಿದಂತಾಯಿತು.

ಈ ರೀತಿ ರೂಪಾಂತರಗೊಂಡ ಪರಿಸರವನ್ನು ಆ ಹಳೆಯ ಸ್ಥಳದ ಸ್ವರೂಪಕ್ಕೆ, ಸಂಬಂಧಿಸದ ಮಾಯಾಜಾಲದಿಂದ ಸೃಷ್ಟಿಯಾದಂತೆ ಆದ ವೈಲಕ್ಷಣ್ಯಗಳನ್ನು ಕಲ್ಪಿಸಿಕೊಳ್ಳಲು ಅವಳ ಮನಃಶಕ್ತಿ ಸಿದ್ಧವಿರಲಿಲ್ಲ, ಅಲ್ಲಿ ರೂಮೆ ಮಾಮಾನ ತರಕಾರಿ ಮಡಿ ಇತ್ತಲ್ವಾ ಎಂದು ನೆನಪಿಸಿಕೊಂಡಳು. 'ಓ, ಅಲ್ಲಲ್ಲ, ಇಲ್ಲಿ! ಆ ಆಕ್ರೋಡು ಮರ ಈಗಲೂ ಅಲ್ಲೇ ಇದೆ ಒಳ್ಳೆ ಬಾಂದುಗಲ್ಲಿನಂತೆ ಅದರ ಕಾಯಿಯ ತಿರುಳು ಅದೆಂತಾ ರುಚಿ! ನನಗೆ ವಯಸ್ಸಾಗುತ್ತಾ ಬಂದಿತು. ಆದರೆ ಆಕ್ರೋಡು ಮರ ಪ್ರಾಚೀನ ಕಾಲದ ರಾಕ್ಷಸನಂತೆ ನೆಟ್ಟಗೆ ನಿಂತಿದೆ.'

"ರೂಮೆ ಮಾಮಾ, ನನಗೊಂದು ಸಾಗ್ ಗೆಡ್ಡೆ ಕೊಡು."

"ಏಕೆ? ನೀನೇನು ಜಾನುವಾರೆ ಸಾಗ್ ಗೆಡ್ಡೆ ತಿನ್ನೋಕೆ?"

"ಮಾಮಾ, ಮಾಮಾ, ಕೊಡು ಮಾಮಾ, ನಿನ್ನ ದಮ್ಮಯ್ಯ ಅಂತೀನಿ ಕೊಡು!"

"ಈ ತರಕಾರಿ ಮಡು ಒಂದು ದಿನ ಖಾಲಿಯಾಯ್ತದೆ. ಸರಿ ಈ ಗೆಡ್ಡೆ ಕೊಡು ಅವನಿಗೆ."

"ಯಾರಿಗೆ?"

"ನಿನ್ನಲ್ಲಿರುವ ಬಯಕೆಯ ಪ್ರಾಣಿಗೆ, ನಿನ್ನಲ್ಲಿ ಪ್ರಲೋಭನೆ ಸ್ಫುರಿಸಿದ ಅದಕ್ಕೆ."

ಈ ಟಾರು ರಸ್ತೆ ತರಕಾರಿ ಬೆಳೆಯ ಮಡಿಗಳನ್ನು ಸಂಪೂರ್ಣವಾಗಿ ಗುರುತುಳಿಯದಂತೆ ಮಾಡಿಬಿಟ್ಟಿದೆ. ಬಡಪಾಯಿ ರೂಮೆ ಮಾಮಾ! ಹತ್ತು ಹುಡುಗರು ಬಂದು ಹಾಖ್ ಗೆಡ್ಡೆ (ಹಾಖ್: ಕಾಶ್ಮೀರಿಗಳ ಪ್ರಿಯವಾದ ಸೊಪ್ಪು

) ಹೊತ್ತೊಯ್ಯಬಹುದಿತ್ತು, ಬಡಪಾಯಿ! ಹಾಳಾದ ಗೆಡ್ಡೆ ಬುರುಡೆಗಳನ್ನು ಪೂರಾ ಅವನ ಕುಟುಂಬ ಉಣ್ಣುತ್ತಿತ್ತು. ಚಳಿಗಾಲ ಪೂರಾ ಸೊಯಾ ಕೆಂಪು ಹುರುಳಿ ಅವರ ಜೀವನಾಧಾರವಾಗಿತ್ತು.

ಟಾರು ರಸ್ತೆಯಲ್ಲಿ ತುಸು ದೂರ ಕ್ರಮಿಸಿದ ಮೇಲೆ ರಾಜೀ ಬಲಗಡೆಗೆ ನೇರ ಊರ ಮಧ್ಯಕ್ಕೆ ಬಂದು ನಿಂತಳು. ಒಂಬತ್ತು ವರ್ಷಗಳ ವ ಮೇಲೆ ಇದೇ ಪ್ರಥಮ ಬಾರಿಗೆ.

ಯಾರದು ಈ ಮನೆ?' ಅದನ್ನೇ ದೃಷ್ಟಿ ಇಟ್ಟು ನೋಡಿದಳು. 'ಎರಡಂತಸ್ತಿನ ಮನೆ! ಅಲ್ಲಿದ್ದದ್ದು ಟೈಲರ್ ಸಮದ್‌ನ ಜೊಂಡು ಹುಲ್ಲಿನ ಗುಡಿಸಲು. ಇದು ಶ್ರೀಮಂತಿಕೆ ಬಂದಿತ್ತಾ ಅವರಿಗೆ?'

ಮದಿಯಾ, ಏನು ಹೋಲಿತೀದ್ದಿಯಾ?"

ಏನು ಹೋಲೀಲಿ? ಬೇರೆಯವರಿಗೆ ಬಟ್ಟೆ, ನನಗೆ ಶವಬಟ್ಟೆದನ" ಚಿಂದಿಹುಂದಿ ಯಲ್ಲೇ ಕನ್ನಡಕವನ್ನು ಮೂಗಿನ ಮೇಲೆ ಸರಿಯಾಗಿ ಕೂರಿಸಿ ಹೊಲಿಗೆ ದ ಮೇಲೆ ಕೈಯಾಡಿಸುತ್ತಾ ಸಮದ್ ಉತ್ತರಿಸಿದ್ದ.

! ನಿಷ್ಕರುಣಿಯೇ! ನಿನ್ನ ಬಯಕೆಯ ಹಂಬಲ ನನ್ನ ಅಸ್ತಿತ್ವವನ್ನೇ ಸು ಮಾಡಿದೆ. ಪ್ರೀತಿಯ ಎಲ್ಲ ಪಾಶಗಳನ್ನು ಬೇರೆ ಬೇರೆ ಮಾಡಿ ಸ್ತಿರುವಿ' ಎನ್ನುತ್ತಾ ಸ್ತುತಿಗೀತೆ ಹಾಡಿದ ರಾಜೀ ಪುನಃ ಪುನಃ ತನ್ನ ತ್ತ ತಿರುಗಿ ನೋಡಿದಳು ಹಾಗೂ ತನ್ನ ಬಾಲ್ಯದ ನೆನಪುಗಳು ಮರುನೆನಪಿಗೆ ಕೆನ್ನೆ ಕೆಂಪೇರಿತು. ಪ್ರಜ್ಞಾಪೂರ್ವಕವಾಗಿ ಅವಳೇನು ಈಗ ತನ್ನ ನೆನಪುಗಳನ್ನು ನೆನಪಿಸಿಕೊಳ್ಳಲಿಲ್ಲ ಆದರೆ ಅವೇ ಅಪ್ರಯತ್ನಪೂರ್ವಕವಾಗಿ ಸಿರು ಮರುಸೃಷ್ಟಿಗೊಂಡವು. ಈ ಹಿಂದೆ ತಾನು ಒಂದು ಬೀದಿಯಿಂದ ಒಂದು ಬೀದಿಗೆ, ಒಂದು ಅಂಗಳದಿಂದ ಮತ್ತೊಂದು ಅಂಗಳಕ್ಕೆ ಸುತ್ತಿದ್ದಂತೆ ಈಗ ಊರ ಉದ್ದಗಲಕ್ಕೂ ಓಡಾಡುವ ತೀವ್ರ ವಾಯಿತು. ಪ್ರಾಯಶಃ ಆಕೆ ಹೀಗೆ ಅಡ್ಡಾಡಬಹುದಿತ್ತು, ಖುಷಿಯಿಂದ. ನ್ನ ಪೋಷಕರನ್ನು ನೋಡುವ ತೀವ್ರಾಭಿಲಾಷೆಯಿಂದ ಮುಂದಕ್ಕೆ ತಳ್ಳದೆ ದ್ದರೆ ಅವಳು ಚಕ್ರವ್ಯೂಹದಂತ ಒಂದು ಓಣಿಯಿಂದ ಮತ್ತೊಂದು ಬಳಿಕ ಮಗದೊಂದಕ್ಕೆ ಹೋಗುತ್ತಿದ್ದಳೇನೊ. ಕಡೆಗೆ ಅವಳ ಪೋಷಕರ ನಿನ ಕಿರುಓಣಿಗೆ ಬಂದಳು. ಅವಳ ಗಮ್ಯಸ್ಥಾನದ ಹತ್ತಿರಕ್ಕೆ ಬರುತ್ತಿದ್ದಂತೆ, ಹೃದಯ ಜೋರಾಗಿ ಡವಡವಗುಟ್ಟಿದಂತಾಯಿತು. ಖುಷಿಯಿಂದ ಬಿಟ್ಟಳು. ಅವಳ ಹಣೆಯ ಮೇಲೆ ಬೆವರಹನಿಗಳು ಪೋಣಿಸಿದವು ಮಣಿಗಳಂತೆ.

ನ್ನ ತವರಿನ ಕುಟೀರ! ನನ್ನ ಅಮ್ಮ, ಅಪ್ಪ!' ಈಗ ಅವಳ ಗತಿ ನೊಂಡಿತು ಕಣ್ಣಾಲಿ ತುಂಬಿ ಬಂದಿತು.

ತಳು, ಅಂಬರ ದಿಟ್ಟಿಸಿದಳು ತುಂಬು ಕೃತಜ್ಞತೆಯ ಭಾವದಲ್ಲಿ, "ಓ! ನನ್ನ ಪ್ರಣಾಮಗಳು ನಿನಗೆ. ಹದಿನಾರರಲ್ಲಿ ವಧುವಾಗಿ ಹೋದೆ ಇಪ್ಪತ್ತೈದರಲ್ಲಿ ಮತ್ತೊಂದು ಬಾರಿ ನನ್ನ ಪೋಷಕರ ಕುಟೀರ ನೋಡಿದೆ."

ವಳು ತನ್ನನ್ನು ತಾನು ನಿಯಂತ್ರಣಕ್ಕೆ ತಂದುಕೊಂಡಳು, ಬಳಿಕ ತನ್ನ ಮನೆಯೆಡೆ ಮುಖ ಮಾಡಿದಳು ಆದೀಗ ಪೂರಾ ಹಾಗೂ ಸ್ಪಷ್ಟವಾಗಿ ತು. ಅವಳ ತವರಿನ ಮನೆಗೆ ಎದುರಾಗಿ ಹೊಸದೊಂದು ಮನೆ ದ್ದು ಆದು ಅವಳ ತವರುಮನೆಯನ್ನು ನೋಡಲು ಅಡಚಣೆಯೊಡ್ಡಿತ್ತು.

ಯಾರದೀ ಮನೆ?' ಆಶ್ಚರ್ಯಗೊಂಡಳು. 'ಹೊಸದಾಗಿ ಕಟ್ಟಿದ ಮನೆ. ಇಲ್ಲಿ ಸೂಲಗಿತ್ತಿ ಅವಳ ಮಣ್ಣಿನ ಮನೆಯಿತ್ತು, ಜೊಂಡು ಹುಲ್ಲಿನ ಮಾಡು ತ್ತು.' ಆ ಮನೆಯ ಬಗ್ಗೆಯೇ ಯೋಚಿಸುತ್ತಾ, ಯೋಚಿಸುತ್ತಾ, ಕೊನೆಗೆ ತ್ತಿ ರೆಹೆಮ ನೆನಪಿಗೆ ಬಂದಳು. ಅವಳು ಸವೆದುಹೋಗಿದ್ದಳು ಭೂರ್ಜ ಊರುಗೋಲು ಹಿಡಿದು ಬಹು ಪ್ರಯಾಸದ ನಡಿಗೆಯ ಮೇಲೆ ಡಿ ಇಡುತ್ತಿದ್ದಳು.

ಹೆಮ ದೀದಿ, ಈಗಲೂ ನಿನಗೆ ಸಾವು ಬಯಕೆಯಾಗುತ್ತಿಲ್ಲವೆ?"

ನಗೆ ಬಟ್ಟೆ ನೇಯಬೇಕು, ನಿನ್ನ ಹೆರಿಗೆಗೆ ಸಹಾಯ ಮಾಡ್ಬೇಕು. ಪ್ರಷ್ಟೆ ನನ್ನ ಸಾವು."

ನ್ಮೆಗೆ ಈ ಮಾತುಗಳು ರಾಜೆಯ ಸ್ಮೃತಿಗೆ ಬಂದು ದಿಗ್ಭ್ರಮೆಯ ಎದುರಾಯಿತು. ಹತ್ತಿ ಹೂವಿನಂತೆ ಬಿಳಿಚಿಕೊಂಡ ದೃಷ್ಟಿ ನೆಲ ತು.

ಬಗೂನಾ ಹೆತ್ತೇನಾ ನಾನು!' ಯೋಚಿಸಿದಳು.

ಸಲ ಅಲ್ಲಾನ ಕರುಣೆ ನನ್ನ ಮೇಲೆ ಬೀಳಬಹುದು. ಪವಿತ್ರ ಪುಣ್ಯಾತ್ಮನ ರ್ವಾದಗಳು ನನ್ನನ್ನು ಬಂಜೆ ಎಂಬ ಶಾಪದಿಂದ ಮುಕ್ತಗೊಳಿಸಬಹುದು. ನಾಳೆ ನನ್ನ ಪತಿ ಹಿಂದಿರುಗಿ ಬಂದಾಗ ನಾನು ಕಾಣೆಯಾಗಿರುವುದು ತಿಳಿಯುತ್ತದೆ...' ಕ್ಷಣ ಹೊತ್ತು ಯೋಚಿಸಿದಳು.

ಈ ತವರಿನ ಕುಟೀರ ಕಣ್ಣೆದುರು ಬಂದಿತು. ಹೊತ್ತಿ ಉರಿವ ಅನುಭವವಾಗಿ ಕಿತ್ತು ಹರಿಯಿತು ಜೋರಾಗಿ. ಸುತ್ತಮುತ್ತ ಒಮ್ಮೆ, ಮತ್ತೊಮ್ಮೆ, ಮ್ಮೆ ನೋಡಿದಳು. ಈಗ ಹಿಂದಕ್ಕೆ ಮುಖ ಮಾಡಿದಳು ಹಾಗೂ ಚಲನೆಯ ಹೆಜ್ಜೆಗಳ ವೇಗ ಈಗ ಅವಳು ತವರೂರಿಗೆ ಬಂದಾಗ ಗಕ್ಕಿಂತ ಹೆಚ್ಚಿತ್ತು.


ಮೈಲಿಗಳ ದೂರ ಕ್ರಮಿಸಿದ ಮೇಲೆ, ತದನಂತರ, ತನ್ನ ಮಾವನ ಅಂಗಳಕ್ಕೆ ಬಂದಳು. ಮೊದಲ ಕೋಳಿ ಕೂಗು ಕೂಗಿಯಾಗಿತ್ತು. ಅತ್ತೆ ಕ್ಷಣಹೊತ್ತು ಕೆಮ್ಮಿ ಬಳಿಕ ಕಾರಿಡಾರಿನ ಬಾಗಿಲು ತೆರೆದಳು. ರಾಜೀ ಹುಲ್ಲಿನಲ್ಲಿ ಅವಿತಿಟ್ಟುಕೊಂಡಳು. ಅವಳ ಅತ್ತೆ ಕಾಂಪೌಂಡ್ ಕಡೆ ಸುಮ್ಮನೆ ಹಾಗೆ ಕಣ್ಣು ಹೊರಳಿಸಿದಳು. ಅದು ಡಾಳಾಗಿ

ಸೊಸೆ ಅಪಿಪೇಕದ ಮೊದ್ದು ಮನೆ. ಸಂಜೆ ಗೇಟ್‌ಗೆ ಬೀಗ ಹಾಕಿಲ್ಲ, ಬಹಶಾಪಾದೋ, ಹೇಗೋ ಸಡ್ನ' ಎಂದು ತನಗೆ ತಾನೇ ಹೇಳಿಕೊಳ್ಳುತ್ತ ಸೆಯ ಕರ್ಮವಿಧಿಗಳನ್ನು ಪೂರೈಸಲು ಬಾತ್‌ರೂಮಿಗೆ ಹೋದಳು. ಈಗ ಮುಂಬಾಗಿಲಿನ ಬಾಗಿಲನ್ನು ಹಜೇಶಿಸಿದ ಬೀಲಿ ಮೆಲಗೆ ಪತಿ ಸ್ನಿಜ ಆವಾಸವನ್ನು ಮೆಟ್ಟಿ ನಿಂತಳು.

ಕಾಶ್ಮೀರಿ ಮೂಲ: ಅಮೀನ್ ಕಮಿಲ್


ಕನ್ನಡಕ್ಕೆ: ಗೊಂದಲಗೆರೆ ಲಕ್ಷ್ಮೀಪತಿ

ಆತ್ಮಸಾಕ್ಷಿಯ ದೀಪ ಆರದಿರಲಿ...



ಗೊಮ್ಮಟನ ನಾಡಿನಲ್ಲಿ ಕನ್ನಡ ನಾಡುನುಡಿಯ ಮಹಾಜಾತ್ರೆ ಇನ್ನೇನು ಆರಂಭವಾಗುತ್ತದೆ. ಆದರೆ ಕನ್ನಡ ಬದುಕಿನ ಸಾಕ್ಷಿಪ್ರಜ್ಞೆ ದೇವನೂರು ಮಹದೇವ ಅವರ ಆಶಯಕ್ಕೆ ಸಮ್ಮೇಳನ ವೇದಿಕೆಯಾದೀತೇ ಎಂಬ ಪ್ರಶ್ನೆ ಹಾಗೂ ಆಗಲಿಕ್ಕಿಲ್ಲ ಎಂಬ ಆತಂಕ ಕಾಡುತ್ತಿವೆ.

ಹಾಸನ ಜಿಲ್ಲಾ ಸಾಹಿತ್ಯ ಪರಿಷತ್ತಿನ ನಿಯೋಗವು ಶ್ರವಣಬೆಳಗೊಳದಲ್ಲಿ ನಡೆಯಲಿರುವ 81ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವ ಪ್ರಸ್ತಾಪವನ್ನು ಮುಂದಿಟ್ಟಾಗ 10ನೆಯ ತರಗತಿಯವರೆಗೆ ಮಾತೃಭಾಷಾ ಮಾಧ್ಯಮದ ಶಿಕ್ಷಣ ವ್ಯವಸ್ಥೆ ಜಾರಿಗೆ ಬರುವವರೆಗೆ ಸಾಹಿತ್ಯ ಸಮ್ಮೇಳನದ ಸಂಭ್ರಮದಲ್ಲಿ ಭಾಗವಹಿಸದಿರುವ ತಮ್ಮ ಮೂರು ದಶಕಗಳ ನಿಲುವಿಗೆ ಬದ್ಧತೆಯನ್ನು ಮುಂದುವರಿಸಿ ಆ ಗೌರವದ ಸ್ಥಾನವನ್ನು ದೇವನೂರು ಮಹದೇವ ನಿರಾಕರಿಸಿದರು. ಈ ಹಿಂದೆ ಎರಡು ಬಾರಿ ಇದೇ ಕಾರಣಕ್ಕೆ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನೂ, ನೃಪತುಂಗ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳನ್ನೂ ತಿರಸ್ಕರಿಸಿದ್ದರು. ಕರ್ನಾಟಕದ ಪ್ರಮುಖ ಸಾಮಾಜಿಕ ಸಾಂಸ್ಕೃತಿಕ ಚಳವಳಿಗಳ ನೇತಾರರು ಹಾಗೂ ಅವುಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ ನಾವು- ತಾವುಗಳೆಲ್ಲ ಕಳೆದ ಎರಡು ದಶಕಗಳಲ್ಲಿ ನಮ್ಮ ನಿಲುವುಗಳಲ್ಲಿ ಮಾಡಿಕೊಂಡ ಬದಲಾವಣೆಗಳು ಹಾಗೂ ರಾಜೀ ಮನೋಭಾವವನ್ನು ನೆನೆಸಿಕೊಂಡರೆ ಹಾಗೂ ಜೀವನದುದ್ದಕ್ಕೂ ಸಾಹಿತ್ಯ ಪರಿಷತ್ತು, ಅಕಾಡೆಮಿಗಳ ಅಧ್ಯಕ್ಷರಾಗುವ, ಸದಸ್ಯರಾಗುವ, ಪ್ರಶಸ್ತಿಗಳನ್ನು ಸ್ವೀಕರಿಸುವ ಮನೋಭಾವವನ್ನು ತೀವ್ರವಾಗಿ ಖಂಡಿಸಿ ಕೆಲವರಿಂದ ರಾಜೀನಾಮೆ ಕೊಡಿಸಿ, ಪ್ರಶಸ್ತಿಗಳನ್ನು ಹಿಂದಿರುಗಿಸಿ ಸಂಭ್ರಮಿಸಿದ ನನ್ನ ತಲೆಮಾರಿನ ನಾವು ಕೆಲವರು ಒಂದು ಸಣ್ಣ ಸಾಂಸ್ಕೃತಿಕ ಅಧಿಕಾರ ಕೇಂದ್ರ, ಒಂದು ಪುಟ್ಟ ಪ್ರಶಸ್ತಿ ಬಂದಾಗ ಸಂಭ್ರಮಿಸುತ್ತಿರುವ ವಾಸ್ತವವನ್ನು ನೆನಪಿಸಿಕೊಂಡರೆ ಮಹಾದೇವ ಅವರ ಬದ್ಧತೆ ಮತ್ತು ದೃಢತೆಗಳ ಚಾರಿತ್ರಿಕ ಮಹತ್ವ ಅರಿವಿಗೆ ಬರುತ್ತದೆ.



ರಾಜಕೀಯ ಅಧಿಕಾರಗಳು, ಸಾಂಸ್ಕೃತಿಕ ಅಧಿಕಾರ ಕೇಂದ್ರಗಳು, ಗೌರವ-ಪ್ರಶಸ್ತಿ-ಸನ್ಮಾನಗಳು ಪ್ರತಿಭಟನಾ ಮನೋಭಾವವನ್ನು ನಿಯಂತ್ರಿಸುವ ಸಲಕರಣೆಗಳಾಗಿ ಬಳಕೆಯಾಗುತ್ತ ಸಾಂಸ್ಕೃತಿಕ ವಲಯದಲ್ಲಿ ಮೌನವನ್ನು ಉತ್ಪಾದಿಸತೊಡಗಿವೆ. ಹೀಗಾಗಿ ಪ್ರಭುತ್ವದ ನಿಲುವುಗಳಿಗೆ ಬಹುತೇಕರು ಮೌನವಾಗಿದ್ದೇವೆ. ಇಲ್ಲವೇ ಒಂದು ಸೀಮಿತ ಚೌಕಟ್ಟಿನಲ್ಲಿ ಭಿನ್ನಾಭಿಪ್ರಾಯಗಳನ್ನು ದಾಖಲಿಸಿದಂತೆ ಮಾಡಿ ಮರೆತುಬಿಡುವ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳುತ್ತಿದ್ದೇವೆ. ಚಳವಳಿಗಳನ್ನು ಹುಟ್ಟುಹಾಕುವ ನೈತಿಕ ಶಕ್ತಿಯನ್ನೇ ಕಳೆದುಕೊಂಡು ದುರ್ಬಲರಾಗುತ್ತಿದ್ದೇವೆ. ಮಾತೃಭಾಷಾ ಮಾಧ್ಯಮದ ಶಿಕ್ಷಣ ನೀತಿಯನ್ನು ಕುರಿತಂತೆ ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವು ಖಾಸಗಿ ಶಿಕ್ಷಣ ಸಂಸ್ಥೆಗಳ ಹಾಗೂ ಬಂಡವಾಳಶಾಹಿ ಪ್ರಭುತ್ವಗಳ ಹಿತಾಸಕ್ತಿಯ ಪರವಾಗಿ ಹೊರಬಿದ್ದಾಗ ದಿಗ್ಭ್ರಾಂತರಾದೆವು ಅಥವಾ ಹಾಗೆ ತೋರಿಸಿಕೊಂಡೆವು. ಜನಾಂದೋಲನವೊಂದು ಏಕಾಏಕಿಯಾಗಿ ಆರಂಭವಾಗಿ ಬಿಡಬೇಕಾದ ಚಾರಿತ್ರಿಕ ಸಂದರ್ಭವದು. ಕರ್ನಾಟಕದ ಶೂದ್ರ, ದಲಿತ, ರೈತ, ಬಂಡಾಯ, ಮಹಿಳಾ, ಪರಿಸರ ಇತ್ಯಾದಿ ಚಳವಳಿಗಳು ಒಂದೊಂದು ಸಣ್ಣಪುಟ್ಟ ಕಾರಣಗಳನ್ನು ನೆಪಮಾಡಿಕೊಂಡು ಹೊರಹೊಮ್ಮಿದವು. ಯಾಕೆಂದರೆ ವ್ಯವಸ್ಥೆ ಹಾಗೂ ಮನಸ್ಥಿತಿಗಳಲ್ಲಿ ಒಳಗೇ ಚಳವಳಿಯ ಕಾವು ಸಿದ್ಧವಾಗಿತ್ತು. ಆದರೆ ಇಲ್ಲಿ ಚಳವಳಿ ಹುಟ್ಟಲು ಬಲಾಢ್ಯ ಕಾರಣವಿರುವಾಗಲೂ, ಜಾಗತೀಕರಣದ ಒಪ್ಪಂದದ ನಂತರ ಹಳೆಯ ಹೊಸ ಶೋಷಣೆಗಳು ತೀವ್ರವಾಗಿರುವಾಗಲೂ, ಪ್ರಾದೇಶಿಕ ಭಾಷೆ, ಸಂಸ್ಕೃತಿ ಹಾಗೂ ಬದುಕುಗಳನ್ನು ಸರ್ವನಾಶಗೊಳಿಸುವಷ್ಟು ಆಕ್ರಮಣ ತೀವ್ರವಾಗಿರುವಾಗಲೂ ನಾವೆಲ್ಲ ನೋಯುತ್ತಿದ್ದೇವೆಯೇ ಹೊರತು ಪುಟಿದೇಳುತ್ತಿಲ್ಲ. ಆದರೆ ದೇವನೂರು ಮಹದೇವ ಪುಟಿದೇಳುವ ಚಾರಿತ್ರಿಕ ಅವಕಾಶವೊಂದನ್ನು ಕಲ್ಪಿಸಿಕೊಟ್ಟಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರು ಮನವೊಲಿಸಲು ಹೋದಾಗ ತಮ್ಮ ನಿಲುವನ್ನು ಬದಲಾಯಿಸದೇ 'ಹಾಲಂಬಿಯವರಿಗೆ ಒಂದು ಬಹಿರಂಗಪತ್ರ' ಬರೆದರು. ಆ ಪತ್ರ ಕೇವಲ ಹಾಲಂಬಿಯವರಿಗಲ್ಲ- ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೇ ಬರೆದ ಬಹಿರಂಗ ಪತ್ರವಾಗಿತ್ತು. ಇಲ್ಲಿಯವರೆಗೆ ತಮ್ಮಷ್ಟಕ್ಕೆ ತಾವೇ ರಾಜಕೀಯ, ಸಾಂಸ್ಕೃತಿಕ ಅಧಿಕಾರ ಕೇಂದ್ರಗಳನ್ನು, ಪ್ರಶಸ್ತಿಗಳನ್ನು ತಿರಸ್ಕರಿಸಿ ಸಂಚಲನ ಸೃಷ್ಟಿಸಿ ಮೌನವಾಗುತ್ತಿದ್ದವರು ಈ ಬಾರಿ ಸಾಕಷ್ಟು ಹೆಜ್ಜೆ ಮುಂದೆ ಹೋಗಿ ಎಲ್ಲರೂ ಸೇರಿ ಜನಾಂದೋಲನವನ್ನು ಆರಂಭಿಸಬೇಕಾದ ಆಗತ್ಯವನ್ನು ಮಂಡಿಸಿದ್ದರು. ನಾಡು, ನುಡಿ, ಸಂಸ್ಕೃತಿ ಹಾಗೂ ಪ್ರಾದೇಶಿಕ ಬದುಕಿನ ನೆಲೆಗಳು ನಿರ್ನಾಮವಾಗುತ್ತಿರುವ ಇಂಥ ಸಂಕಟದ ಸಂದರ್ಭದಲ್ಲೂ ದೇವನೂರ ಅವರ ಪ್ರಸ್ತಾಪಕ್ಕೆ ತೀರ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಸತ್ಯಂತಿಹರನು ಬಟಬೆಭ್ರಿಸುವುದು. ಕಷ್ಟ ಎನ್ನುವುದು ಸಾಬೀತಾಯಿತು.

ಮಹದೇವ ತಮ್ಮ ಪತ್ರದಲ್ಲಿ ಮುಖ್ಯವಾಗಿ ಪ್ರಸ್ತಾಪಿಸಿದ ಸಂಗತಿಗಳೆಂದರೆ- ಮಾತೃಭಾಷಾ ಮಾಧ್ಯಮದ ಶಿಕ್ಷಣ ವ್ಯವಸ್ಥೆಯನ್ನು ಕುರಿತಾದ ಆಘಾತಕಾರಿ ಬೆಳವಣಿಗೆಗಳು ಕೇವಲ ಕನ್ನಡದ ಪ್ರಶ್ನೆಯಲ್ಲ. ನವಬಂಡವಾಳವಾದದ ಆಕ್ರಮಣಕ್ಕೆ ತುತ್ತಾದ ಈ ದೇಶದ ಹಾಗೂ ಬಡರಾಷ್ಟ್ರಗಳ ಪ್ರಾದೇಶಿಕ ಭಾಷೆ; ಸಂಸ್ಕೃತಿ ಬದುಕುಗಳ ಅಳಿವುಉಳಿವಿನ ಪ್ರಶ್ನೆ. ಇದಕ್ಕಿರುವ ಏಕೈಕ ದಾರಿಯೆಂದರೆ ತಕ್ಷಣವೇ ದೇಶದ ಪಾರ್ಲಿಮೆಂಟಿನ ಮೇಲೆ ಒತ್ತಡ ಹೇರಬಲ್ಲ ಜನಾಂದೋಲನವನ್ನು ಕರ್ನಾಟಕದಿಂದ ಆರಂಭಿಸುವುದು. ಅದರ ನಾಯಕತ್ವವನ್ನು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ವಹಿಸಿಕೊಂಡು ಮರುಹುಟ್ಟು ಪಡೆಯಬೇಕು. ಕರ್ನಾಟಕದಲ್ಲಿ ಚಳವಳಿ ಹುಟ್ಟಲು ಪೂರಕವಾದ ರಾಜಕೀಯ ವಾತಾವರಣವೂ ಇದೆ. ದೇವನೂರರ ಜನಾಂದೋಲನದ ಕನಸಿಗೆ ಜೀವತುಂಬುವ ನೈತಿಕ ಜವಾಬ್ದಾರಿಯಿಂದ ನಾವೆಲ್ಲ ನುಣುಚಿಕೊಂಡೆವಲ್ಲವೇ? ಕನಿಷ್ಟಪಕ್ಷ ಆ ಕುರಿತು ತಕರಾರುಗಳಿದ್ದರೆ ದಾಖಲಿಸದಂತೆ ಮೌನವಹಿಸಿದೆವು.

ಒಮ್ಮೆ ಹೀಗೆ ಊಹಿಸೋಣ- ಈಗಾಗಲೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ವಹಿಸಿದ ಹಿರಿಯರು ದೇವನೂರ ಅವರನ್ನು ಬೆಂಬಲಿಸಿ ತಾವು ಬೀದಿಗಿಳಿಯುವುದಾಗಿ ಘೋಷಿಸಿದ್ದರೆ, ಮಹಾದೇವ ತಿರಸ್ಕರಿಸಿದ 81ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಇದೇ ಕಾರಣ ನೀಡಿ ಈ ನಾಡಿನ ಯಾವ ಹಿರಿಯ ಸಾಹಿತಿಗಳೂ ಒಪ್ಪಿಕೊಳ್ಳದೇ ಹೋಗಿದ್ದರೆ, ಈ ಸಮ್ಮೇಳನದ ವಿಚಾರಸಂಕಿರಣಗಳು, ಕವಿಗೋಷ್ಠಿಗಳು, ಸನ್ಮಾನ ಗೋಷ್ಠಿಗಳಲ್ಲಿ ಭಾಗವಹಿಸಲು ಇದೇ ಕಾರಣಕ್ಕೆ ನಾವು ನೀವೆಲ್ಲ ನಿರಾಕರಿಸಿದ್ದರೆ, ಎಲ್ಲ ಅಕೆಡಮಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳು ರಾಜೀನಾಮೆ ನೀಡಿ ಈ ನಾಡಿನ ಸಾಹಿತಿ ಕಲಾವಿದರು ಮಾತೃ ಭಾಷಾಮಾಧ್ಯಮದ ಶಿಕ್ಷಣ ವ್ಯವಸ್ಥೆ ಹಾಗೂ ಸಮಾನ ಶಿಕ್ಷಣ ನೀತಿಗಳು ಜಾರಿಯಾಗುವವರೆಗೆ ಪ್ರಶಸ್ತಿಗಳನ್ನು ಸ್ವೀಕರಿಸಲು ನಿರಾಕರಿಸುವ ತೀರ್ಮಾನವನ್ನು ಪ್ರಕಟಿಸಿದ್ದರೆ, ಕನ್ನಡ ಚಿತ್ರರಂಗವನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಯತ್ನಿಸಿದ್ದರೆ... ಆಂದೋಲನಕ್ಕೆ ಒಂದು ಸಣ್ಣ ಸಂಚಲನ ಸಿಗಬಹುದಾಗಿತ್ತಲ್ಲವೇ? ಈ ರೀ.. ಪ್ರಪಂಚ ಅತೀ ಆದರ್ಶವಾದಿಯಾಗಿ ತೋರಿದರೂ ಅಸಾಧ್ಯವಾದುದೇನಾಗಿರಲಿಲ್ಲ, ದೇವನೂರರ ತೀರ್ಮಾನ ಅಂಥದೊಂದು ಆತ್ಮಾವಲೋಕನಕ್ಕೆ ತೊಡಗಿಸಿತ್ತು, ನಾವೆಲ್ಲ ಮೌನ ವಹಿಸಿದೆವು. ಇದು ಮಹಾಮೌನ.

ಹಾಗೆ ನೋಡಿದರೆ ದೇವನೂರು ನಿಲುವಿಗೆ ತಕ್ಕಮಟ್ಟಿಗೆ ಘನತೆಯಿಂದ ಸ್ಪಂದಿಸಿದ್ದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು. ಪುಂಡಲೀಕ ಹಾಲಂಬಿಯವರು ಸಮ್ಮೇಳನವನ್ನು ಜನಾಂದೋಲನದ ಕಾರ್ಯಾಗಾರವಾಗಿ ರೂಪಿಸುವುದಾಗಿ ಘೋಷಿಸಿದರು. ನಿಯೋಜಿತ ಸರ್ವಾಧ್ಯಕ್ಷರಾದ ಡಾ. ಸಿದ್ದಲಿಂಗಯ್ಯನವರು ದೇವನೂರರ ಆಶಯಗಳು ಮೊದಲ ಆದ್ಯತೆಯಾಗಿ ಚರ್ಚಿಸಿ ಸಮ್ಮೇಳನದ ಮೂಲಕ ಜನಾಂದೋಲನಕ್ಕೆ ನಾಂದಿ ಹಾಡುವುದಾಗಿ ಹೇಳಿಕೊಂಡರು. ಈಗಾಗಲೇ ಸಮ್ಮೇಳನದ ಆಮಂತ್ರಣ ಪತ್ರಿಕೆ ಬಿಡುಗಡೆಯಾಗಿದೆ. 'ಸಂವಿಧಾನ-ರಾಜ್ಯಭಾಷಾನೀತಿ', 'ಕನ್ನಡ-ಬದುಕು-ಚಳವಳಿಗಳು', 'ಸ್ವಾತಂತ್ರ್ಯೋತ್ತರ ಕರ್ನಾಟಕ-ವರದಿಗಳ ಅನುಷ್ಠಾನ' ಎಂಬ ಮೂರು ಪ್ರಮುಖ ಗೋಷ್ಠಿಗಳನ್ನು ರೂಪಿಸಲಾಗಿದೆ. ಮೇಲುನೋಟಕ್ಕೆ ದೇವನೂರರ ಆಶಯಗಳಿಗೆ ಆದ್ಯತೆ ಸಿಕ್ಕಂತೆ ಭಾಸವಾಗುತ್ತದೆ. ಆದರೆ ಚಳವಳಿಯನ್ನು ರೂಪಿಸುವ ಉದ್ದೇಶ ಇದ್ದಂತಿಲ್ಲ. ಹಾಗೇನಾದರೂ ಇದ್ದಿದ್ದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪು-ಚಿಂತನೆಯ ಕೇಂದ್ರವಾಗುತ್ತಿತ್ತು, ಹಳ್ಳಿಯಿಂದ ದಿಲ್ಲಿಯವರೆಗೆ ದೀನದಲಿತರಿಂದ ಹಿಡಿದು ಪುರೋಹಿತ ಸಿರಿವಂತರವರೆಗೆ ಇಂಗ್ಲಿಷ್ ವ್ಯಾಮೋಹದಲ್ಲಿ ಮುಳುಗೇಳುತ್ತಿರುವ ವಾಸ್ತವದ ಬಗ್ಗೆ, ಅದಕ್ಕೆ ಕಾರಣವಾಗಿರುವ ಸಾಮ್ರಾಜ್ಯಶಾಹಿ ರಾಜಕೀಯ ಹಿತಾಸಕ್ತಿಗಳ ಹಾಗೂ ಕಾರ್ಯಾಚರಣೆಗಳ ಬಗ್ಗೆ ಚಿಂತನಮಂಥನ ನಡೆಯುತ್ತಿತ್ತು. ಮುಖ್ಯವಾಗಿ ಪಾರ್ಲಿಮೆಂಟಿನ ಮೇಲೆ ಒತ್ತಡ ಹೇರುವ ಜನಾಂದೋಲನವನ್ನು ರೂಪಿಸುವ ತಾತ್ವಿಕ ಹಾಗೂ ಸಂಘಟನಾತ್ಮಕ ಪ್ರಣಾಳಿಕೆಯನ್ನು ರೂಪಿಸುವುದು ಮೊದಲ ಆದ್ಯತೆಯಾಗುತ್ತಿತ್ತು. ಸಮ್ಮೇಳನವನ್ನು ಭವಿಷ್ಯದ ಆಂದೋಲನದ ನೀಲನಕ್ಷೆಯನ್ನು ತಯಾರಿಸುವ ಕಾರ್ಯಾಗಾರವಾಗಿ ರೂಪಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮುತುವರ್ಜಿ ವಹಿಸಿಲ್ಲ, ದೇವನೂರರ ಆಶಯ ಆದ್ಯತೆ ಪಡೆದಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ಹಾಗಾದರೆ ಮುಂದೇನು?


ಮಾತೃಭಾಷಾ ಮಾಧ್ಯಮ ಹಾಗೂ ಸಮಾನ ಶಿಕ್ಷಣ ನೀತಿ ಜಾರಿ ಬರುವವರೆಗೆ ಇನ್ನೊಂದು ಸಮ್ಮೇಳನ ನಡೆಸುವುದಿಲ್ಲವೆಂದೂ ಸಮ್ಮೇಳನ ಮುಗಿದ ಮಾರನೆಯ ದಿನದಿಂದಲೇ ಕರ್ನಾಟಕದ ಸಾಂಸ್ಕೃತಿಕ ಲೋಕದ ಒಡನಾಟದಲ್ಲಿ ರೂಪು ರೇಷೆಗಳನ್ನು ಸಿದ್ಧಪಡಿಸಿ ಜನಾಂದೋಲನವನ್ನು ಆರಂಭಿಸುವ ಏಕೈಕ ನಿರ್ಣಯವನ್ನು ಪರಿಷತ್ತು ತೆಗೆದುಕೊಳ್ಳಬಹುದೇ? ಹಾಗೆ ಪರಿಷತ್ತು ತೀರ್ಮಾನಿಸಿದ್ದರೆ ಕರ್ನಾಟಕದ ಸಾಂಸ್ಕೃತಿಕ ಲೋಕ ಒಟ್ಟಾಗಿ ಪರಿಷತ್ತಿನ ಕನ್ನೊಡೆಯುವ ಹಂತವನ್ನು ಭಕ್ತಿಸಿ, ಜನಾಂದೋಲನಕ್ಕೆ ಚಾಲನೆ ಸಿಗಲೀತೇ? ಅಥವಾ ದೇವನೂರು ಮಹದೇವ ಬೆಳಗಿಸಿದ ಆತ್ಮಸಾಕ್ಷಿಯ ದೀಪ ಆರಿ ಹೋದೀತೇ?

● ಡಾ. ಎಂ.ಡಿ. ಒಕ್ಕುಂದ

ಮಹಾತ್ಮರ ಮರಣ

'ಶರಣನ ಗುಣ ಮರಣದಲ್ಲಿ ಕಾಣು' ಎಂಬ ಮಾತಿದೆ. ನಮ್ಮ ಕಾಲದಲ್ಲಿ ಗಾಂಧೀಜಿಗಿಂತ ದೊಡ್ಡ ಶರಣ ಯಾರಿದ್ದಾರೆ? ಹಂತಕನ ಗುಂಡು ಅವರ ಎದೆಗೆ ತಾಕಿದಾಗ ಅವರು 'ಹೇ ರಾಮ್' ಎಂದು ಉದ್ಗರಿಸಿದರೆಂದೂ ಅದೇ ಅವರ ಬಾಯಿಂದ ಬಂದ ಕಟ್ಟ ಕಡೆಯ ಶಬ್ದ ಎಂದೂ ಪ್ರತೀತಿ. ಇತ್ತೀಚೆಗೆ ಕೆಲವರು ಅದರ ಸತ್ಯಾಸತ್ಯತೆಯನ್ನು ಪ್ರಶ್ನಿಸಿದ್ದಾರೆ. ಗಾಂಧೀಜಿ ತನ್ನ ದೇಹಾಂತ್ಯದ ಕ್ಷಣದಲ್ಲಿ 'ಹೇ ರಾಮ್' ಎಂದು ಉಸುರಿದರೋ ಇಲ್ಲವೋ. ಅವರು ಹಾಗೆ ಮಾಡಿದ್ದರೆ, ಅವರ ವ್ಯಕ್ತಿತ್ವಕ್ಕೆ ಅದು ಒಪ್ಪುತ್ತದೆ. ಕಳೆದ 20 ವರ್ಷಗಳಲ್ಲಿ ರಾಮನ ಹೆಸರಿನಲ್ಲಿ ನಡೆದ ಹಿಂಸೆ, ಇಮಾರತುಗಳ ನಾಶ, ಹೆಂಗಸರ ಮಾನಭಂಗ ಇತ್ಯಾದಿ ಹುಣ್ಣ ಕಾರ್ಯಗಳ ಹಿನ್ನೆಲೆಯಲ್ಲಿ ಗಾಂಧೀಜಿಯವರ ಅಂತಿಮ ರಾಮನಾಮಸ್ಮರಣೆ ಧರ್ಮದ ನೈಜ ಅರ್ಥವನ್ನು ಬೆಳಗಿಸುವಂತಿದೆ. ಆ ಸಂದರ್ಭವೂ ಅವರ ಧಾರ್ಮಿಕ ಶ್ರದ್ಧೆಗೆ ತಕ್ಕ ಹಾಗಿದೆ. ಗಾಂಧೀಜಿ ತಮ್ಮ ನಿತ್ಯದ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ ಅವರ ಮರಣ ಸಂಭವಿಸಿತು. ಅವರ ಹಂತಕ ನಾಥೂರಾಮ ಗೋಡ್ಸೆ ದೇವರ ಪ್ರಾರ್ಥನೆ ಮಾಡುತ್ತಿದ್ದನೋ ಇಲ್ಲವೋ, ಗಾಂಧೀಜಿ ಕೊಲೆಯಲ್ಲಿ ಅವನಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶಕರಾಗಿದ್ದ ಸಾವರ್ಕರ್ ನಾಸ್ತಿಕರಾಗಿದ್ದರು. ವೈಜ್ಞಾನಿಕ ಮನೋಭಾವದವರಾಗಿದ್ದ ಅವರು ಹಿಂದೂಗಳು ಗೋಮಾಂಸ ತಿಂದು ದೈಹಿಕಬಲ ಹೆಚ್ಚಿಸಿಕೊಳ್ಳಬೇಕು ಎಂಬ ಅಭಿಪ್ರಾಯ ಹೊಂದಿದ್ದರು. ಅವರು ಪ್ರತಿಪಾದಿಸಿದ 'ಹಿಂದೂತ್ವ' ರಾಷ್ಟ್ರ ಪ್ರಭುತ್ವವನ್ನು ವಶಪಡಿಸಿಕೊಳ್ಳುವ ಒಂದು ರಾಜಕೀಯ ಸಿದ್ಧಾಂತವಾಗಿತ್ತು. ಆದರೆ ಗಾಂಧೀಜಿಯವರ ಧಾರ್ಮಿಕ (ಹಿಂದೂ 'ಸನಾತನ') ಶ್ರದ್ಧೆಗೆ ಪ್ರಭುತ್ವದ ಹುನ್ನಾರವಿರಲಿಲ್ಲ. ದೊರೆ ಬಿಜ್ಜಳನ ಊಳಿಗದಲ್ಲಿದ್ದೂ ಅವನ ಅಧಿಕಾರಕ್ಕೆ ಮಣಿಯದೆ 'ಕೂಡಲಸಂಗಮನಿಗೆ ಮಾತ್ರ ಶರಣು, ತಾನು ಅವನ ವೇಳೆ ವಾಳಿಯವ' ಎಂದು ಹೇಳಿದ ಬಸವನ ಧರ್ಮದ ಹಾಗೆ ಗಾಂಧೀಜಿಯವರದ್ದು; ಸಾವರ್ಕರ್, ಗೋಡ್ಸೆ, ಮೋದಿ ಇತ್ಯಾದಿಗಳ 'ಹಿಂದೂತ್ವ' ಜನರನ್ನು ಒಟ್ಟು ಸೇರಿಸುವ ರಾಜಕೀಯ ತಂತ್ರವಾದರೆ ಗಾಂಧೀಜಿ ಆಚರಿಸಿದ ಹಿಂದೂ ಧರ್ಮಕ್ಕೆ ಜನರ ಹಂಗು ಇರಲಿಲ್ಲ. ಅವರ ಪ್ರಾರ್ಥನಾ ಸಭೆಗಳಲ್ಲಿ ಇತರ ಧರ್ಮಗಳ ಪ್ರಾರ್ಥನೆ ಜೊತೆಗೆ ಕುರಾನ್ ಪಠಣವೂ ಸೇರಿತ್ತು. ದೆಹಲಿಯಲ್ಲಿ ದಿನೇದಿನೇ ಹೆಚ್ಚುತ್ತಿದ್ದ ಕೋಮು ದ್ವೇಷ ಹಾಗೂ ಮುಸ್ಲಿಮರ ವಿರುದ್ಧ ಪ್ರತೀಕಾರದ ಭಾವನೆಗಳ ಹಿನ್ನೆಲೆಯಲ್ಲಿ ಕೆಲವರು ಅದನ್ನು ಆಕ್ಷೇಪಿಸಿದಾಗ ಗಾಂಧೀಜಿ 'ಅದು ತಾನು ಪಾಲಿಸಿಕೊಂಡು ಬಂದ ಸಂಪ್ರದಾಯ. ಕುರಾನ್ ಪಠಣ ಕೈಬಿಡುವ ಮಾತೇ ಇಲ್ಲ. ಅದು ಇಷ್ಟವಾಗದವರು ಪ್ರಾರ್ಥನಾ ಸಭೆಗೆ ಬರಬೇಕಾಗಿಲ್ಲ' ಎಂದು ಹೇಳಿಬಿಟ್ಟರು. ತನ್ನ ನಂಬಿಕೆಗೋಸ್ಕರ ಒಂಟಿಯಾಗುವುದಕ್ಕೆ ಗಾಂಧೀಜಿ ಯಾವತ್ತೂ ಹಿಂಜರಿದವರಲ್ಲ. ಅದೆಷ್ಟೋ ಇಂಚು ಸುತ್ತಳತೆಯ ಎದೆ ಇರುವ ಮೋದಿಗೆ ಆ ಎದೆಗಾರಿಕೆ ಇದೆಯಾ?

ಗಾಂಧೀಜಿಯ ಹಂತಕ ಗೋಡ್ಸೆಯ ಹಾಗೆ ಮೋದಿ ಕೂಡ ಸಾವರ್ಕರ್‌ರ ಹಿಂದೂತ್ವ ಸಿದ್ಧಾಂತದಲ್ಲಿ ನಂಬಿಕೆ ಉಳ್ಳವರು ಮತ್ತು ಆರ್.ಎಸ್.ಎಸ್ ಅಭಿಮಾನಿ. ಮೋದಿಯನ್ನು ಪ್ರಧಾನಮಂತ್ರಿಯಾಗಿ ಆರಿಸುವ ದೇಶದಲ್ಲಿ ತಾನು ಇರಲಾರೆ ಎಂದು ಹೇಳಿದ ಡಾ.ಯು.ಆರ್. ಅನಂತಮೂರ್ತಿ, ಸಾವರ್ಕರ್ ಸಿದ್ಧಾಂತವನ್ನೂ ಗಾಂಧೀಜಿಯವರನ್ನೂ ಎದುರು ಬದುರಾಗಿಸಿ 'ಹಿಂದೂತ್ವ ಅಥವಾ ಹಿಂದ್ ಸ್ವರಾಜ್' (ಅಭಿನವ - ಬೆಂಗಳೂರು; 2014) ಎಂಬ ಪುಸ್ತಕ ಬರೆದಿದ್ದಾರೆ. ಅವರು ತೀರಿಕೊಳ್ಳುವುದಕ್ಕೆ ಕೆಲವು ದಿನಗಳ ಮೊದಲು ಬರೆದು ಮುಗಿಸಿದ ಈ ಪುಸ್ತಕ, ಅವರ ಮರಣಾನಂತರ ಪ್ರಕಟವಾಯಿತು. ಅದು ಮೋದಿಯನ್ನು ಬಹುಮತದಿಂದ ಆರಿಸುವ ದೇಶದಲ್ಲಿ ಯಾಕೆ ತಾನು ಇರಬಯಸುವುದಿಲ್ಲ ಎಂಬುದನ್ನು ವಿವರಿಸಿದ ಹಾಗೆ ಇದೆ. ತನ್ನ ಪುಸ್ತಕದಲ್ಲಿ ಅನಂತಮೂರ್ತಿ, ಮುಖ್ಯವಾಗಿ ಗಾಂಧೀಜಿಯ ಧರ್ಮವನ್ನೂ ಮೋದಿಯ ಗುರು ಸಾವರ್ಕರ್‌ರ ಹಿಂದೂತ್ವವನ್ನೂ ಒಟ್ಟೊಟ್ಟಿಗೇ ಪರಿಶೀಲಿಸುತ್ತ ಗಾಂಧೀಜಿಯ ಧಾರ್ಮಿಕತೆಯ ವೈಶಿಷ್ಟ್ಯವನ್ನು ವಿವರಿಸುತ್ತಾರೆ. ಸಾವರ್ಕರ್ ಪ್ರತಿಪಾದಿಸಿದ ಧರ್ಮಾಧಾರಿತ ಹಿಂದೂ ರಾಷ್ಟ್ರ ಅಥವಾ ಹಿಂದುಸ್ಥಾನದಲ್ಲಿ ಪ್ರಜೆಗಳಾಗಿ ಬಾಳುವ ಹಕ್ಕು ಮತ್ತು ಯೋಗ್ಯತೆ ಹಿಂದೂಗಳಿಗೆ ಮಾತ್ರ ಇದೆ; ಯಾಕೆಂದರೆ ಹಿಂದೂಗಳಿಗೆ ಮಾತ್ರ ಈ ದೇಶ ಪುಣ್ಯಭೂಮಿಯೂ ಪಿತೃಭೂಮಿಯೂ ಆಗಿದೆ ಆದರೆ ಈ ದೇಶದ ಮುಸ್ಲಿಮರು ಮತ್ತು ಕ್ರೈಸ್ತರ ಪುಣ್ಯಭೂಮಿ ಇಲ್ಲಿಲ್ಲ, ಮುಸ್ಲಿಮರ ಪುಣ್ಯಭೂಮಿ ಅರಬ ಸ್ಥಾನದಲ್ಲಿದ್ದರೆ ಕ್ರೈಸ್ತರ ಪುಣ್ಯಭೂಮಿ ಇರುವುದು ಇಸ್ರೇಲ್ ಮತ್ತು ಇಟಲಿಗಳಲ್ಲಿ. ಈ 'ಅನ್ಯಮತೀಯರಿಗೆ' ಭಾರತ ಪಿತೃಭೂಮಿಯೂ ಅಲ್ಲ. ಅನಂತಮೂರ್ತಿ ತನ್ನ ಪುಸ್ತಕದಲ್ಲಿ ಸಾವರ್ಕರ್‌ರ ಈ ವಾದವನ್ನು ಸೆಕ್ಯುಲರಿಸಂ ಮುಖಾಂತರ ಎದುರಿಸುವುದಿಲ್ಲ. ಅದಕ್ಕೆ ಬದಲಾಗಿ ಗಾಂಧೀಜಿಯವರ ಧಾರ್ಮಿಕತೆ ಹೇಗೆ ಯಾರನ್ನೂ ಹೊರಗಿಡದೆ ಎಲ್ಲರನ್ನೂ ಒಳಗೊಳ್ಳುವಂತಹದ್ದು ಎಂಬುದನ್ನು ವಿವರಿಸುತ್ತಾರೆ. ಅನಂತಮೂರ್ತಿ ಅದಕ್ಕೆ ಕೊಡುವ ಉದಾಹರಣೆ ರಮಣ ಮಹರ್ಷಿಗಳ ಬದುಕಿನ ಒಂದು ಪ್ರಸಂಗ. ಹಿಂದೂ ಧರ್ಮಕ್ಕೆ ಮತಾಂತರಗೊಳ್ಳುವ ಉದ್ದೇಶದಿಂದ ಭಾರತಕ್ಕೆ ಬಂದ ವಿದೇಶೀಯನೊಬ್ಬ ರಮಣ ಮಹರ್ಷಿಗಳನ್ನು ಭೇಟಿ ಮಾಡುತ್ತಾನೆ. ಅವರಿಗೆ ತಾನು ಭಾರತಕ್ಕೆ ಬಂದ ಕಾರಣ ವಿವರಿಸುತ್ತ ಆ ವಿದೇಶೀಯ "ಹಿಂದೂಗಳ ಪುಣ್ಯಭೂಮಿ ಭಾರತವಾಗಿರುವುದರಿಂದ ತಾನು ಇಲ್ಲಿಗೆ ಬಂದೆ" ಎಂದು ಹೇಳಿದಾಗ ರಮಣ ಮಹರ್ಷಿಗಳು, "ಭಗವಂತನ ಸೃಷ್ಟಿಯಲ್ಲಿ ಎಲ್ಲವೂ ಪುಣ್ಯ ಭೂಮಿಯೇ ಆಗಿರುವಾಗ, ಹಿಂದೂಸ್ತಾನ ಮಾತ್ರ ಹಿಂದೂಗಳಿಗೆ ಅದು ಹೇಗೆ ಪುಣ್ಯ ಭೂಮಿಯಾಗುತ್ತದೆ?" ಎಂದು ಕೇಳಿದರಂತೆ. ಗಾಂಧೀಜಿಗೆ ಪ್ರಿಯವಾದ ಉಪನಿಷದ್ ವಾಕ್ಯ "ಈಶಾವಾಸ್ಯಮಿದಂಸರ್ವಂ ...." ಕೂಡ, ಅದನ್ನೇ ಹೇಳುತ್ತದೆ. ಎಲ್ಲೆಲ್ಲೂ ಈಶ್ವರನಿದ್ದಾನೆ ಎಂದು ಗಾಂಧೀಜಿ ಗಾಢವಾಗಿ ನಂಬಿದ್ದರು. ಆದರೆ ದಲಿತರಿಗೆ ಪ್ರವೇಶವಿಲ್ಲದ ದೇವಸ್ಥಾನಗಳಲ್ಲಿ ಈಶ್ವರ ಇಲ್ಲ ಎಂದು ಅವರು ನಂಬಿದ್ದೂ ಅಷ್ಟೇ ನಿಜ. ದಲಿತರಿಗೆ ಪ್ರವೇಶವಿಲ್ಲದ ಯಾವ ದೇವಸ್ಥಾನದ ಒಳಗೂ ಅವರು




ಕಾಲಿಡುತ್ತಿರಲಿಲ್ಲ, ಅದೇ ಕಾರಣಕ್ಕೆ ಅವರು ವಾರಾಣಸಿಗೆ ಹೋದಾಗ ಅಲ್ಲಿ ವಿಶ್ವೇಶ್ವರನ ದರ್ಶನಕ್ಕೆ ಹೋಗಲಿಲ್ಲ; ಒರಿಸ್ಸಾದ ಪುರಿಗೆ ಹೋದಾಗ ಅಲ್ಲಿನ ಪ್ರಸಿದ್ಧ ಜಗನ್ನಾಥ ದೇವಸ್ಥಾನದ ಒಳಹೋಗಲಿಲ್ಲ. ಆದರೆ ಅವರ ಪತ್ನಿ ಕಸ್ತೂರ್‌ಬಾ ಕ್ಷೇತ್ರಕ್ಕೆ ಗುಟ್ಟಾಗಿ ಹೋಗಿ ಬಂದರು. ಅದು ಗೊತ್ತಾದದ್ದೇ ಗಾಂಧೀಜಿ ಪತ್ನಿಯ ಜೊತೆ ಜಗಳ ಕಾದು ಪ್ರಾಯಶ್ಚಿತ್ತವಾಗಿ ಒಂದು ದಿನದ ಉಪವಾಸ ಸತ್ಯಾಗ್ರಹವನ್ನೂ ಮಾಡಿದರು.

1933-34 ರ ಅವಧಿಯಲ್ಲಿ ಗಾಂಧೀಜಿ ದೇಶಾದ್ಯಂತ 'ಹರಿಜನ ಯಾತ್ರೆ' ಕೈಗೊಂಡರು. ಜಾತಿ ಭೇದ, ಅಸ್ಪೃಶ್ಯತೆ ಹಾಗೂ ಅಸಮಾನತೆಗಳ ವಿರುದ್ಧ ಜನರಲ್ಲಿ ಎಚ್ಚರ ಮೂಡಿಸುವುದು ಈ ಯಾತ್ರೆಯ ಉದ್ದೇಶವಾಗಿತ್ತು. 1934 ರ ಫೆಬ್ರವರಿಯ 24 ರಿಂದ 26 ರ ವರೆಗೆ ಅವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಮಂಗಳೂರು, ಉಡುಪಿ ಮೂಲ್ಕಿ ಮತ್ತು ಕುಂದಾಪುರಗಳಲ್ಲಿ ಭಾರೀ ಸಭೆಗಳನ್ನು ಉದ್ದೇಶಿಸಿ ಮಾತಾಡಿದರು. 'ಜಾತಿಭೇದ ಮತ್ತು ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಸಾಂಕ್ರಾಮಿಕ ರೋಗವಿದ್ದ ಹಾಗೆ; ಅವು ಮಹಾಪಾಪಕೃತ್ಯಗಳು. ದೇವರು ತನ್ನ ಮಕ್ಕಳಲ್ಲಿ ಭೇದವೆಣಿಸುವುದಿಲ್ಲ. ದೇವರ ಮಕ್ಕಳಾಗಿರುವ ನಾವು ಹಾಗೆ ಭೇದ ಮಾಡುವುದು ಧರ್ಮವಲ್ಲ, ಜಾತಿ ಭೇದ ಮತ್ತು ಅಸ್ಪೃಶ್ಯತೆಗಳು ಮನುಷ್ಯರದ್ದೇ ಸೃಷ್ಟಿ' ಎಂದು ಗಾಂಧೀಜಿ ತಾನು ಹೋದಲ್ಲೆಲ್ಲ ಹೇಳುತ್ತಿದ್ದರು. ಮಂಗಳೂರಿನಲ್ಲಿ ಅವರು, ಆಗಲೂ ದೊಡ್ಡ ಶಾಲೆ ಎನ್ನಿಸಿ ಕೊಂಡಿದ್ದ ಕೆನರಾ ಹೈಸ್ಕೂಲಿಗೆ ಭೇಟಿ ನೀಡಿದ್ದರು. ಆ ಶಾಲೆಯಲ್ಲಿ ಕೇವಲ ಇಬ್ಬರು ಹರಿಜನ ವಿದ್ಯಾರ್ಥಿಗಳು ಇರುವುದನ್ನು ತಿಳಿದು, ಅವರು ಹೇಳಿದ ಮಾತು ಮಾರ್ಮಿಕವಾಗಿತ್ತು. 'ನಿಮ್ಮ ಶಾಲೆಯಲ್ಲಿ ಇಬ್ಬರು ಹರಿಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ನನಗೆ ಮರುಭೂಮಿಯಲ್ಲಿ ಓಯಸಿಸ್‌ನಂತೆ ಕಾಣುತ್ತಿದೆ. ಆದರೆ ನನ್ನ ಪ್ರಶ್ನೆ ಏನೆಂದರೆ, ನಮ್ಮ ನಾಡು ಯಾಕೆ ಒಂದು ಮರುಭೂಮಿಯಾಗಿದೆ? ಯಾಕೆ ಇಷ್ಟು ದೊಡ್ಡ ಶಾಲೆಯಲ್ಲಿ ಇಬ್ಬರೇ ಹರಿಜನ ವಿದ್ಯಾರ್ಥಿಗಳು? ಯಾಕೆ ಅವರು ನೂರಾರು ಸಂಖ್ಯೆಯಲ್ಲಿಲ್ಲ?' ಎಂದು ಅವರು ಕೇಳಿದ್ದರು.

ಅದೇ ಫೆಬ್ರವರಿ 25 ರಂದು ಉಡುಪಿಯ ಅಜ್ಜರಕಾಡು ಮೈದಾನದಲ್ಲಿ ಗಾಂಧೀಜಿ ಮಾಡಿದ ಭಾಷಣ, ಅವರ ಧಾರ್ಮಿಕತೆಯ ವೈಶಿಷ್ಟ್ಯವನ್ನು ಮನಗಾಣಿಸುತ್ತದೆ. ಗಾಂಧೀಜಿಯ ಧಾರ್ಮಿಕತೆ, ಹಿಂದೂತ್ವದ ರಾಜಕೀಯ ಮಾತ್ರವಲ್ಲ, ಮಠಮಾನ್ಯಗಳ ಕರ್ಮಠ ಭಕ್ತಿ ಮತ್ತು ಜಾತಿತಾರತಮ್ಯಗಳನ್ನು ಸಹ ತಿರಸ್ಕರಿಸುವಂತಹದ್ದು. ಅವರು ಹೇಳಿದರು, 'ಉಡುಪಿ ಹಲವು ದಿನಗಳಿಂದ ನನ್ನ ತಲೆಯಲ್ಲಿ ಕೂತು ಬಿಟ್ಟಿದೆ. ನಿಮ್ಮನ್ನೆಲ್ಲ ಈ ಸಭೆಯಲ್ಲಿ ನೋಡುವುದಕ್ಕೆ ಮೊದಲೇ ಉಡುಪಿಯ ಖ್ಯಾತಿಯ ಬಗ್ಗೆ ನಾನು ಕೇಳಿಬಲ್ಲೆ. ನಿಮ್ಮ ಚೆಂದದ ಊರಿನ ಬಗ್ಗೆ ಹಲವರು ನನಗೆ ಹೇಳಿದ್ದಾರೆ. ನಿಮ್ಮ ಊರಿನ ದೇವಸ್ಥಾನವೂ ಪ್ರಸಿದ್ಧವಾಗಿದೆ. ಆ ದೇವಸ್ಥಾನದಲ್ಲಿ ಹರಿಜನರು ದೇವರ ಹತ್ತಿರ ಹೋಗುವಂತಿಲ್ಲ ಎಂಬ ಕಾರಣಕ್ಕೆ ದೇವರೇ ಬ್ರಾಹ್ಮಣರಿಗೆ ಬೆನ್ನು ತಿರುಗಿಸಿದ್ದಾನೆ........ ಈಗಲೂ ನಿಮ್ಮ ದೇವಸ್ಥಾನದೊಳಗೆ ಹರಿಜನರು ಹೋಗುವಂತಿಲ್ಲ. ಅವರಿಗೂ ಈ ದೇವಸ್ಥಾನದ ಬಾಗಿಲು ತೆರೆಯಬೇಕು. ಆದಕ್ಕಾಗಿ, ನೀವು ಸಾರ್ವಜನಿಕ ಅಭಿಪ್ರಾಯ ರೂಪಿಸಬೇಕು ಎಂದು ನನ್ನ ಆಶೆ' (ಉಡುಪಿಯ ಎಂ.ಜಿ.ಎಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಪ್ರಕಟಣೆ).

ಉಡುಪಿಗೆ ಅದು ಗಾಂಧೀಜಿಯ ಏಕ ಮಾತ್ರ ಭೇಟಿಯಾಗಿದ್ದರೂ ತನ್ನ ಭಾಷಣದಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಗಾಂಧೀಜಿ ಇಲ್ಲಿನ ಕೃಷ್ಣ ದೇವಸ್ಥಾನದೊಳಗೆ ಕಾಲಿಡಲಿಲ್ಲ. ಅವರನ್ನು ಸ್ವಾಗತಿಸಲು, ಹಾರ ಹಿಡಿದು ದೇವಸ್ಥಾನದ ಪಾರುಪತ್ಯಗಾರರು ಮತ್ತಿತರರು ದೇವಸ್ಥಾನದ ಹೆಬ್ಬಾಗಿಲಿನಲ್ಲಿ ಕಾದಿದ್ದರಂತೆ. ಗಾಂಧೀಜಿ ಅಲ್ಲಿಯವರೆಗೆ ಬಂದವರು 'ದೇವಸ್ಥಾನದೊಳಗೆ ಹರಿಜನರನ್ನು ಬಿಡುತ್ತಾರಾ?' ಎಂದು ಕೇಳಿದರಂತೆ. ದೇವಸ್ಥಾನದ ಸಿಬ್ಬಂದಿ ಅಸ್ಪಷ್ಟವಾಗಿ ಏನೋ ಹೇಳಿದಾಗ ಗಾಂಧೀಜಿ ಸ್ಪಷ್ಟ ಉತ್ತರಕ್ಕೆ ಒತ್ತಾಯಿಸಿದರು. ದೇವಸ್ಥಾನದೊಳಗೆ ಆಗ ಹರಿಜನ ಮತ್ತಿತರ ಕೆಳಜಾತಿಯವರಿಗೆ ಪ್ರವೇಶವಿರಲಿಲ್ಲ. ಇದು ತಿಳಿದದ್ದೇ ಗಾಂಧೀಜಿ "ಹಾಗಾದರೆ ನನಗೆ ಇಲ್ಲಿ ಏನೂ ಕೆಲಸವಿಲ್ಲ" ಎಂದು ತಮ್ಮ ಹಾದಿ ಹಿಡಿದರಂತೆ. ಈ ಕಥನವನ್ನು ನಾನು ಹಲವು ಹಳಬರ ಬಾಯಿಂದ ಕೇಳಿದ್ದೇನೆ. ಊರಿನ ದೊಡ್ಡ ಮನುಷ್ಯರು ಅದನ್ನು ಈಗ ಮರೆತುಬಿಡಲು ನಿರ್ಧರಿಸಿದ್ದರೂ, ಈ ಘಟನೆ ಜನಜನಿತವಾಗಿರುವುದಂತೂ ಹೌದು. 500 ವರ್ಷಗಳ ಹಿಂದೆ ತನ್ನ ಕೆಳಜಾತಿಯ ಕಾರಣಕ್ಕೆ ಹೊರಗೆ ನಿಂತಿದ್ದ ಕನಕನಿಗೆ ದೇವಸ್ಥಾನದ ಪಶ್ಚಿಮ ಗೋಡೆಯನ್ನು ಕೆಡವಿ ಕೃಷ್ಣ ದರ್ಶನ ನೀಡಿದ ಎಂಬ ಐತಿಹ್ಯ ಸುಪ್ರಸಿದ್ಧವಾಗಿದೆ. ಈ ಕಾಲದಲ್ಲೂ ಬ್ರಾಹ್ಮಣೋತ್ತಮರು ಕೆಳಜಾತಿಯವರಿಗೆ ಉಡುಪಿಯಲ್ಲಿ ದೇವಸ್ಥಾನದ ಪ್ರವೇಶ ನಿರಾಕರಿಸುತ್ತಿರುವುದು ತಿಳಿದು 'ಗಾಂಧೀಜಿ ಕೃಷ್ಣನಿಗೇ ಬೆನ್ನು ತಿರುಗಿಸಿದರು. ಕನಕನ ಹಾಗೆ ಗಾಂಧೀಜಿಯೂ ಒಬ್ಬ ನಿಜವಾದ ಹಿಂದೂ. ಸಾವರ್ಕರ್ ಅಲ್ಲ; ಅವರ ಶಿಷ್ಯರೂ ಅಲ್ಲ.

● ಜಿ. ರಾಜಶೇಖರ್



ಗಾಂಧೀಜಿಯ ಕನ್ನಡ ಸಹಿ

ಎಪ್ಪತ್ತಾರು ವರುಷದ ನೇರ ನಿಲುವು, ಹುಸು ಬಾಗಿದ ಕತ್ತು, ಕೈಯಲ್ಲಿ ಕೋಲು, ಸಪೂರ ಮೈಕಟ್ಟಿನ ದಾಪುಗಾಲೀನ ಗಾಂಧೀಜಿ ಅವರು ಮಹಾಬಲೇಶ್ವರದ ಮೊರಾರ್ಜಿ ಸರ್ಕಲ್‌ನಲ್ಲಿ ತಂಗಿರುತ್ತಾರೆ. ಮುಂಬೈನಲ್ಲಿ ಓದುತ್ತಿದ್ದ ಶಿವಮೊಗ್ಗದ ಹುಡುಗ ವಸುದೇವ ಪರೀಕ್ಷೆ ಮುಗಿಸಿ ಬಾಂಬೆಯ ಜನಸಂದಣಿಯಿಂದ ದೂರದಲ್ಲಿರುವ ಮೊರಾರ್ಜಿ ಸರ್ಕಲ್‌ನಲ್ಲಿರುವ ಗಾಂಧೀಜಿಯವರನ್ನು ಭೇಟಿಯಾಗಲು ಹೊರಡುತ್ತಾರೆ.

ಎರಡು ತುಂಡು ಬಿಳಿ ಖಾದಿ ಬಟ್ಟೆಯನ್ನು ಧರಿಸಿದ್ದ ಬೋಳುತಲೆಯ ಆ ಜೀವ ಸುಶೀಲಾ ನಾಯರ್‌ರ ಭುಜದ ಮೇಲೆ ಕೈ ಹಾಕಿಕೊಂಡು ಆಶ್ರಮವಾಸಿ ಸ್ತ್ರೀಯರು ಮತ್ತು ಪ್ಯಾರೆಲಾಲ್ ಪರಿವಾರದವರೊಡನೆ ಕಾಣಿಸಿಕೊಂಡಾಗ ಮಲೆನಾಡಿನ ವಸುದೇವನಿಗೆ ಮಾತೇ ಹೊರಡುವುದಿಲ್ಲ. ಸುತ್ತಲ ಮೌನ, ಮಕ್ಕಳ ತುಂಟಾಟ, ಈ ನಡುವೆ ಸಂಸ್ಕೃತ, ಹಿಂದಿ, ಉರ್ದುಗಳಲ್ಲಿ ಪ್ರಾರ್ಥನೆ ನಡೆಯುತ್ತದೆ. ಗಾಂಧೀಜಿ ಗುಜರಾತಿ ಯುವತಿಯಿಂದ ಅವರ ಭಾಷೆಯಲ್ಲೇ ಹಾಡು ಹಾಡಲು ಪ್ರೋತ್ಸಾಹಿಸಿದ್ದು ವಸುದೇವನಿಗೆ ಮಿಂಚು ಹರಿಸಿದಂತಾಗುತ್ತದೆ. ಕನ್ನಡದ ಒಂದೇಒಂದು ಪದವಿರದ ಈ ಸ್ಥಳದಲ್ಲಿ ನಾಳೆ ನನ್ನ ಸರದಿ ಎಂದುಕೊಂಡು ಮರಳಿದ ವಾಸುದೇವ್ ಮರುದಿನ ಪ್ರಾರ್ಥನಾ ಸಮಯಕ್ಕೆ ಹಾಜರಾಗುತ್ತಾರೆ.

ಅದೇ ಗಾಂಧಿ, ಅದೇ ಸುಶೀಲಾ ನಾಯರ್. ಪ್ರಾರ್ಥನೆ ಮುಗಿದಕೂಡಲೇ ವಾಸುದೇವ್ ಆಶ್ರಮದಲ್ಲಿ ಕೊಂಡುಕೊಂಡಿದ್ದ ಪ್ರಸಿದ್ಧ ಫೋಟೋಗ್ರಾಫರ್ ಕನು ಗಾಂಧಿ ತೆಗೆದ ಗಾಂಧೀಜಿಯ ಹೊಸ ಫೋಟೋ ಕೈಲಿ ಹಿಡಿದು ಗಾಂಧಿ ಹಸ್ತಾಕ್ಷರಕ್ಕೆ ಮುಂಚಾಚುತ್ತಾನೆ. ನಿಂತ ನಿಲುವಿನಲ್ಲಿ ಪೆನ್ ತೆಗೆದು ಸಹಿ ಹಾಕಲು ಮುಂದಾದ ಗಾಂಧೀಜಿಯು ಹಿಂದಿಯಲ್ಲಿ ಸಹಿ ಹಾಕಿಯಾರೆಂದು "ಇನ್ ಇಂಗ್ಲಿಷ್ ಪ್ಲೀಸ್" ಎನ್ನುತ್ತಾರೆ. "ಇನ್ ಇಂಗ್ಲಿಶ್?" ಎಂದು ಗಾಂಧಿ ಆಚ್ಚರಿಯಿಂದ ನೋಡಿದ ಕೂಡಲೇ ಬೇರೆ ಭಾಷೆಯಲ್ಲಿ ಸಹಿ ಹಾಕಲು ಅವರಿಗೆ ಅಭ್ಯಂತರವಿಲ್ಲವೆಂದು ತಿಳಿದು, ಮಲೆನಾಡಿನ ಕನ್ನಡಿಗ ವಸುದೇವ ತಡಮಾಡದೆ "ಕನ್ನಡದಲ್ಲಿ ಸಹಿ ಮಾಡಿ ಕೊಡುವಿರಾ?' ಎನ್ನುತ್ತಾರೆ. ಕೂಡಲೇ ಗಾಂಧಿ "ಹಿಂದಿಯಲ್ಲಿ ಬರೆಯುವೆ" ಎನ್ನುತ್ತಾರೆ. ಈ ಇಡೀ ಸಂಭಾಷಣೆಯಲ್ಲಿ ವಸುದೇವ ಇಂಗ್ಲಿಷ್ ಬಳಸುತ್ತಿದ್ದರೆ ಅದಕ್ಕೆ ಪ್ರತಿಯಾಗಿ ಗಾಂಧಿ ಹಿಂದಿಯಲ್ಲಿ ಉತ್ತರಿಸುತ್ತಿದ್ದುದನ್ನು ಗಮನಿಸಿ "ನಾನು ದಕ್ಷಿಣದವನು" ಎನ್ನುತ್ತಾರೆ. "ಹಾಗಾದರೆ ನಾನು ತಮಿಳಿನಲ್ಲಿ ಸಹಿ ಮಾಡುತ್ತೇನೆ" ಎನ್ನುತ್ತಾರೆ ಗಾಂಧಿ. "ನನಗೆ ತಮಿಳಿಗಿಂತ ಹಿಂದಿ ಚನ್ನಾಗಿ ಗೊತ್ತು, ಆದರೆ ನನ್ನ ತಾಯಿನುಡಿ ಕನ್ನಡ" ಎಂದು ವಸುದೇವ ಮೊಂಡುಹಿಡಿಯುತ್ತಾನೆ. ಗಾಂಧೀಜಿಗೆ ಈ ಹುಡುಗನ ಹಠ ತಿಳಿಯುತ್ತದೆ. "ವಾಕಿಂಗ್ ಮುಗಿದ ಮೇಲೆ ಬಿಡಾರಕ್ಕೆ ಬನ್ನಿ. ಕನ್ನಡದಲ್ಲೇ ಬರೆದುಕೊಡುವೆ" ಎನ್ನುತ್ತಾರೆ ಗಾಂಧಿ.

ಅವರೊಂದಿಗೆ ವಾಕಿಂಗ್‌ನಲ್ಲಿ ಹೆಜ್ಜೆ ಹಾಕುತ್ತಿರುವಾಗ ಗಾಂಧೀಜಿಯ ಬಗ್ಗೆ ಜನರ ಭಾವೋತ್ಕರ್ಷವನ್ನು ಗಮನಿಸುತ್ತಲೇ ಇದ್ದ ಈ ಹುಡುಗ ಗಾಂಧೀಜಿಯ ಮುಗ್ಧ ಪ್ರಶ್ನೆಗಳ ಕಡೆ ದೃಷ್ಟಿ ಹೋಗುತ್ತದೆ. "ಈ ಕಟ್ಟಡ ಯಾರದು...?", "ಆ ರಸ್ತೆ ಎಲ್ಲಿಗೆ ಹೋಗುತ್ತದೆ?" ಇಂತಹ ಸರಳ ಪ್ರಶ್ನೆಗಳ ಮೂಲಕ ಅವರ ವಾಕಿಂಗ್ ಮುಗಿಯುತ್ತದೆ. ನಂತರ ಆಶ್ರಮದಲ್ಲಿ ಸಹಾಯಕರು ಕರೆದಾಗ ಗಾಂಧೀಜಿ ಕಾಣಲು ವಸುದೇವ ಒಳಹೋಗುತ್ತಾನೆ.

ಭಾರತದ ಅನೇಕ ಲಿಪಿಗಳ ಪಟವನ್ನು ವೀಕ್ಷಿಸುತ್ತಿದ್ದ ಗಾಂಧೀಜಿಯನ್ನು ನೋಡಿ ಸುಶೀಲ ನಾಯರ್ ವಸುದೇವನಿಗೆ "ನೀವು ಕನ್ನಡದಲ್ಲಿ ಬರೆದುಕೊಡಿ. ಅದರಂತೆ ಅವರು ಬರೆದುಕೊಡುತ್ತಾರೆ" ಎನ್ನುತ್ತಿದ್ದಂತೆ ಗಾಂಧಿ ಅಸಮ್ಮತಿಸುತ್ತಾರೆ. ಹಿಂದಿಯ ನೆರವಿನಿಂದ ಕನ್ನಡದ ಮ, ಮೋ ಅಕ್ಷರಗಳನ್ನು ಗುರುತಿಸಿ ಚಿಕ್ಕ ಮಗುವಿನಂತೆ ಖುಷಿಪಡುತ್ತಾರೆ. ವಸುದೇವನ ಕಡೆ ತಿರುಗಿ "ಭಾರತದ ಹಲವು ಲಿಪಿಗಳಿಗೆ ಇರುವ ತೊಂದರೆ ಎಂದರೆ ಒತ್ತು, ಇಳಿ, ಗುಣಿತಾಕ್ಷರ ಸಮಸ್ಯೆ. ಆದರೆ ಇಂಗ್ಲಿಷ್‌ನಲ್ಲಿ ಈ ಸಮಸ್ಯೆಯೇ ಇಲ್ಲ. ಈ ಲಿಪಿಯಲ್ಲಿ ಎಷ್ಟು ಅನುಕೂಲಗಳಿವೆ" ಎಂದು 'ಕ' ಅಕ್ಷರ ಗೊತ್ತು ಮಾಡಿ, ಬರೆದು "ಓಹ್. ಎಷ್ಟು ಸುಂದರ" ಎಂದು ಉದ್ಗಾರ ತೆಗೆಯುತ್ತಾರೆ. "ನಾನು ದಕ್ಷಿಣದಲ್ಲಿ ಸಂಚಾರ ಮಾಡುತ್ತಿದ್ದಾಗ ಕನ್ನಡ ಲಿಪಿ ಕಲಿತಿದ್ದೆ. ಬಳಸದೇ ಮರೆತುಹೋಗಿದೆ. ತೆಲುಗಿಗೂ ಕನ್ನಡ ಲಿಪಿಗೂ ಸಾಮ್ಯತೆ ಇದೆಯಲ್ಲವೇ?" ಎಂದು ತಮ್ಮ ವಿಸ್ಮಯವನ್ನು ಹೊರಹಾಕುತ್ತಾರೆ. "ನನಗಿನ್ನೂ ಐವತ್ತು ವರ್ಷ ವಯಸ್ಸಿದೆ. ಭಾರತದ ಎಲ್ಲಾ ಲಿಪಿಗಳನ್ನೂ ಕಲಿತುಬಿಡುತ್ತೇನೆ" ಎನ್ನುತ್ತಾ ಕಾಗದದ ಮೇಲೆ 'ಮೊ.ಕ. ಗಾಂಧೀ' ಎಂದು ಬರೆದು ತೋರಿಸುತ್ತಾರೆ. ಅರಿಯದ ಭಾಷೆಯಲ್ಲಿ ಅವರು ಬರೆದ ಹೆಸರನ್ನು ಸ್ಪರ್ಶಿಸಿ "ಸರಿಯಾಗಿ ಬರೆದು ತೋರಿಸಿ. ಫೋಟೋದ ಮೇಲೆ ಬರೆದುಕೊಡುವೆ" ಎಂದು ಹುಡುಗ ವಸುದೇವನಿಗೆ ಹೇಳುತ್ತಾರೆ. ಈ ಹುಡುಗ ಬರೆದುಕೊಟ್ಟಿದ್ದನ್ನು ನೋಡಿಕೊಂಡು ತಮ್ಮದೇ ಫೋಟೋ ಮೇಲೆ ಕನ್ನಡದಲ್ಲಿ ಹೆಸರು ಬರೆದು ತಾರೀಖು ಹಾಕುತ್ತಾರೆ.

ಅಲ್ಲಿಂದ ಮುಂದೆ ಅವರಿಬ್ಬರ ಚರ್ಚೆ, ಸಂವಾದವು ಕ್ರಿಸ್ತ ಬುದ್ಧನ ಕಡೆ ತಿರುಗುತ್ತದೆ. ಮಾತು ಮುಗಿಸಿ ಹೊರಡುವಾಗ ನಕ್ಷತ್ರಗಳು ಮಿನುಗುತ್ತಿದ್ದವು.

ಆ ಹುಡುಗ ಕನ್ನಡ ನೆಲದ ವೈಚಾರಿಕ ಕ್ರಾಂತಿಗೆ ದೊಡ್ಡ ಕೊಡುಗೆ ನೀಡಿದ ಮಲೆನಾಡಿನ ವಸುದೇವ ಭೂಪಾಲಂ. ಈ ಪ್ರಸಂಗವನ್ನು ಅವರು ತಮ್ಮ 'ಗೊಂಚಲ್‌ಮಿಂಚು' ಎಂಬ ವ್ಯಕ್ತಿಚಿತ್ರಗಳ ಕೃತಿಯಲ್ಲಿ ಸರಳವಾಗಿ ದಾಖಲಿಸಿದ್ದಾರೆ.

● ಡಾ. ಕುಂಸಿ ಉಮೇಶ್

(ಆಧಾರ- ವಸುದೇವ ಭೂಪಾಲಂ ಅವರ 'ಗೊಂಚಲ್‌ಮಿಂಚು' ಕೃತಿಯ 'ಬಾಪೂಜಿಯೊಡನೆ' ಲೇಖನ)

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವೀರಭದ್ರನೆಂಬ ಅವೈದಿಕ ದೇಶೀ ತಳಿ

ಬಸವಣ್ಣ ಗುರುವಲ್ಲ, ಆತನೊಬ್ಬ ಕೇವಲ ...ಯಾಯಿ. ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವುದನ್ನೇ ...ಗಳಲ್ಲಿ ಪ್ರತಿಧ್ವನಿಸಿದ್ದಾನೆ ಎಂದು ಕೇದಾರ ಪೀಠದ ...ನಾಶಂಕರ ಶಿವಾಚಾರ್ಯರು ಮೂರ್ಖತನದ ...ರಾವಧಿಯ ಹೇಳಿಕೆಯನ್ನು ಕೊಟ್ಟ ಬೆನ್ನಲ್ಲೇ ಹಿಂದೂ ...ದ ಗಟ್ಟಿ ಪ್ರತಿಪಾದಕರಾದ ಚಿದಾನಂದ ಮೂರ್ತಿ ... ಹಿರಿಯ ಸಂಶೋಧಕರೂ ಇರಿಸುಮುರಿಸುಗೊಂಡರು. ...ಳಿಕೆ ಬಾಲಿಶವಾದುದೆಂದೂ, ಸಿದ್ಧಾಂತ ಶಿಖಾಮಣಿ ...ಯು ವಚನೋತ್ತರ ಯುಗದ ತಾತ್ವಿಕ ಗ್ರಂಥವೆಂದೂ, ... ಕರ್ತೃ ಮುದ್ದದೇವನ ಮೊಮ್ಮಗ ಶಿವಯೋಗಿ ...ೂ, ಅವನು ವಚನೋತ್ತರ ಯುಗದವನೆಂದೂ ...ಯಲ್ಲಿ ಹೇಳಿಕೆಗಳನ್ನು ನೀಡಿದರು. ಜೊತೆಗೆ ಬಸವಣ್ಣ ... ತಮ್ಮ ವಚನಗಳಲ್ಲಿ ಸಿದ್ಧಾಂತ ಶಿಖಾಮಣಿಯನ್ನು ...ಖಿಸಿಲ್ಲವೆಂದೂ ತಮ್ಮ ಗ್ರಹಿಕೆಯನ್ನು ಹಂಚಿಕೊಳ್ಳುವ ...ಲಕ ಕೇದಾರ ಪೀಠದವರನ್ನು ಖಂಡಿಸಿದರು. ಆದರೆ ...ಸಿದ್ಧಾಂತದಿಂದಲೇ ವೀರಶೈವರೂ ಮತ್ತು ಲಿಂಗಾಯ... ಬಂದಿದ್ದು; ಅವರು ಹಿಂದೂಗಳೇ ಹೊರತು ಬೇರೆ ... ಎನ್ನುವ ತಮ್ಮ ಸವಕಲು ಸಿದ್ಧಾಂತದಿಂದ ಹೊರಗೆ ... ಅವರು ಇಚ್ಛಿಸುತ್ತಲೇ ಇಲ್ಲ.

... ವಯೋವೃದ್ಧರನ್ನು ಗೌರವದಿಂದಲೇ ನಿರ್ಲಕ್ಷಿಸಿ ...ಪೀಠದವರು ಹಿಡಿದಿರುವ ಅಥವಾ ಗುರುತಿಸಿ...ರುವ ತಮ್ಮ ಆರಾಧ್ಯದೈವವಾದ ವೀರಭದ್ರನ ಕಡೆಗೆ ... ಹೊರಳಿಸುವ.

...ಪಂಚಪೀಠದವರ ಪ್ರಕಾಶನದಲ್ಲಿ ಬರುವ ಪುಸ್ತಕಗಳೆಂದರೆ ... ವೈದಿಕ ನಿಲುವಿಗೇ ವಾಲುತ್ತವೆ ಎಂಬ ಮಾತನ್ನು ...ನೇಕ ಕೃತಿಗಳು ಸಾಬೀತುಪಡಿಸುತ್ತವೆ.

ವೀರಭದ್ರನ ಹುಟ್ಟು

...ಪಂಚಪೀಠದವರ ವೈದಿಕ ಒಲವನ್ನು ನೋಡುವ ...ಲು ವೀರಭದ್ರನೆಂಬ ಗಣವು ಹೇಗೆ ಹುಟ್ಟಿತೆಂದು ...ತೋಣ. ಬಹಳ ಸರಳವಾಗಿ ವೀರಭದ್ರನ ಸ್ಥಾನವನ್ನು ...ತಿಸಲು ಪ್ರಾರಂಭಿಕವೆಂದರೆ ಪುರಾಣಗಳು. ದಕ್ಷನ ...ದ ದಾಕ್ಷಾಯಣಿ ಅಥವಾ ಸತಿ ತನ್ನ ಪತಿಗೆ ಯಜ್ಞದಲ್ಲಿ ...ನ್ನ ನೀಡದೇ ಅಪಮಾನಿಸಿದ್ದನ್ನು ಸಹಿಸದೇ, ಪ್ರತಿಭಟನೆ ... ತಾನೇ ಯಾಗಕುಂಡಕ್ಕೆ ಧುಮುಕಿ ಆತ್ಮಾಹುತಿ ...ಕೊಂಡಳು. ಇದರಿಂದ ಯಾಗಭಂಗವನ್ನು ಮಾಡಿದ ... ತನ್ನ ತಂದೆಯ ಹಟಮಾರಿತನಕ್ಕೆ ಪ್ರತೀಕಾರ ತೀರಿಸಿ...ಕಳು.

...ನ್ನ ಪ್ರಿಯ ಸತಿ ಯಾಗದಲ್ಲಿ ಆತ್ಮಾಹುತಿ ಮಾಡಿ...ಖ ಮಡಿದ ವಿಷಯವನ್ನು ಕೇಳಿ ಕ್ಷುದ್ರನಾದ ಶಿವ ... ಹೋಗಿ ದಕ್ಷನ ಸಂಹಾರ ಮಾಡದೇ ತನ್ನ ಬೆವರನ್ನು ...ಕೆಳಕ್ಕೊಗೆದು, ಆದರಿಂದ ಅಥವಾ ಅವನ ಕ್ರೋಧ...ೇ ಹುಟ್ಟಿದ ವೀರಭದ್ರನನ್ನು ದಕ್ಷಯಜ್ಞ ವಿನಾಶಕ್ಕೆಂದು, ...ಬ್ರಹ್ಮನ ಸಂಹಾರಕ್ಕೆಂದು ಕಳುಹಿಸಿದ. ಆಗ ಅಲ್ಲಿಂದ ...ಟ ವೀರಭದ್ರ ತನ್ನ ಸಮಸ್ತ ಗಣಂಗಳೊಡಗೂಡಿ ...ಮಂಟಪಕ್ಕೆ ಬಂದು ದಾಂಧಲೆ ಎಬ್ಬಿಸುತ್ತಾನೆ. ಗಣಗಲು ... ಮಾಡುತ್ತಾ ಪುಂಡಾಟ ಮಾಡುತ್ತಾರೆ. ಅದೆಷ್ಟರ...ಗೆಂದರೆ, ನಮ್ಮ ಹಳಗನ್ನಡ ಕಾವ್ಯವೊಂದರಲ್ಲಿ ...ಸುವಂತೆ, ಅಲ್ಲಿ ಅಡ್ಡ ಬಂದ ಹೆಂಗಸರ ಮೂಗು, ...ಗಳ ಕುಯ್ಯುತ್ತಾರೆ. ಹೋಮಾಗ್ನಿಯನ್ನು ಮೂತ್ರ...ಬ್ಬಿ ಆರಿಸುತ್ತಾರೆ. ನಂತರ ಸಾಕಷ್ಟು ದಾಂಧಲೆಗಳ ...ಯ ದಕ್ಷನ ಸಂಹಾರವಾಗುತ್ತದೆ. ನಂತರ ದಕ್ಷನ ...ಣಿಯ ಆರ್ತನಾದಕ್ಕೆ ಕರಗಿ, ಮರುಗಿ ದಕ್ಷನ ...ಕ್ಕೆ ಮೇಕೆಯ ತಲೆಯನ್ನು ಜೋಡಿಸುತ್ತಾರೆ. ಜೀವ...ಸುತ್ತಾರೆ. ಕತ್ತರಿಸಿದ್ದ ತಲೆಯನ್ನು ಬೆಂಕಿಗೆ ಎಸೆದು...ಬಿಟ್ಟಿರುತ್ತಾರೆ.


...ದಾದನಂತರ ಶಿವ ದಾಕ್ಷಾಯಣಿಯ ಬೆಂದ ಶವವನ್ನು ...ಹೆಗಲ ಮೇಲೆ ಹಾಕಿಕೊಂಡು ಕಾಡು ಮೇಡು ...ಸುವುದು, ನಂತರ ತಪಸ್ಸಿಗೆ ಕುಳಿತುಕೊಳ್ಳುವುದು, ...ಗಳೆಲ್ಲಾ ತಾರಕನ ಬಾಧೆಗೆ ಒಳಗಾಗುವುದು, ಇಂದ್ರ...ದ ಸೂಪರ್ ಪ್ಲಾನ್‌ಗಳು, ಗಿರಿಜೆ ಎಂಬ ಗಿರಿಕನ್ಯೆ ... ಸೇವೆಗೆ ನೇಮಿಸುವುದು, ಮನ್ಮಥ ದಹನ, ರತಿಯ ...ನ, ದೇವತೆಗಳ ನಿವೇದನ, ಗಿರಿಜಾ ಕಲ್ಯಾಣ; ಇತ್ಯಾದಿ ...ಮುಂದುವರಿದ ಪುರಾಣೇತಿಹಾಸಗಳ ದಾಖಲು.


...ವನ ಕುಟುಂಬದಲ್ಲಿ ಯಾರೊಬ್ಬನ ಹುಟ್ಟೂ ...ಗಿ ಆಗುವುದೇ ಇಲ್ಲ. ಶಿವ ಮತ್ತು ಪಾರ್ವತಿಯರು ...ಮತ್ತು ಪುರುಷರಾಗಿ ಪ್ರತಿನಿಧಿಸಿದರೂ, ಮೈಥುನಕ್ಕೆ...ಕ ಸ್ಪರ್ಶ ಕೊಟ್ಟರೂ, ಶಿವ ಮತ್ತು ಶಕ್ತಿಯರ ...ೇಗವು ಸಮಾಧಿಗೆ ಒಯ್ಯುವಂತಹ, ಶಕ್ತ್ಯೋ...ಸುವಂತಹ ಶಾಕ್ತ ಮತ್ತು ತಾಂತ್ರಿಕ ಸಿದ್ಧಾಂತಗಳು ...ದರೂ, ಅವರಿಬ್ಬರ ಮಿಲನದಿಂದ ಯಾವುದೊಂದು ಮಗುವೂ ಹುಟ್ಟುವುದಿಲ್ಲ. ಗಣೇಶನೆಂಬಾತ ಪಾರ್ವತಿಯೊಬ್ಬಳಿಗೇ ಹುಟ್ಟಿದ ಮಗುವಾದರೆ, ಷಣ್ಮುಖ ಶಿವನೊಬ್ಬನಿಗೇ ಹುಟ್ಟುವ ಮಗುವಾಗುತ್ತಾನೆ. ಅಂತೆಯೇ ವೀರಭದ್ರನೂ ಶಿವನ ಕ್ರೋಧಾಗ್ನಿಯಿಂದ ಅಥವಾ ಬೆವರಿನಿಂದ ಹುಟ್ಟಿದವನಾದರೂ ಅವನನ್ನು ಮಗನೆಂದು ಪರಿಗಣಿಸುವುದೇ ಕಾಣೆ.

ಬಹುಪಾಲು ವೀರಭದ್ರನಾರಾಧಕರು ಶಿವನನ್ನೂ ಅಥವಾ ರುದ್ರನನ್ನೂ ವೀರಭದ್ರನನ್ನೂ ಸಮೀಕರಿಸಿ ನೋಡುವ ಅಭಿಲಾಷೆಯನ್ನು ಹೊಂದಿರುವುದರಿಂದ, ವೀರಭದ್ರನನ್ನು ಶಿವನ ಅವತಾರ ಎಂದು ಹೇಳಲು ಆಶಿಸುವರೇ ಹೊರತು ಶಿವನ ಮಗ ಎಂದು ಹೇಳಿ ಅವನನ್ನು ಗಣೇಶನ, ಷಣ್ಮುಖನ ಅಥವಾ ಮಣಿಕಂಠನ ಸ್ಥಾನಕ್ಕೆ ತರಲು ಇಚ್ಛಿಸುವುದಿಲ್ಲ.

ಕಾರಣಿಕ ಅಭ್ಯಾಸಗಳೇನೇ ಇರಲಿ, ವೀರಭದ್ರ ಎಂಬುವ ಪರಿಕಲ್ಪನೆ ವೈದಿಕ ಆಚರಣೆಗೆ ವಿರುದ್ಧವಾಗಿ ಮತ್ತು ಅದರ ಬಂಡಾಯದ ಕೋಪದ ಸಂಕೇತವಾಗಿ ಹುಟ್ಟಿತು ಎಂಬ ವಿಷಯವನ್ನು ಒಪ್ಪಿಕೊಳ್ಳಲು ಅವರಿಗೇಕೋ ಕಷ್ಟವಾಗುತ್ತದೆ.

ವೀರಭದ್ರನು ಸಾಂಕೇತಿಕವಾಗಿಯಾದರೂ ವೈದಿಕ ಪರಂಪರೆಯಲ್ಲಿ ಹುಟ್ಟಿದವನಲ್ಲ, ವೈದಿಕರ ಮುಖ್ಯ ಆಚರಣೆಯಾದ ಯಜ್ಞವನ್ನು ಧ್ವಂಸಗೊಳಿಸಲೂ ಮತ್ತು














ಶುದ್ಧ ಆರ್ಯರ ಪ್ರತಿನಿಧಿಯಾದ ದಕ್ಷಬ್ರಹ್ಮನನ್ನು ನಾಶಗೊಳಿಸಲೂ ಹುಟ್ಟಿರುವಂತಹ ಪ್ರತಿಮೆ. ಆದರೆ ಅವನನ್ನು ವೈದಿಕಕ್ಕೆ ಒಯ್ಯುವ, ವೇದಗಳಲ್ಲಿ ಅವನ ಮೂಲಗಳನ್ನು ಹುಡುಕಲು ಮಾಡುವ ಸರ್ಕಸ್‌ಗಳಂತೂ ಆಶ್ಚರ್ಯದ ವಿಷಯ.

ವೇದಕಾಲೀನ ವೀರಭದ್ರ

ಕೋ.ರಂ.ಬಸವರಾಜು, ತಮ್ಮ ವೇದಕಾಲೀನ ವೀರಭದ್ರ ಪ್ರಬಂಧದಲ್ಲಿ ವೀರಭದ್ರನು ವೇದಗಳಲ್ಲಿ ಉಲ್ಲೇಖಗೊಂಡಿದ್ದಾನೆ ಎಂದು ನಿರೂಪಿಸಲು ಸಾಕಷ್ಟು ವಿಫಲ ಯತ್ನ ಮಾಡುತ್ತಾರೆ. ಅವರು ಕೊಡುವ ಕಾರಣಗಳೋ ಅಥವಾ ಆಧಾರಗಳೋ ತೀರಾ ಸೂಪರ್‌ಫಿಶಿಯಲ್.

ಶಂ.ಬಾ.ಜೋಷಿಯವರ ಶಿವರಹಸ್ಯವೆಂಬ ಹೊತ್ತಿಗೆಯನ್ನು ಉಲ್ಲೇಖಿಸುತ್ತಾ "ವೀರ ಶಬ್ದದ ಮೂಲ ಋಗ್ವೇದದಲ್ಲಿದೆ. ರುದ್ರನು ಅಥವಾ ವೃಷಭನು ಎಂದರೆ ವೀರನು. ಆದ್ದರಿಂದ ಆತನ ಉಪಾಸಕರೂ ವೀರರು" ಎನ್ನುತ್ತಾ, ಬಸವರಾಜುರವರು ವೀರ ಎಂಬ ಶಬ್ದದ ಸಮಾನಾರ್ಥಕ ಪದವೇ ವೀರಭದ್ರ ಎಂಬರ್ಥದಲ್ಲಿ ಬರೆಯುತ್ತಾರೆ. ಇತರ ಋಕ್ಕುಗಳಲ್ಲಿ, ಮಂಡಲಗಳಲ್ಲಿ ರುದ್ರನು ವೀರರ ತಂದೆ, ವೀರರ ಒಡೆಯ ಎಂಬ ಮಾತುಗಳು ಬಂದಿವೆ ಎಂದೂ, ಆ ಬಗೆಯಾದ ದೃಢ ಶ್ರದ್ಧೆಯಿರುವ ಶಿವಭಕ್ತರಿಗೆ ಮಾತ್ರವಲ್ಲದೇ ಬೇರೆ ಇನ್ನಾರಿಗೂ ವೀರರೆಂಬ ಹೆಸರು ಸಮರ್ಪಕವಾಗಲಾರದು ಎಂದೂ ಘೋಷಿಸಿಬಿಡುತ್ತಾರೆ.

ಅವರ ಪ್ರಕಾರ ಶಿವ, ರುದ್ರ, ವೀರ, ವೀರಭದ್ರ, ಶಿವಭಕ್ತ ಈ ಎಲ್ಲವೂ ಸಮಾನಾರ್ಥಕ ಪದಗಳು. ಪಕ್ಕಾ ಅವೈದಿಕ ಮತ್ತು ಗಣ ಸಂಸ್ಕೃತಿಯ (ದ್ರಾವಿಡ ಅಥವಾ ಇತರೇ ಮೂಲ ನಿವಾಸಿಗಳ) ಪರಿಕಲ್ಪನೆ ಅಥವಾ ಪಾತ್ರಗಳಾದ ರುದ್ರನನ್ನೂ ಮತ್ತು ವೀರಭದ್ರನನ್ನೂ ವೈದಿಕದ ತೆಕ್ಕೆಗೇ ತಳ್ಳುವ ಧಾವಂತ ಇವರಿಗೇಕೆ ಉಂಟಾಯಿತೆಂದರೆ ಅವರು ಒಪ್ಪಿರುವ ವೇದಗಳೇ ಪ್ರಮಾಣ ಅಥವಾ ಅವೇ ಮಾನ್ಯವೆಂಬಂತಹ ಶ್ರೇಷ್ಠತೆಯ ಗೀಳು ಎಂದೇ ತೋರುತ್ತದೆ.

ಕೋ.ರಂ.ಬಸವರಾಜುರವರು ಉಲ್ಲೇಖಿಸುವಂತೆ, ಟಿ.ಎಸ್.ಮಲ್ಲಪ್ಪನವರು ಹೀಗೆ ಹೇಳುವರಂತೆ, "ದಕ್ಷಯಾಗವನ್ನು ವೀರಭದ್ರನು ಧ್ವಂಸ ಮಾಡಿದನು. ವೀರಶೈವರ ಇತಿಹಾಸದಲ್ಲಿ ಇದೊಂದು ಮುಖ್ಯ ಘಟನೆ. ಇದು ಲಿಂಗಧಾರಿಯಾಗಿ ಇದುವರೆವಿಗೂ ವೀರಶೈವರಿಂದ ಪೂಜಿಸಿಕೊಳ್ಳುತ್ತಾ ಗೋತ್ರಪ್ರವರ್ತಕನಾದ ವೀರಭದ್ರನ ಸುತ್ಯಕಾರ್ಯ. ಅಲುಗಾಡುತ್ತಿದ್ದ ವೀರಶೈವ ಧರ್ಮವನ್ನು ಮತ್ತೆ ಅಲುಗಾಡದಂತೆ ಸಂಸ್ಥಾಪಿಸಿದ ಹಿರಿಮೆ ವೀರಭದ್ರನದು. ಆದುದರಿಂದಲೇ ಇಂದೂ ಜಗದ್ಗುರು ರೇಣುಕಾಚಾರ್ಯರ ಪೀಠದ ಆಧಾರಸ್ತಂಭವಾಗಿ ಶ್ರೀ ವೀರಭದ್ರನನ್ನು ಗೌರವಿಸುತ್ತಿರುವುದು."

ವೀರಭದ್ರನೇ ಶತರುದ್ರರಿಗೆಲ್ಲಾ ಅಧಿಪತಿ

ವೇದಕಾಲೀನ ವೀರಭದ್ರ ಲೇಖನವು ಇನ್ನೂ ಇತರ ವಿಷಯಗಳ ಮೇಲೆ ನೆರಳನ್ನು ಹರಡಲು ಯತ್ನಿಸುತ್ತದೆ.

"ಶತರುದ್ರರೆಂದರೆ ಪೂರ್ವಾದಿ ಎಂಟು ದಿಕ್ಕುಗಳು ಹಾಗೂ ಊರ್ಧ್ವ ಪಾತಾಳಗಳು ಸೇರಿ ಬ್ರಹ್ಮಾಂಡದ ಹತ್ತು ದಿಕ್ಕುಗಳಾಗುತ್ತವೆ. ಒಂದೊಂದು ದಿಕ್ಕಿಗೂ ಹತ್ತು ಹತ್ತು ಮಂದಿ ರುದ್ರರಿರುವರು. ಇವರೆಲ್ಲರೂ ಸೇರಿದರೆ ಶತರುದ್ರರು. ಇವರೆಲ್ಲರ ಅಧಿಪತಿಯೇ ವೀರಭದ್ರ. ಎಲ್ಲ ಮಂತ್ರದ ಅಧಿದೈವವೂ ಅವನೇ. ಶಿವನ ಪಂಚವಿಂಶತಿ ಲೀಲೆಗಳಲ್ಲಿ ಹನ್ನೆರಡನೆಯದೇ ವೀರಭದ್ರಾವತರಣ ಲೀಲೆ. ರುದ್ರನೆಂದರೆ ಅಗ್ನಿ, ಅದಕ್ಕೆ ಎರಡು ಶರೀರ, ಒಂದು ಘೋರಾ, ಇನ್ನೊಂದು ಅಘೋರ. ಈ ಅಗ್ನಿಯ ಘೋರ ರೂಪವೇ ಶಿವನ ಅಗ್ನಿನೇತ್ರದಿಂದ ಹುಟ್ಟಿದ ರುದ್ರ. ಆ ರುದ್ರನೇ ವೀರಭದ್ರನೆಂಬುದು ಆಗಮನಿಗಮ ವಚನಗಳ ಸಾರ. ಋಗ್ವೇದದಲ್ಲಿ ರುದ್ರನೇ ವೀರಭದ್ರನೆಂಬುದಾಗಿ ಸಮೀಕರಣಗೊಂಡಿದೆ"- ಎಂದು ತಮ್ಮ ವೇದಾಭಿಮಾನವನ್ನು ಘೋಷಿಸುತ್ತಾರೆ.

ತಮ್ಮ ವೀರಭದ್ರನು ರುದ್ರನ ಗಣಗಳಲ್ಲಿ ಒಬ್ಬ ಸಾಮಾನ್ಯ ಪ್ರಮಥ ಅಥವಾ ಭೂತಗಣವೆಂದು ಒಪ್ಪಲಾಗದೇ ಆತನನ್ನು ಅತ್ಯಂತ ಹಳೆಯ ದಾಖಲಾದ ಋಗ್ವೇದದಲ್ಲಿ ಕಂಡುಕೊಳ್ಳಲು ಯತ್ನಿಸುತ್ತಾರೆ. ಹಾಗಾಗಿಯೇ ವೀರ ಎಂಬ ಶಬ್ದಗಳೆಲ್ಲವೂ ಶಿವ, ಅಥವಾ ಶಿವ ಭಕ್ತರೆಂದೂ, ರುದ್ರ ಎಂಬುದೆಲ್ಲಾ ವೀರಭದ್ರನೆಂದೂ ಹಟಹಿಡಿದು ಸಮೀಕರಿಸಲು ಯತ್ನಿಸುತ್ತಾರೆ.

ಇಂತಹ ಸಾಹಿತ್ಯಕ ಹಟಮಾರಿತನಗಳು ಎಂದಿಗೂ ಸಂಶೋಧನಾತ್ಮಕವೂ, ವಿವೇಚನಾತ್ಮಕವೂ, ವಿಶ್ಲೇಷಣಾತ್ಮಕವೂ ಆಗದೇ ತಮ್ಮ ಮೋಹದ ಅಥವಾ ಒಲವಿನ ಮಂಡನೆಗೆ ಒಂದು ಪ್ರಯತ್ನವಾಗುತ್ತದೆ. ಈ ಮಂಡನೆಯೊಳಗೆ ಉಪನಿಷತ್ತುಗಳನ್ನೂ, ಅನೇಕ ಋಕ್ಕುಗಳನ್ನೂ ಸೇರಿಸಿಕೊಳ್ಳಲು ಯತ್ನಿಸುತ್ತಾರೆ.

ಇಲ್ಲಿ ನೋಡಿ, "ಶಿವನ ಪ್ರಮಥರು ಮೂವತ್ತಾರು ಕೋಟಿ. ಪ್ರಮಥರೆಂದರೆ ಶಿವನಂತೆಯೇ ಜಟಾಜೂಟಧಾರಿಗಳಾಗಿ, ವೇಷಭೂಷಣಧಾರರಾಗಿ, ಸಂಸಾರವಿಮುಖರಾಗಿ, ಯೋಗಾಸಕ್ತರಾಗಿ ಸದಾಕಾಲವೂ ಶಿವನ ಸೇವೆಯನ್ನು ಮಾಡುವ ಸೇವಕರು. ಈ ಪ್ರಮಥರಲ್ಲಿ ಅನೇಕ ಗುಂಪುಗಳಿರುತ್ತವೆ. ಒಂದೊಂದು ಗಣ(ಗುಂಪು)ಕ್ಕೂ ಒಬ್ಬೊಬ್ಬ ಅಧಿಪತಿ ಇರುತ್ತಾನೆ. ಇವರೇ ಗಣೇಶ್ವರರು. ನೀಲಲೋಹಿತ, ಕಾಲಲೋಹಿತ, ಕಾಲಕಂಠ, ವ್ಯಾಲಭೂಷಣ, ಶಾಂಭವ ಮುನೀಶ್ವರ, ವೃಷಭಯೋಗೀಶ್ವರ, ಕುಮಾರಪಿತ, ಸೋಮವಿಭೂಷಣಗಳೆಲ್ಲಾ ಈ ಗಣೇಶ್ವರರು. ಶಿವದ್ರೋಹಿಗಳಾಗಿ ಯುದ್ಧದಲ್ಲಿ ಶತ್ರುಸಂಹಾರ ಮಾಡುವ ರುದ್ರಗಣಕ್ಕೆ ವೀರಭದ್ರನೇ ಅಧಿಪತಿ..."

ಹೀಗೇ ವಿವರಿಸುತ್ತಾ ಮುಂದೆ ಹೇಳುತ್ತಾರೆ, "ದಕ್ಷ ವೈದಿಕ ಕರ್ಮಿ, ಅದು ಹಿಂಸಾರೂಪವಾದದ್ದು, ಅದನ್ನು ನಾಶ ಮಾಡಿ ಶಾಂತರೂಪವಾದ ಶಿವಧರ್ಮವನ್ನು ಎತ್ತಿಹಿಡಿಯುತ್ತಾನೆ ಈ ವೀರಭದ್ರ" ಎಂದು ಪರಾ ಬರೆಯುತ್ತಾರೆ.

ಈ ವಾಕ್ಯಗಳಲ್ಲಿ ಇರುವ ಧ್ವನಿಗಳಲ್ಲೇ ಸಾಕಷ್ಟು ಗೊಂದಲಗಳಿವೆ. ಕ್ರೋಧವೂ, ಘೋರವೂ ಆದ ರುದ್ರನ ಅವತಾರ ವೀರಭದ್ರ ಎನ್ನುತ್ತಾರೆ. ಹಾಗೆಯೇ ವೈಷ್ಣವ ಹಿಂಸಾತ್ಮಕವಾದದ್ದು ಎಂದು ಹೇಳಿ ವೀರಭದ್ರ ಶಾಂತರೂಪದವನು ಎನ್ನುತ್ತಾರೆ.

ವೇದಕಾಲೀನ ವೀರಭದ್ರ ಎಂಬ ವಿಷಯವನ್ನು ಅವಲೋಕನ ಮಾಡಿದಾಗ ಹೊರಬಿದ್ದ ಅಂಶಗಳು ಎಂದು ಅವರು ಉಲ್ಲೇಖಿಸಿರುವುದನ್ನು ನೋಡಿ ಧನ್ಯರಾಗುವ ಮೂಲಕ ಈ ಲೇಖನದ ಉಪಸಂಹಾರವಾಗಲಿ.

1. ವೀರಭದ್ರ ಎನ್ನುವುದು: ವೀರಶೈವ ಧರ್ಮದ ಸನಾತನತ್ವ ಅಥವಾ ಸದಾತನತ್ವವನ್ನು ಬಿಂಬಿಸುತ್ತದೆ.

2. ವೀರಭದ್ರ ಎನ್ನುವುದು: ವೈದಿಕ ಶೋಷಣೆಯ ವಿರುದ್ಧ ನಡೆದ ಅವೈದಿಕ ದಾಳಿಯನ್ನು ಅಥವಾ ಆರ್ಯ - ದ್ರಾವಿಡರ ಸಂಘರ್ಷವನ್ನು ಧ್ವನಿಸುತ್ತದೆ.

3. ವೀರಭದ್ರ ಎನ್ನುವುದು: ವೀರರೂ ಭದ್ರರೂ ಆದ ವೀರ ಜನಾಂಗವನ್ನು ಸಂಕೇತಿಸುತ್ತದೆ.

4. ವೀರ ಎನ್ನುವುದು: ವೀರಭದ್ರನಲ್ಲಿ ಸಮನ್ವಯಗೊಳ್ಳುತ್ತದೆ.

5. ವೀರಭದ್ರ ಶಬ್ದವು - ವೇದಗಳಲ್ಲಿ ವೀರ ಎಂಬ ಸಂಕ್ಷಿಪ್ತನಾಮರೂಪದಲ್ಲಿ ಬಂದಿರುವುದು ಗಮನೀಯ.


ಸನಾತನತ್ವದ ಶ್ರೇಷ್ಠತೆಯ ಗೀಳು ಹತ್ತಿದವರಿಗೆ ಎಲ್ಲವನ್ನೂ ಹಳತನ್ನಾಗಿಸುವುದರಲ್ಲಿಯೇ ಆನಂದ. ಇರಲಿ, ವೇದಾಗ್ರಹ ಪೀಡಿತರಾದವರಿಗೆ ಆರ್ಯರ, ವೈದಿಕರ ವಿರೋಧದ ಪ್ರತಿಮೆಯಾಗಿ, ಧ್ವಂಸಕ ಶಕ್ತಿಯಾಗಿ ಹುಟ್ಟಿದ ವೀರಭದ್ರನ ಕಲ್ಪನೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಲೇಖನದ ಅತಿ ದೊಡ್ಡ ಸಂಶೋಧನೆ ವೀರಭದ್ರ ಶಬ್ದವು ವೀರ ಎಂಬ ಸಂಕ್ಷಿಪ್ತನಾಮ!

ಇನ್ನು ಮಾಸ್ಟರ್ ಮೈಂಡ್, ಮಾಸ್ಟರ್ ಪೀಸ್, ಒಟ್ಟಾರೆ ಜಗತ್ತಿನ ಎಲ್ಲಾ ಮಾಸ್ಟರ್ ಶಬ್ದಗಳು ಯೋಗೇಶ್ ಮಾಸ್ಟರ್ ಎಂಬುದರ ಸಂಕ್ಷಿಪ್ತನಾಮ. ಯೋಗೇಶ್ ಮಾಸ್ಟರ್ ಅತ್ಯಂತ ಪ್ರಾಚೀನ, ಸನಾತನ ಮತ್ತು ಮಾಸ್ಟರ್‌ಗಿರಿಗೆ ಅದೇ ಮೂಲ ಎನ್ನಲು ಯಾವ ಅಡ್ಡಿ ಆತಂಕಗಳೂ ಇಲ್ಲ!!

ಇರಲಿ, ವೀರಭದ್ರನನ್ನು ವೀರಗಾಸೆಯಲ್ಲಿ ಜನಪದದಲ್ಲಿ ದೇಸಿಯ ಸಂಸ್ಕೃತಿಯಲ್ಲಿ ನೋಡುವ ಬಗೆಯನ್ನು ಮುಂದೆ ಕಾಣೋಣ. ವೀರಭದ್ರನಿಗೆ ಆರೋಪಿಸಲಾಗುವ ಹುಸಿವೈಶಿಷ್ಟ್ಯದ ಮುಸುಕಿನಿಂದ ಹೊರತಾಗಿ ಸಹಜವಾದಂತಹ ಗೌರವದಿಂದಲೇ ಕಾಣುವ ಬಗೆಯನ್ನು ಮುಂದೆ ನೋಡೋಣ.

ಉತ್ಪ್ರೇಕ್ಷೆಗಳು ವಸ್ತುವಿನ ಮೌಲ್ಯವನ್ನು, ಮೂಲ ಗೌರವವನ್ನು ಹಾಗೂ ಆಶಯವನ್ನು ನಾಶ ಮಾಡುತ್ತವೆ. ಇವನ್ನು ನಾವು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕು.

ಗಣತಂತ್ರದ ಪರೇಡಿನಲ್ಲಿ ಸನಾತನ ವಿಜ್ಞಾನದ ಟಾಬ್ಲೊ ಇದ್ದಿದ್ದರೆ...



ಕತ್ತೆ ಉಚ್ಚೆಯಿಂದ ವಿಮಾನ ಹಾರಿಸುವುದು, ಪರಶುರಾಮನ ಜೆಸಿಬಿಯಿಂದ ಸಮುದ್ರದ ಹೂಳು ತೆಗೆಯುವುದು, ಗಾಳಿಯಿಂದ ಆಹಾರ ತಯಾರಿಸುವ ದ್ರೌಪದಿಯ ಅಕ್ಷಯಪಾತ್ರೆ, ಗಾಂಧಾರಿಯ ಒಂದೇ ಅಂಡಾಣುವನ್ನು ವೇದವ್ಯಾಸ ತರಕಾರಿಯಂತೆ ಕೊಚ್ಚಿ ಒಂದು ಭರಣಿಯೊಳಗೆ ಇಟ್ಟು ನೂರು ಪ್ರನಾಳಶಿಶುಗಳಿಗೆ ಜನ್ಮ ಕೊಡುವುದು, ಶ್ರೀಕೃಷ್ಣ ಅಭಿಮನ್ಯುವಿಗೆ ಗರ್ಭದಲ್ಲಿಯೇ ಎಲ್ಲ ವಿದ್ಯೆ ಕಲಿಸಿದಂತೆ ಈಗಲೂ ತಾಯಿ ಗರ್ಭದಲ್ಲಿಯೇ ಮಗುವನ್ನು ಇಂಜಿನಿಯರ್/ಡಾಕ್ಟರ್/ಐಐಟಿ ಆಗಿಸಿಯೇ ಹೊರ ತರುವ ತಂತ್ರಜ್ಞಾನ, ವೈದಿಕರು ಮಂತ್ರದಿಂದ



ಬ್ರಹ್ಮಾಸ್ತ್ರ/ಅಣುಬಾಂಬ್/ ಕ್ಷಿಪಣಿ ಆಕ್ಟಿವೇಟ್ ಮಾಡುವುದು, ಆನೆ ಮತ್ತು ಮನುಷ್ಯನ ತಲೆಯ ಪ್ಲಾಸ್ಟಿಕ್ ಸರ್ಜರಿ, ಇಂತಹ ಎಲ್ಲಾ ಸನಾತನ ವಿಜ್ಞಾನ ಪ್ರತಿನಿಧಿಸುವ ಟಾಬ್ಲೊ ಈ ಸಾರಿಯು ಗಣತಂತ್ರ ದಿನದ ಪರೇಡಿನಲ್ಲಿ ಇರಬಹುದೆಂದು ನಾನು ಭಾವಿಸಿದ್ದೆ. ಆದರೆ ಇವೆಲ್ಲ ಇಲ್ಲದಿರುವುದು ಘೋರ ನಿರಾಶೆಯಾಗಿದೆ. ಈ ಸ್ತಬ್ಧಚಿತ್ರ ಇದ್ದಿದ್ದರೆ ಒಬಾಮಾಗೆ ಮತ್ತು ಅಮೆರಿಕನ್ನರಿಗೆ ನಮ್ಮ ಸನಾತನ ವಿಜ್ಞಾನದಲ್ಲಿ ಬಹಳ ಆಸಕ್ತಿ ಹುಟ್ಟುತ್ತಿತ್ತು ಹಾಗೂ ಇದರ ಸಂಶೋಧನೆಗೆ ಭಯಂಕರ ವಿದೇಶಿ ಬಂಡವಾಳ ತಕ್ಷಣ ಹರಿದುಬರುತ್ತಿತ್ತು.

ಧರ್ಮಶ್ರೀ ಅಣ್ಣನಿಗೆ ಪದ್ಮ ಪ್ರಶಸ್ತಿ, ತಮ್ಮನದು ಪರರ ಆಸ್ತಿಗಾಗಿ ಕುಸ್ತಿ, ಮಕ್ಕಳದ್ದು ರೇಪ್ ಮಾಡುವಷ್ಟು ಮಸ್ತಿ, ಉಜಿರೆ ಸೌಜನ್ಯಳ ಆತ್ಮ ಮಾಡಲಿದೆ ಶಾಸ್ತಿ ಆಗ ಸಿಗಲಿದೆ ಕೊಲೆಯಾದವರ ನೂರಾರು ಆತ್ಮಕ್ಕೆ ಶಾಂತಿ.

- ಅಭಿಷೇಕ್ ಎ ಪಡಿವಾಳ್, ಸುಳ್ಯ

ವರ್ಷದ ದಿಟ್ಟಮಹಿಳೆ ಪ್ರೇಮಲತಾ ಶಾಸ್ತ್ರಿ


ಕಳೆದ ಸಂಚಿಕೆಯಲ್ಲಿ ಸಗಣಿ ರಾಘವನ ಮನೆಹಾಳ ಕಾರ್ಯ ಓದಿ ದಂಗಾದೆ. ಸ್ವಾರ್ಥಕ್ಕಾಗಿ ತನ್ನ ಮಠದ ಅಧಿಕಾರಿಯೊಬ್ಬರ ಕುಟುಂಬದ ದಾಂಪತ್ಯವನ್ನು ಮುರಿದ ರಾಘವ ಸ್ವಾಮಿ ಅಲ್ಲ ಮನುಷ್ಯ ಎನ್ನಲೂ ನಾಲಾಯಕ್. ಈತನ ಕೇಸಿಗೆ ಸಂಬಂಧಿಸಿದಂತೆ ನಿಯೋಜಿತರಾದ ನ್ಯಾಯಾಧಿಕಾರಿಗಳು ಒಬ್ಬೊಬ್ಬರೇ ಕುಂಟನೆಪ ಹೇಳಿ ಕಳಚಿಕೊಳ್ಳುತ್ತಿರುವುದು ಯಾವುದೋ ಹೇಳಲೇ ಬೇಕಾಗಿ ಬರುವ 'ಕಹಿಸತ್ಯ'ವೊಂದರ ಹಿನ್ನೆಲೆಯಿಂದಲೇ ಎಂದು ಜನರಾಡಿಕೊಳ್ಳುತ್ತಿದ್ದಾರೆ. ಕೇಸು ಸರಳವಿದ್ದಿದ್ದರೆ ಇಂತಹ ಬೆಳವಣಿಗೆ ಖಂಡಿತಾ ಸಂಭವಿಸುತ್ತಿರಲಿಲ್ಲ, ರಾಘವನ ಪ್ರಭಾವ ಹಾಗು ಕು-ತಂತ್ರಗಳೇ ಅಂಥಾದ್ದು.

ಬಹುಶಃ ಗೌರಿ ಲಂಕೇಶ್ ಹಾಗು ಇತರರು ಈ ರಾಘವನನ್ನು ಮುಖಾಮುಖಿ ನೋಡಿರಲಿಕ್ಕೇ ಇಲ್ಲ, ಇಲ್ಲಿ ನಡೆಯುತ್ತಿರುವ ಹೋರಾಟ ಅಹಂಕಾರ-ಧಾರ್ಷ್ಟ್ಯತನದ ಪ್ರತೀಕವೊಂದರ ಕುರಿತಾಗಿಯೇ ವಿನಹ ವ್ಯೆಯಕ್ತಿಕವಾಗಿ ರಾಘವನ ಕುರಿತಾಗಿ ಅಲ್ಲ. ಒಂದುವೇಳೆ ಪ್ರೇಮಲತಾ ಪ್ರಕರಣಕ್ಕೆ ಸಂಬಂಧಿಸಿ ಇಂತಹ ಪ್ರಭಾವಿ ತಂತ್ರಗಾರನ ಎದುರಾಗಿ ನಿಂತು ಪ್ರೇಮಲತಾರಿಗೆ ಪತ್ರಿಕೆ ನೈತಿಕವಾಗಿ ಬೆಂಬಲಿಸದಿರುತ್ತಿದ್ದರೆ ಇಲ್ಲಿ ಯಾವ ನ್ಯಾಯಾಧೀಶನೂ ಜಾರಿಕೊಳ್ಳುವ ಪ್ರಮೇಯವೇ ಬರುತ್ತಿರಲಿಲ್ಲ, ಯಾಕೆಂದರೆ, ಕೇವಲ ಒಮ್ಮುಖ ವಾದಗಳಿಂದಾಗಿ ಪ್ರೇಮಲತಾ ಪರ ಜನ ಬೆಂಬಲ ಸಿಗದೇ ಈ ಕೇಸು ಬಲಾಢ್ಯರ ಪರವಾಗಿ ಖಂಡಿತ ಶರಣಾಗುತ್ತಿತ್ತು.

ಪ್ರೇಮಲತಾ ಹಾಗು ದಿವಾಕರ ಶಾಸ್ತ್ರಿ ಲೋಕಜ್ಞಾನವಿರದ ಅನಕ್ಷರಸ್ಥರಲ್ಲ, ನಮ್ಮಯ ಈ ನಡೆ ಮುಂದೆ ನಮ್ಮನ್ನು ಹಿಂಡಿ ಹಿಪ್ಪೆಯನ್ನಾಗಿಸಬಹುದೆಂಬ ಅರಿವಿದ್ದುಕೊಂಡೇ ರಾಘವನ ಅನ್ಯಾಯದ ವಿರುದ್ಧ ಯುದ್ಧಕ್ಕಿಳಿದಿದ್ದಾರೆ. ಜನರ ಬಾಯಿಗೆ ಸುಲಭದಲ್ಲಿ ಆಹಾರವಾಗಬಲ್ಲ ಲೈಂಗಿಕ ವಿಚಾರವನ್ನಿಟ್ಟುಕೊಂಡು ಹೋರಾಟಕ್ಕಿಳಿಯುವುದು ಸ್ತ್ರೀಯೊಬ್ಬಳಿಗೆ ಅದಕ್ಕಿಂತ ದೊಡ್ಡ ನರಕ ಹಿಂಸೆ ಬೇರೆಯಿಲ್ಲ, ವಾಮಮಾರ್ಗಗಳ ಮೂಲಕ ತಮ್ಮಯ ನೈತಿಕ ಸ್ಥೈರ್ಯ ಕುಗ್ಗಿಸಲು ರಾಘವನ ಪಡೆ ನೋಡಿದರೂ ಹಿಂಜರಿಯದೇ ಮುನ್ನುಗ್ಗುತ್ತಿರುವ ಪ್ರೇಮಲತಾ ದಂಪತಿಗಳು ನಿಜಕ್ಕೂ ಅಭಿನಂದನಾರ್ಹರು. ಸಾಧ್ಯವಿದ್ದಲ್ಲಿ ಮಹಿಳಾ ದಿನಾಚರಣೆ ಹಾಗು ಲಂಕೇಶರ ಜನ್ಮದಿನದಂದು ಈ ದಿಟ್ಟೆಯನ್ನು ಪತ್ರಿಕೆ ಗೌರವಿಸಲು ಸಾಧ್ಯವೇ? ತನ್ನ ಹೋರಾಟದ ಹಿಂದೆ ಎಡಪಂಥೀಯ ವಿಚಾರಧಾರೆಯ ಯಾರದೋ ಬೆಂಬಲ ಇದೆಯೆಂಬ ಭಾವನೆ ಬರುವ ಸಾಧ್ಯತೆಯ ಕಾರಣಕ್ಕೆ ಅವರು ಒಪ್ಪದಿರಲೂಬಹುದು ಅಥವ ಒಪ್ಪಲೂಬಹುದು.

-ಅವಿನಾಶ್ ಎಮ್.ಎಸ್, ಈ ಮೇಲ್ ಮೂಲಕ

ಮೌಢ್ಯ ಹೋಗಲಾಡಿಸಲು ವಿಚಾರವಾದಿ ಇಂಗ್ಲಿಷ್ ಪತ್ರಿಕೆ ಅವಶ್ಯ



-ವಿಚಾರವಾದಕ್ಕೆ ಒಂದು ತಲೆಯಾದರೆ ಮೌಢ್ಯಕ್ಕೆ ಸಾವಿರ ತಲೆ. ದೇವರ ಇಚ್ಛೆಯಿಲ್ಲದೇ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲ ಎಂದು ಮಾತುಮಾತಿಗೆ ಆಸ್ತಿಕರು ದೊಡ್ಡ ಆಧ್ಯಾತ್ಮ ಮಾತನಾಡುತ್ತಾರೆ. ಆದರೆ ಇನ್ನೊಂದೆಡೆ ಸುಶಿಕ್ಷಿತರು ಸಹ ದೇವರ ಇಚ್ಛೆಯ ವಿರುದ್ಧ ಹೋಗಿ ಕಂದಾಚಾರದಿಂದ ತಮ್ಮ ಭವಿಷ್ಯ ಬದಲಾಯಿಸಲು ಸಾಧ್ಯ ಎಂದು ನಂಬುತ್ತಾ ಅಪಾಯಕಾರಿ ಮೌಢ್ಯಗಳನ್ನು ಅನುಸರಿಸುತ್ತಾರೆ.

ಇತ್ತೀಚೆಗೆ ನನ್ನ ಒಬ್ಬ ಪರಿಚಯಸ್ಥರ ಕುಟುಂಬದಲ್ಲಿ ಜ್ಯೋತಿಷಿಯ ಸಲಹೆಯಂತೆ ಮಗು ಶುಭ ಗಳಿಗೆಯಲ್ಲಿಯೇ ಹುಟ್ಟಬೇಕು ಎಂಬ ಉದ್ದೇಶದಿಂದ ಡಾಕ್ಟರ್ ಹೇಳಿದ ದಿನಕ್ಕಿಂತ ಹದಿಮೂರು ದಿನ ಮೊದಲೇ ಗರ್ಭಿಣಿ ಯುವತಿಯ ಸಿಜರಿನ್ ಮಾಡಿದ್ದರಿಂದ ತಾಯಿ-ಮಗು ಇಬ್ಬರೂ ಮೃತ ಪಟ್ಟರು. ವಿಪರ್ಯಾಸವೆಂದರೆ ಯುವತಿ ಮತ್ತು ಅವಳ ಗಂಡ ಇಬ್ಬರೂ ಎಮ್‌ಎನ್‌ಸಿ ಒಂದರಲ್ಲಿ ಇಂಜಿನಿಯರುಗಳು.

ಉನ್ನತ ಶಿಕ್ಷಣ ಹೊಂದಿದವರಲ್ಲೂ ಮನೆ ಮಾಡಿರುವ ಇಂತಹ ಆಧುನಿಕ ಮೂಢನಂಬಿಕೆಗಳನ್ನು ಹೋಗಲಾಡಿಸಲು ಕಠಿಣ ಮೌಢ್ಯ ನಿರ್ಬಂಧ ಕಾನೂನಿನ ಅವಶ್ಯಕತೆಯಿದೆ. ವಿದ್ಯಾವಂತರಲ್ಲೂ ಹೆಚ್ಚುತ್ತಿರುವ ಮೌಢ್ಯ ಹೋಗಲಾಡಿಸಲು ಚಾರ್ಲಿ ಹೆಬ್ದೋದಂತಹ ಅಪ್ಪಟ ವಿಚಾರವಾದಿ ಇಂಗ್ಲಿಷ್ ಪತ್ರಿಕೆಯೊಂದರ ಅವಶ್ಯಕತೆ ಭಾರತದಲ್ಲಿದೆ.



ಕನ್ನಡದಲ್ಲಿ ಗೌರಿ ಲಂಕೇಶ್ ತರಹದ ವಿಚಾರವಾದಿ ವಾರಪತ್ರಿಕೆಯಾದರೂ ಇದೆ. ಆದರೆ ಇಂಗ್ಲಿಷಿನಲ್ಲಿ ಅಂತಹ ಯಾವುದೇ ವಿಚಾರವಾದಿ ಪತ್ರಿಕೆಯಿಲ್ಲದಿರುವುದು ವಿಷಾದಕರ.

ಕರಾವಳಿಯಲ್ಲಿ ಹರಕೆಯ ಕಂಬಳ ಆಡಿಸುವುದು ಸಹ ನಿಷಿದ್ಧ ಎನ್ನುವ ಪ್ರಾಣಿ ದಯಾ ಸಂಘದವರು ಮೈಸೂರಿನ ಹಳ್ಳಿಗಳಲ್ಲಿ ಪ್ರತಿವರ್ಷ ಸಂಕ್ರಾಂತಿಯಂದು ನಡೆಯುವ ಸಾವಿರಾರು ಎತ್ತುಗಳನ್ನು ಕಿಚ್ಚು ಹಾಯಿಸುವ (ಧಗ ಧಗ ಬೆಂಕಿಯಲ್ಲಿ ಎತ್ತುಗಳನ್ನು ಓಡಿಸುವುದು) ಅಮಾನುಷ ಹರಕೆ ಮಾತ್ರ ಸರಿಯೆನ್ನುತ್ತಾರೆ. ಒಬ್ಬ ಟಿವಿ ಜ್ಯೋತಿಷಿಯ ಸಲಹೆಯಂತೆ ಮಕ್ಕಳ ಮೇಲಿನ ಕ್ರೂರ ಗ್ರಹ ದೋಷ ನಿವಾರಿಸಲು ಮೊನ್ನೆ ಸಂಕ್ರಾಂತಿಯಂದು ಬೆಳಗಾವಿ, ಬೆಂಗಳೂರಿನಂತಹ ಆಧುನಿಕ ನಗರದಲ್ಲೂ ವಿದ್ಯಾವಂತ ಮಹಿಳೆಯರು ಒಂಬತ್ತು ಮನೆಯಲ್ಲಿ ಭಿಕ್ಷಾಟನೆ ಮಾಡಿ ಅಪಹಾಸ್ಯಕ್ಕೀಡಾಗಿದ್ದಾರೆ. ಭಿಕ್ಷಾಟನೆ ಮಾತ್ರ ಕಾನೂನಿನನ್ವಯ ಅಪರಾಧವಲ್ಲ ಭಿಕ್ಷಾಟನೆಗೆ ಪ್ರೇರೇಪಿಸುವುದು ಸಹ ಅದೇ ಕಾನೂನಿನಡಿ ಅಪರಾಧವಾಗಿದೆ. ಹಾಗಾಗಿ ಮಹಿಳೆಯರಿಗೆ ಭಿಕ್ಷಾಟನೆ ಮಾಡುವಂತೆ ಕೆಟ್ಟ ಪ್ರೇರಣೆ ಕೊಟ್ಟ ಟಿವಿ ಜ್ಯೋತಿಷಿಯ ವಿರುದ್ಧ ಪೊಲೀಸರು ಕಾನೂನು ಕ್ರಮ ಕೈಗೊಳ್ಳುವಂತೆ ಮಹಿಳಾ ಸಂಘಟನೆಗಳು ಆಗ್ರಹಿಸದಿರುವುದು ಖೇದಕರ.

- ಜೆ.ರವಿ ಕಿರಣ ರೈ, ಮಂಗಳೂರು

ಧರ್ಮಸ್ಥಳದ ದೇವಸ್ಥಾನಕ್ಕೆ ಪ್ರತಿದಿನವೂ ಸಾವಿರಾರು ಮಾನಸಿಕ ಸಂತ್ರಸ್ತರು ಪರಿಹಾರಕ್ಕಾಗಿ ಭೇಟಿಕೊಡುತ್ತಾರೆ. ಅವರಿಗೆ ಧರ್ಮಸ್ಥಳದ ಭೂತನಾಥ ಮತ್ತು ಅವನ ಒಡೆಯ ಮಂಜುನಾಥನ ಮೇಲೆ ಇರುವ ಶ್ರದ್ಧಾಭಕ್ತಿಗಳಿಂದಾಗಿ ಎಷ್ಟು ಜನರಿಗೆ ವಾಸಿಯಾಗುತ್ತದೆಯೋ ತಿಳಿಯದು. ಈ ಬಗ್ಗೆ ಯಾರಾದರೂ ಮನೋವಿಜ್ಞಾನಿಗಳು ಸಂಶೋಧನೆ ನಡೆಸಿ ಅಂಕಿ-ಅಂಶಗಳನ್ನು ಪ್ರಕಟಿಸಿದಂತೆ ತೋರುವುದಿಲ್ಲ. ಆದರೆ ಈ ಭಕ್ತರಿಂದ ಲಕ್ಷಾಂತರ ರೂ ಕಾಣಿಕೆಯಾಗಿ ದೇವಸ್ಥಾನದ ಆಡಳಿತ ಮಂಡಳಿಗೆ ದಿನವೂ ಸಲ್ಲಿಕೆಯಾಗುತ್ತಿದೆ. ದೇವಸ್ಥಾನದ ಕೋಟ್ಯಾಂತರ ರೂ ಆದಾಯದಲ್ಲಿ ಗಣನೀಯ ಪಾಲು ಪಡೆದಿರುವ ಈ ಹಣದಲ್ಲಿ ಆಧುನಿಕ ಚಿಕಿತ್ಸಾ ಸೌಲಭ್ಯಗಳಿರುವ ಮನೋರೋಗ ಆಸ್ಪತ್ರೆಯನ್ನು ನಿರ್ಮಿಸುವುದು ಅತ್ಯಗತ್ಯವಾಗಿದೆ. ಈಗಾಗಲೇ ನಾಡಿನಾದ್ಯಂತ ನೂರಾರು ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಗ್ರಾಮೀಣ ಅಭಿವೃದ್ಧಿ ಸೇವಾಸಂಸ್ಥೆಗಳನ್ನು ನಡೆಸುತ್ತಿರುವ, ಇದೀಗ ಭಾರತ ಸರಕಾರದಿಂದ ಪದ್ಮಪ್ರಶಸ್ತಿಗೆ ಭಾಜನರಾಗಿರುವ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರಿಗೆ ಇದೇನೂ ಅಸಾಧ್ಯವಾದ ಕೆಲಸವಲ್ಲ.

-ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ಬಡ್ಡಿ ಅಣ್ಣೆಂದ್ರ, ಬಡವ ತಮ್ಮೆಂದ್ರ

ಬ್ರಿಟಿಷರಿಂದ ಒಬ್ಬ ಜೈನನಿಗೆ ಹಿಂದೂ ದೇವಳದ ಬಳುವಳಿ ಹಾಗೂ ಆ ಶೈವ ಕ್ಷೇತ್ರದಲ್ಲಿ ವೈಷ್ಣವ ಅರ್ಚಕರ ಹಾವಳಿ, ಇದನ್ನು ಎಲ್ಲ ಕನ್ನಡಿಗರಿಗೆ ತಾವು ತಿಳಿಸಿದ್ದಕ್ಕೆ ಥ್ಯಾಂಕ್ಸ್. ಸಮಾಜ ಸೇವೆಯ ನೆಪದಲ್ಲಿ ದೇವಳದ ಹಣದಲ್ಲಿ ಅಣ್ಣೆಂದ್ರ ಮಾಡುವುದು ಬಡ್ಡಿ ವ್ಯವಹಾರ ಹಾಗೂ "ಬಡವ" ತಮ್ಮೆಂದ್ರ ಮಾಡುವುದು ಹಲವು ಅವ್ಯವಹಾರ, ಅವನ ಮಕ್ಕಳು ಮಾಡುವುದು ಅತ್ಯಾಚಾರ.

ನಿಜವಾದ ನಿಸ್ವಾರ್ಥ ಸಮಾಜ ಸೇವೆ ಮಾಡುವ ಡಾ. ಶಿವಕುಮಾರ ಸ್ವಾಮೀಜಿಗಳಿಗೆ ಕೇವಲ ಪದ್ಮಭೂಷಣ ಕೊಟ್ಟರೆ ಬಡ್ಡಿ ವ್ಯವಹಾರ ಮಾಡುವವರಿಗೆ ಲಾಬಿ ಮುಖಾಂತರ ಪದ್ಮ ವಿಭೂಷಣ. ಇದೆಂತಹ ವಿಚಿತ್ರ!

ತುಳುನಾಡು ಕೃತಿ ರಚಿಸಿದ ಡಾ.ಪಿ.ಗುರುರಾಜ ಭಟ್ ಇವರು ಯಾವುದೇ ಜಾತಿ ಪೂರ್ವಾಗ್ರಹ ಇಲ್ಲದ ನಿಜವಾದ ಇತಿಹಾಸದ ಸಂಶೋಧಕರಾಗಿದ್ದರು. ಹಾಗಾಗಿ ಅವರು ಈ ಧರ್ಮಕ್ಷೇತ್ರದ ಬಗ್ಗೆ ಬರೆದುದ್ದರಲ್ಲಿ ಪೂರ್ವಾಗ್ರಹವೇನೂ ಇರಲಿಲ್ಲ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಳಿದ ರಾಜರುಗಳೆಲ್ಲ ಜೈನರು ಎಂಬ ತಪ್ಪು ಅಭಿಪ್ರಾಯ ಮೂಡಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಗುಜರಾತಿನಿಂದ ವಾಘೆಲಾ ಜನಾಂಗದ ಜೈನರು ತುಳುನಾಡಿಗೆ ವಲಸೆ ಬಂದಿದ್ದು ಹತ್ತು-ಹನ್ನೊಂದನೇ ಶತಮಾನದಲ್ಲಿ (ಅದೇ ಕಾರಣಕ್ಕೆ ನಮ್ಮ ಈಗಿನ ರಾಜ್ಯಪಾಲ ವಜುಭಾಯಿ ಇವರ ಗುಜರಾತಿ ವಾಘೆಲಾ ಕ್ಷತ್ರಿಯ ಜಾತಿಯ ಉಪನಾಮಗಳಾದ - ವಾಲಾ, ಪೂಂಜಾ, ಶೇಣ್ವಾ, ಕೊಟ್ಟಾರಿ, ಭಂಡಾರಿ, ಅಧಿಕಾರಿ, ಬಂಗ, ಮೇಂಡ, ಮುಂಡ, ಗಂಭೀರಾ, ಸೂಡ, ಸಾಂತ, ಸಾವಂತ, ಕಿಲ್ಲೆ ಕೊಂಡೆ, ಮಾಣೈ, ಸಾಮಾನಿ, ಬೈತಾನಿ, ಪೂವಾಣಿ, ಪಡಿವಾಲ, ಶೇಕಾ ಈ ಎಲ್ಲಾ ಉಪನಾಮಗಳು ತುಳುನಾಡಿನ ಜೈನರಲ್ಲೂ ಇವೆ). ಆದರೆ ಹತ್ತನೆ ಶತಮಾನಕ್ಕೆ ಮೊದಲು ಆಳಿದ ತುಳುನಾಡಿನ ರಾಜವಂಶಗಳೆಲ್ಲಾ ಹಿಂದೂಗಳೇ ಆಗಿದ್ದರು. ಅದರಲ್ಲಿ ಪ್ರಮುಖರಾದ ಅಳೂಪ ವಂಶದವರು ಶುದ್ಧ ಶೈವ ಹಿಂದೂಗಳಾಗಿದ್ದರು. ಆದರೆ ಇವರೂ ಜೈನ ಧರ್ಮೀಯರು ಎಂದು ಬಿಂಬಿಸುವ ಪಿತೂರಿ ಕೆಲವು ಸ್ಥಳೀಯ ಇತಿಹಾಸಕಾರರು ಮಾಡುತ್ತಿದ್ದಾರೆ. ಹಾಗೆ ನೋಡಿದರೆ ಪೋರ್ಚುಗೀಸರನ್ನು ಹೊಡೆದೋಡಿಸಿದ ಉಳ್ಳಾಲ ರಾಣಿ ಅಬ್ಬಕ್ಕ ಸಹ ಶುದ್ಧ ಜೈನಳಾಗಿರಲಿಲ್ಲ. ಪೋರ್ಚುಗೀಸರು ತಮ್ಮ ದಾಖಲೆಗಳಲ್ಲಿ ಅವಳ ನಿಜವಾದ ಹೆಸರು ಬಕ್ಕದೇವಿ ಎಂದೂ ಜಾತಿಯಿಂದ ಅವಳು ಬಂಟ-ಜೈನಳಾಗಿದ್ದಳು ಎಂದೂ ನಮೂದಿಸಿದ್ದಾರೆ. ಈಗ ಬಂಟ-ಜೈನ ಎಂಬ ಉಪಜಾತಿ ತುಳು ಜೈನರಲ್ಲಿ ಇಲ್ಲ, ಇದರ ಅರ್ಥ ಅಬ್ಬಕ್ಕ ರಾಣಿ ಶುದ್ಧ ಜೈನಳಾಗಿರಲಿಲ್ಲ. ಆದರೆ ಈಗಿನ ಇತಿಹಾಸಕಾರರು ಈ ವಿಷಯ ಉದ್ದೇಶಪೂರ್ವಕವಾಗಿ ಮುಚ್ಚಿಡುತ್ತಿದ್ದಾರೆ. ಗುಜರಾತಿನ ವಾಘೆಲಾ ಜಾತಿಯವರ ಕುಲದೈವವೂ ಸೋಮನಾಥ ಹಾಗೂ ತುಳುನಾಡಿನ ಜೈನರ



ಕುಲದೈವವೂ ಸೋಮನಾಥ ಅರ್ಥಾತ್ ಸೋಮೇಶ್ವರ. (ಅಬ್ಬಕ್ಕ ರಾಣಿ ಪೂಜಿಸುತ್ತಿದ್ದ ಸೋಮೇಶ್ವರ ದೇವಸ್ಥಾನ ಈಗಲೂ ಉಲ್ಲಾಳದಲ್ಲಿದೆ. ಜೈನ ರಾಜರು ಹಿಂದೂಗಳ ಶಿವನನ್ನು ಸೋಮನಾಥನ ಹೆಸರಲ್ಲಿ ಯಾಕೆ ಪೂಜಿಸುತ್ತಿದ್ದರು ಎಂಬ ಪ್ರಶ್ನೆಗೆ ಜೈನರಲ್ಲಿ ಉತ್ತರವಿಲ್ಲ) ಹೀಗೆ ಬ್ರಾಹ್ಮಣರಂತೆ ಹೊರಗಿನಿಂದ ಬಂದ ಜೈನರೂ ತುಳುನಾಡಿನ ಸಮಾಜವನ್ನು ದೇವರು ಧರ್ಮದ ಹೆಸರಲ್ಲಿ ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಇದಕ್ಕೆ ಕುಡುಮ ಅತ್ಯುತ್ತಮ ಉದಾಹರಣೆ.

- ವೀರಪ್ಪ ದಿ ನಾಯ್ಕ್, ಮಂಗಳೂರು

ಕಳೆದ ವಾರ ಯಾಹೂ ಅವರ 'ಘೂತ್ತೇರಿ' ಅಂಕಣದಲ್ಲಿ ಹಿಂದೂಗಳು ಪಾಲಿಸಬೇಕಾದ ಸ್ಯಾಂಪಲ್ ಓದಿ, ಕಟ್ಟರ್ ಹಿಂದೂವಾದಿ ಮೋದಿಯ ಅಭಿಮಾನಿಯಾದ ನನ್ನ ಅಣ್ಣನ ನೆನಪಾಗಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕೆ.


ಹಾಗೊಮ್ಮೆ ಚೆಡ್ಡಿಗಳು 'ಹಿಂದೂ ಜೀವನ ಶೈಲಿ' ಎಂಬ ಗ್ರಂಥವನ್ನು ತಂದರೆ ಅದರಲ್ಲಿ ಯಾಹೂ ಅವರು ಕೊಟ್ಟಿರುವ ಸ್ಯಾಂಪಲ್‌ಗಳು ಇದ್ದರೂ ಅಚ್ಚರಿ ಇಲ್ಲ. ಈ ತರಹದ ಗ್ರಂಥ ಬರುವ ಮೊದಲೇ ಹಿಂದೂ ವ್ಯಾಧಿ ಮನಸ್ಥಿತಿಯಿಂದ ಹಲವರು ಹೊರ ಬಂದಿರುವುದು ಸಮಾಧಾನ ತಂದಿದೆ.

-ಸರೋವರ್ ಬೆಂಕಿಕೆರೆ, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮೇಲ್ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಭಾರತೀಯ ಚಿತ್ರರಂಗದ 'ಐ': ಪಿ.ಸಿ.ಶ್ರೀರಾಮ್




ಐ', 'ನಾಯಗನ್', 'ಮೌನರಾಗಂ', 'ಅಗ್ನಿನಕ್ಷತ್ರಂ', 'ತಿರುಡಾ ತಿರುಡಾ', 'ಗೀತಾಂಜಲಿ', 'ದೇವರ್ ಮಗನ್', 'ಕಾದಲರ್ ದಿನಂ', 'ಅಪೂರ್ವ ಸಹೋದರ್ಗಳ್', 'ಖುಷಿ', 'ಮೈಕಲ್ ಮದನ ಕಾಮರಾಜನ್', 'ಇಶ್ಕ್', 'ಪಾ', 'ಚೀನೀ ಕಂ'... ಮುಂತಾದ ಚಿತ್ರಗಳಿಗೆ ಛಾಯಾಗ್ರಾಹಕರಾಗಿ ಕೆಲಸ ಮಾಡಿರುವ ಭಾರತದ ಪ್ರಮುಖ ಛಾಯಾಗ್ರಾಹಕರ ಪೈಕಿ ಒಬ್ಬರಾದ ಪಿ.ಸಿ.ಶ್ರೀರಾಮ್ ಅವರ ಮಾತುಗಳನ್ನು ಇಲ್ಲಿ ಕನ್ನಡಕ್ಕೆ ಅನುವಾದಿಸಿಕೊಡಲಾಗಿದೆ...

ಪ್ರಶ್ನೆ: ನಿಮ್ಮ ಬಾಲ್ಯ, ಪ್ರಾಥಮಿಕ ಶಿಕ್ಷಣ, ಛಾಯಾಗ್ರಹಣದೆಡೆಗಿನ ಆರಂಭಿಕ ಸೆಳೆತ... ಇವುಗಳ ಬಗ್ಗೆ ಹೇಳ್ತೀರಾ?

ಪಿ.ಸಿ.ಶ್ರೀರಾಮ್: ನನ್ನ ಶಾಲಾದಿನಗಳು ಅಷ್ಟಾಗಿ ...ನ್ನಾಗಿಲ್ಲ. ಶಾಲೆಗೆ ಹೋಗುತ್ತಿದ್ದೆನಾದರೂ ಅಲ್ಲಿ ಏನು ...ಡೆಯುತ್ತಿತ್ತು ಅನ್ನುವುದರ ಬಗ್ಗೆ ನನಗೆ ಇನ್ನೂ ...ರ್ಥವಾಗಲಿಲ್ಲ. ಪ್ರಶ್ನೆಪತ್ರಿಕೆಗಳಲ್ಲಿ ಏನಿರುತ್ತಿತ್ತು, ಅದಕ್ಕೆಲ್ಲ ...ಯಾಕೆ ಉತ್ತರ ಬರೆಯಬೇಕು ಅಂತೆಲ್ಲಾ ಯೋಚಿಸುತ್ತಿದ್ದೆ. ...ಷ್ಟಕ್ಕೂ ಆಗಿನ ವಯಸಿನಲ್ಲಿ ನಾನೊಬ್ಬ ಡಿಸ್ಟರ್ಬ್ಡ್ ಚೈಲ್ಡ್ ...ಗಿದ್ದೆ! ನೀವು ನಂಬುತ್ತೀರೋ, ಬಿಡುತ್ತೀರೋ ನಾನು ...ಬರೆದ ಯಾವ ಪರೀಕ್ಷೆಯಲ್ಲೂ ಪಾಸ್ ಆಗಿದ್ದಿಲ್ಲ. ಅಷ್ಟೇ ...ಕೆ ಮುಂದೆ ಮದ್ರಾಸ್ ಫಿಲಂ ಇನ್‌ಸ್ಟಿಟ್ಯೂಟ್ ಸೇರಿದ ಮೇಲೆ ಅಲ್ಲಿ ನಡೆದ ಎಕ್ಸಾಮ್‌ನಲ್ಲೂ ನಾನು ಪಾಸ್ ...ಗಲಿಲ್ಲ. ಅವತ್ತು ನನಗೆ ನಾನೇ ಮಾಡಿಕೊಂಡ ಒಂದು ...ಸಂಕೇತೆಂದರೆ 'ಇನ್ನೆಂದೂ ಯಾವುದೇ ಎಕ್ಸಾಮ್ ...ಬರೆಯಬಾರದು!' ಅದೇ ರೀತಿ ಅಲ್ಲಿಂದಾಚೆಗೆ ನಾನು ಯಾವುದೇ ಎಕ್ಸಾಮ್ ಬರೆಯಲಿಲ್ಲ. ನಿಜವಾದ ಜಗತ್ತು ...ನನಗೆ ಅರ್ಥವಾಗಿದ್ದು, ನಿಜವಾದ ಶಿಕ್ಷಣ ನನಗೆ ಸಿಕ್ಕಿದ್ದು ಇನ್‌ಸ್ಟಿಟ್ಯೂಟ್ ಸೇರಿದ ಮೇಲೆಯೇ. ನಾನು ಹುಚ್ಚನಂತೆ ...ಓದಲು ಶುರು ಮಾಡಿಕೊಂಡಿದ್ದು ಆ ದಿನಗಳಲ್ಲೇ. ನನ್ನೊಳಗೆ ...ಸಾಕಷ್ಟು ಪರಿವರ್ತನೆಯಾಗಿದ್ದು ಕೂಡ ಆಗಲೇ. ನನ್ನೊಳಗೆ ...ಮೊದಮೊದಲಿಗೆ ಛಾಯಾಗ್ರಹಣದತ್ತ ಆಸಕ್ತಿ ...ಹುಟ್ಟಿಕೊಂಡಿದ್ದು ನನ್ನ ತಾತನ ಮೂಲಕ; ನನ್ನ ತಾತ ...ರ್ ಫೋಟೋಗ್ರಾಫರ್ ಆಗಿದ್ದವರು. ಅವರೊಬ್ಬ ...ತೋಟಗಾರಿಕಾ ತಜ್ಞರೂ ಆಗಿದ್ದರು. ನನ್ನ ಕೈಗೆ ...ಮೊಟ್ಟಮೊದಲ ಬಾರಿಗೆ ಕ್ಯಾಮೆರಾ ಕೊಟ್ಟವರೂ ಅವರೇ. ...ನು ಫೋಟೋಗಳನ್ನು ಕ್ಲಿಕ್ಕಿಸುತ್ತಿದ್ದೆ. ಫೋಟೋಗ್ರಫಿ ...ತೆಗಿನ ಆಸಕ್ತಿ ನನಗೆ ಅಲ್ಲಿಂದ ಶುರುವಾಯಿತು.

ಪ್ರಶ್ನೆ: ಕ್ಯಾಮೆರಾ ಮೂಲಕ ನಿಮ್ಮನ್ನು ನೀವು ...ಡುಕೊಳ್ಳಲು ಸಾಧ್ಯವಾಯಿತಾ?

ಪಿ.ಸಿ.ಶ್ರೀರಾಮ್: ಖಂಡಿತವಾಗಿ. ನಿರಂತರವಾಗಿ ನಾನು ...ಫೋಟೋಗಳನ್ನು ಕ್ಲಿಕ್ ಮಾಡುತ್ತಾ ಹೋದಂತೆಲ್ಲಾ ನನಗೆ ...ನೇ ಬೇರೆಯ ಬಗೆಯಲ್ಲಿ ಪರಿಚಯವಾಗುತ್ತಾ ಹೋದೆ. ...ನು ಆವರೆಗೆ ಕಂಡಿರದ ಪ್ರಪಂಚವೊಂದು ನನಗೆ ...ಕಾಣಿಸಲಾರಂಭಿಸಿತು. ನನ್ನ ಶಾಲಾದಿನಗಳಲ್ಲಿ ಹವ್ಯಾಸವಾಗಿ ...ಆರಂಭವಾದ ಛಾಯಾಗ್ರಹಣ ಕ್ರಮೇಣ ನನ್ನನ್ನು ಸಂಪೂರ್ಣ ...ತನ್ನ ತೆಕ್ಕೆಗೆ ಎಳೆದುಕೊಳ್ಳಲಾರಂಭಿಸಿತು. ಒಬ್ಬನೇ ಎಲ್ಲೆಂದರಲ್ಲಿ ...ಹೋಗಿ ಫೋಟೋಗಳನ್ನು ತೆಗೆಯಲು ಆರಂಭಿಸಿದೆ. ...ಗಲಾದರೂ ನಿಮಗೆ ವೈವಿಧ್ಯಮಯ ಕ್ಯಾಮೆರಾಗಳು ...ನ್ಯ ಇವೆ. ಕ್ಲಿಕ್ಕಿಸಬಹುದು, ಶೂಟ್ ಮಾಡಬಹುದು, ...ಡಿಯೋಗೆ ಹೋಗಿ ಪ್ರಿಂಟ್ ಹಾಕಿ ನೋಡಬಹುದು. ...ಇವೆಲ್ಲ ಸೌಕರ್ಯಗಳು ಇರಲಿಲ್ಲ. ಆಗೆಲ್ಲಾ ನಾನು ...ತ್ರಿ ಹೊತ್ತಿನಲ್ಲಿ ಒಬ್ಬನೇ ಕ್ಯಾಮೆರಾ ಹಿಡಿದುಕೊಂಡು ...ರಗೆ ಅಲೆಯಲು ಹೋಗುತ್ತಿದ್ದೆ. ಚಂದಿರನನ್ನು ಸೆರೆ ...ಹಿಡಿಯಲು ಪ್ರಯತ್ನಿಸುತ್ತಿದ್ದೆ. ಆ ಮೂಲಕ ನನ್ನ ...ಕನಸುಗಳನ್ನೂ ಕೂಡ... ಕನಸುಗಳನ್ನು ಶೂಟ್ ಮಾಡುವುದು ...ಹೇಗೆ? ಅದೊಂದು ಕಲ್ಪನೆ ಅಥವಾ ಹೊಳಹು ಮಾತ್ರ, ...ಜೊತೆಗೆಯೇ ಬಾಲಿಶ ಕೂಡ. ಹಾಗಾಗಿ ಯಾವಾಗಲೂ ...ನನ್ನನ್ನು ಕಾಡುತ್ತಿದ್ದ ಒಂದೇ ಪ್ರಶ್ನೆ ಎಂದರೆ 'ಚಂದಿರನನ್ನು ...ಹೇಗೆ ಸೆರೆ ಹಿಡಿಯುವುದು? ರಾತ್ರಿಯನ್ನು ಹೇಗೆ ಸೆರೆ ...ಹಿಡಿಯುವುದು? ಕನಸುಗಳನ್ನು ಹೇಗೆ ಸೆರೆ ...ಹಿಡಿಯುವುದು?' ಅದೇರೀತಿ ಎಷ್ಟೋ ಬಾರಿ ನನ್ನ ...ರೂಮಿನಲ್ಲಿ ಕೂತು ಕಿಟಕಿ ಮೂಲಕ ಏನೇನೆಲ್ಲಾ ಸೆರೆ ...ಹಿಡಿಯಬಹುದು, ರೂಮಿನ ಒಳಗಿರುವ ಯಾವ್ಯಾವ ...ವಸ್ತುಗಳನ್ನು ಹೇಗೆಲ್ಲಾ ಶೂಟ್ ಮಾಡಬಹುದು ಅಂತೆಲ್ಲಾ ...ಯೋಚಿಸುತ್ತಿದ್ದೆ. ಈಗಲೂ ಆ ನೆಗೆಟಿವ್‌ಗಳು ನನ್ನ ...ಬಳಿ ಇದ್ದಾವೆ. ನೀವು ನೋಡಬಹುದು. ನನಗೆ ಈಗಲೂ ...ನೆನಪಿದೆ ಒಂದು ರಾತ್ರಿ, ತುಂಬಾ ಹೊತ್ತಿನವರೆಗೆ ...ಯಲ್ಲಿ ಕಾಯ್ದುಕೊಂಡು ಚಂದಿರನನ್ನು ಸೆರೆ ಹಿಡಿದಿದ್ದೆ. ನನ್ನೊಳಗೆ ಕನಸುಗಳಿದ್ದವು. ಆ ಕನಸುಗಳು ನನಸಾಗಬೇಕಾದರೆ ನಾನು ಪಕ್ಕಾ ರೆಡಿಯಾಗಬೇಕು ಅಂತ ತೀರ್ಮಾನಿಸಿದೆ. ಇನ್‌ಸ್ಟಿಟ್ಯೂಟ್ ಸೇರಿಕೊಳ್ಳಬೇಕು ಅನ್ನುವ ಆಲೋಚನೆ ಆವಾಗಲೇ ಹೊಳೆದದ್ದು. ನಾನು ಇನ್‌ಸ್ಟಿಟ್ಯೂಟ್ ಸೇರಿದೆ. ಆ ದಿನಗಳಲ್ಲಿ ಯಾರೂ ಹೆಚ್ಚಾಗಿ ಇನ್‌ಸ್ಟಿಟ್ಯೂಟ್‌ಗಳಿಗೆ ಹೋಗುವ ಆಸಕ್ತಿ ತೋರುತ್ತಿರಲಿಲ್ಲ. ನಾನು ಹೋದೆ. ನಿಜಕ್ಕೂ ಅಲ್ಲಿ ಕಠಿಣ ಪರಿಶ್ರಮದಿಂದ ಅಧ್ಯಯನ ನಡೆಸಿದೆ. ಒಂದೊಂದು ಕ್ವೆಶ್ಚನ್ ಪೇಪರ್‌ಗೂ ಕಷ್ಟ ಪಟ್ಟೆ. ಈಗೆಲ್ಲಾ ಸಿನಿಮಾ ಫ್ಯಾಶನ್ ಆಗಿಬಿಟ್ಟಿದೆ. ಶ್ರೀಮಂತರ ಮಕ್ಕಳು ಮೆಡಿಕಲ್ ಸೀಟ್ ಸಿಕ್ಕಿಲ್ಲ ಅಂದರೆ ಫಿಲಂ ಇನ್‌ಸ್ಟಿಟ್ಯೂಟ್‌ಗಳ ಕಡೆ ಮುಖ ಮಾಡುವುದನ್ನು ನೀವು ಕಾಣುತ್ತೀರಿ. ತಮಿಳುನಾಡು ಸರ್ಕಾರವೂ ಒಬ್ಬೊಬ್ಬ ಫಿಲಂ ಇನ್‌ಸ್ಟಿಟ್ಯೂಟ್ ವಿದ್ಯಾರ್ಥಿಗೂ ಲಕ್ಷ ರೂಪಾಯಿಗಳಿಗೂ ಮೀರಿ ನೆರವಾಗುತ್ತಿದೆ. ಆದರೆ ಭಾರತದ ಇತರ ರಾಜ್ಯಗಳಲ್ಲಿನ ಸರ್ಕಾರಗಳೇಕೆ ಈ ದಾರಿಯನ್ನು ಅನುಸರಿಸುತ್ತಿಲ್ಲ ಅನ್ನುವುದು ನನ್ನಲ್ಲಿ ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ನಾನು ಮೊದಲ ಬಾರಿ ಇನ್‌ಸ್ಟಿಟ್ಯೂಟ್‌ಗೆ ಸೇರುತ್ತಿದ್ದಂತೆಯೇ ಕಲಿಯಲು ಶುರು ಮಾಡಿದೆ. ಕಲಿಕೆಗೆ ಕೊನೆ ಎಂಬುದಿಲ್ಲ. ಅಲ್ಲಿ 'ಡ್ಯೂನ್' ಎಂಬ ಚಿತ್ರವನ್ನು ನೋಡಿದೆ. ಆನಂತರ ನೋಡಿದ್ದು 'ಫೋರ್ ಹಂಡ್ರೆಡ್ ಬ್ಲೋಸ್'. ಆ ಚಿತ್ರಗಳನ್ನು ನೋಡಿದ ನಂತರ ಹೀಗೂ ಕ್ಯಾಮೆರಾ ವರ್ಕ್ ಮಾಡಬಹುದಾ? ಅಂತ ಅಚ್ಚರಿಪಟ್ಟೆ. ನೀವು ಸಾಮಾನ್ಯವಾಗಿ ಥಿಯೇಟರ್‌ಗಳಲ್ಲಿ ಒಂದು ಬಗೆಯ ಕ್ಯಾಮೆರಾ ವರ್ಕ್ ನೋಡಿರುತ್ತೀರಿ. ಅದು ಇಂಗ್ಲಿಷ್ ಅಥವಾ ಹಿಂದಿ ಅಥವಾ ಇನ್ಯಾವುದೇ ಭಾಷೆಯ ಸಿನಿಮ



ಆಗಿರಬಹುದು.. ಕ್ಯಾಮೆರಾ ವರ್ಕ್ ಅಂದರೆ ಹಾಗೇನೆ ಇರಬೇಕು, ಅಥವಾ ಹೀಗೇನೆ ಇರಬೇಕು ಅಂತ ಫಿಕ್ಸ್ ಆಗಿರುತ್ತೀರಿ. ಆದರೆ 'ಫೋರ್ ಹಂಡ್ರೆಡ್ ಬ್ಲೋಸ್' ನೋಡಿದರೆ ಮಾಮೂಲಿ ಚಿತ್ರಗಳಲ್ಲಿನ ಕ್ಯಾಮೆರಾ ವರ್ಕ್ ಅಲ್ಲಿರುವುದಿಲ್ಲ. ಅದು ತೀರಾ ಭಿನ್ನ. ನನಗೆ ಅಂತಹ ವರ್ಕ್ ಮಾಡಲು ಇಷ್ಟ. ಯಾಕೆಂದರೆ ನಾನೊಬ್ಬ ಡಿಸ್ಟರ್ಬ್ಡ್ ಚೈಲ್ಡ್! ನನ್ನ ಕುಟುಂಬದ ಹಿನ್ನೆಲೆ ಇತ್ಯಾದಿಗಳನ್ನು ಗಮನಿಸಿದಾಗ ನನ್ನಂಥ ಡಿಸ್ಟರ್ಬ್ಡ್ ಚೈಲ್ಡ್ ಈ ಸಮಾಜದಲ್ಲಿ ಸವಾಲುಗಳನ್ನು ಎದುರಿಸಿ ಮುಂದೆ ಬರಲು ಸಾಕಷ್ಟು ಪರಿಶ್ರಮ ಪಡಬೇಕು. ನನ್ನ ಛಾಯಾಗ್ರಹಣದ ಆಸಕ್ತಿಗೆ, ಕನಸಿಗೆ, ಗುರಿಗೆ ನನ್ನ ತಾಯಿಯ ಸಂಪೂರ್ಣ ಬೆಂಬಲವಿತ್ತು. ಆದರೆ ನನ್ನ ತಂದೆ ಯಾವಾಗಲೂ 'ನನ್ನ ಮನೆತನದ ಗೌರವ ಕೆಡಿಸಲೆಂದೇ ನೀನು ಹುಟ್ಟಿರುವೆ' ಎಂದೇ ಹೇಳುತ್ತಿದ್ದರು! ಆದರೂ ನನ್ನ ತಂದೆಯ ಬಗ್ಗೆ ನನಗೆ ಕೋಪವಿಲ್ಲ, ನನ್ನ ತಂದೆಯ ಜಾಗದಲ್ಲಿ ಯಾರೇ ಇದ್ದರೂ ಹಾಗೆಯೇ ಅನ್ನುತ್ತಿದ್ದರು. ನನ್ನ ತಾಯಿಯ ಅಂಕಲ್ ಡಾಕ್ಟರ್. ನಾನೊಬ್ಬ ಡಿಸ್ಟರ್ಬ್ಡ್ ಚೈಲ್ಡ್ ಅನ್ನುವುದನ್ನು ನನ್ನ ತಾಯಿ ಆ ವ್ಯಕ್ತಿಗೆ ಹೇಳಿದ್ದರು ಅಂತ ಕಾಣುತ್ತೆ, ಅದಕ್ಕವರು 'ಇನ್ ಸರ್ಚ್ ಆಫ್ ದಿಬ್ಸ್' ಎನ್ನುವ ಒಂದು ಪುಸ್ತಕವನ್ನು ನನ್ನ ತಾಯಿಗೆ ಕೊಟ್ಟಿದ್ದರು. ನನ್ನ ತಾಯಿ ಕೆಲವೊಮ್ಮೆ ಆ ಪುಸ್ತಕದ ಕೆಲವು ಪುಟಗಳನ್ನು ನನ್ನೆದುರು ಓದಿದ್ದೂ ಉಂಟು. ಒಬ್ಬ ಡಿಸ್ಟರ್ಬ್ಡ್ ಚೈಲ್ಡ್ ಕುರಿತಾದ ಬುಕ್ ಅದಾಗಿತ್ತು, ಮುಂದೊಮ್ಮೆ ನಾನು ಇನ್‌ಸ್ಟಿಟ್ಯೂಟ್ ಸೇರಿಕೊಂಡ ನಂತರ ಆ ಪುಸ್ತಕವನ್ನು ಓದಿದೆ. ನಿಜಕ್ಕೂ ಅದೊಂದು ಅದ್ಭುತ ಪುಸ್ತಕ. ನಾನು ನನ್ನ ಬದುಕನ್ನು ತೀವ್ರವಾಗಿ ಪ್ರೀತಿಸಲು, ಸವಾಲಾಗಿ ಸ್ವೀಕರಿಸಲು ಆ ಪುಸ್ತಕ ಸಹಕರಿಸಿತು ಅನ್ನಬಹುದು. ಇನ್‌ಸ್ಟಿಟ್ಯೂಟ್‌ನಲ್ಲಿ ಕೊನೆಯ ವರ್ಷಕ್ಕೆ ಬರುವಷ್ಟರಲ್ಲಿ ಏನನ್ನಾದರೂ ಸಾಧಿಸಲೇಬೇಕು ಅನ್ನಿಸತೊಡಗಿತು.

ಪ್ರಶ್ನೆ: ನೀವು ಇನ್‌ಸ್ಟಿಟ್ಯೂಟ್‌ನಲ್ಲಿ ಇದ್ದ ಕಾಲದಲ್ಲಿ ನೋಡಿದಂತಹ ಸಿನಿಮಾಗಳು ಯಾವುವು?

ಪಿ.ಸಿ.ಶ್ರೀರಾಮ್: ಇನ್‌ಸ್ಟಿಟ್ಯೂಟ್ ಸೇರುವ ಮೊದಲೇ ನಾನು ನೋಡಿದ ಸಿನಿಮಾಗಳೆಂದರೆ 'ಮ್ಯಾಕೆನ್ನಾಸ್ ಗೋಲ್ಡ್' ಮತ್ತು 'ಟವರಿಂಗ್ ಇನ್‌ಫಾರ್ನೋ' ಎಂಬ ಇಂಗ್ಲಿಷ್ ಸಿನಿಮಾಗಳು. ಹಾಗೆಯೇ 'ಒನ್ ಫ್ಲ್ಯೂ ಒವರ್ ದಿ ಕುಕ್ಕೂಸ್ ನೆಸ್ಟ್' ನನ್ನನ್ನು ಬೆರಗುಗೊಳಿಸಿದ ಅದ್ಭುತ ಸಿನಿಮಾ. ಇನ್ನು ಇನ್‌ಸ್ಟಿಟ್ಯೂಟ್ ಸೇರಿದ ಮೇಲೆ 'ಫೋರ್ ಹಂಡ್ರೆಡ್ ಬ್ಲೋಸ್' ನೋಡಿದೆ. ಈ ಬಗ್ಗೆ ಮೊದಲೇ ಹೇಳಿದ್ದೇನೆ. ಅದೇ ರೀತಿ 'ಆಲ್ ದಿ ಜಾಜ್', 'ವುಡ್‌ಸ್ಟಾಕ್' ಚಿತ್ರಗಳನ್ನು ನೋಡಿದೆ. ಇನ್ನು ನನ್ನನ್ನು ಬಲವಾಗಿ ಕಾಡಿದ ಸಿನಿಮಾ ಅಂದರೆ ಕೆ.ಬಾಲಚಂದರ್ ಅವರ 'ಅಂದನಾಳ್'. ಹಾಗೇನೆ ನಿಮಯ್ ಘೋಷ್ ಅವರ 'ಚಿನ್ನಮುಲ್' ಕೂಡ ಆ ಕಾಲಕ್ಕೆ ನಾನು ನೋಡಿದ ಒಳ್ಳೆಯ ಸಿನಿಮ. ದೇಶ ವಿಭಜನೆಯ ಸಂದರ್ಭದಲ್ಲಿ ಶೂಟ್ ಮಾಡಲಾಗಿದ್ದ ಈ ಬಂಗಾಳಿ ಚಿತ್ರ ನನ್ನನ್ನು ಕಾಡಿದ್ದು ಸುಳ್ಳಲ್ಲ. ಅದೇ ಬಗೆಯಲ್ಲಿ 'ಕಾಗಜ್ ಕೆ ಫೂಲ್', 'ಕಲ್ಪನಾ' ಸೇರಿದಂತೆ ಶಿವಾಜಿ ಗಣೇಶನ್ ಅಭಿನಯಿಸಿದ ಒಂದಿಷ್ಟು ಚಿತ್ರಗಳು ನನ್ನ ಮೇಲೆ ಪ್ರಭಾವ ಬೀರಿವೆ.

ಪ್ರಶ್ನೆ: ನಿಮ್ಮ ಛಾಯಾಗ್ರಹಣದ ಮೇಲೆ ಅಂದರೆ ಲೈಟಿಂಗ್, ವಿಶುಯಲ್ ಪ್ಯಾಟರ್ನ್ಸ್, ಫ್ರೇಮಿಂಗ್... ಮುಂತಾದವುಗಳ ಕುರಿತಂತೆ ಯಾರಾದರೂ ಪರಿಣಾಮ ಬೀರಿದ್ದುಂಟಾ?

ಪಿ.ಸಿ.ಶ್ರೀರಾಮ್: ನಾನು ಈವರೆಗೆ ಯಾವುದೇ ಚಿತ್ರವನ್ನು ಫೋಟೋಗ್ರಫಿ ಉದ್ದೇಶದಿಂದ ನೋಡಿಲ್ಲ. ಇಲ್ಲಿ ಒಂದು ಸಂಗತಿಯನ್ನು ನೆನಪಿಸಿಕೊಳ್ಳುತ್ತೇನೆ... ಪುಣೆ ಫಿಲಂ ಫೆಸ್ಟಿವಲ್‌ನಲ್ಲಿ ದೇಶವಿದೇಶಗಳಿಂದ ಅಲ್ಲಿಗೆ ಬಂದಿದ್ದ ಅಷ್ಟೂ ಛಾಯಾಗ್ರಾಹಕರ ಪೈಕಿ ವಿಲ್ಮೊಸ್ ಸಿಗ್ಮಂಡ್ ಎಂಬ ಛಾಯಾಗ್ರಾಹಕನೊಬ್ಬನನ್ನು ಪತ್ತೆ ಹಚ್ಚಬೇಕಿತ್ತು. ಯಾಕೆಂದರೆ ನನ್ನ ಅಸಿಸ್ಟೆಂಟ್‌ಗಳಲ್ಲಿ ಕೆಲವರು ಆತನೊಟ್ಟಿಗೆ ಕೆಲಸ ಮಾಡಲು ಬಯಸಿದ್ದರು. ಅದೂ ಕಮರ್ಷಿಯಲ್ ಪರ್ಪಸ್‌ಗಾಗಿ! ಯಾಕೆಂದರೆ ಆತ ಟರ್ಕಿಯಲ್ಲಿ ಒಂದು ಸಿನಿಮ ಶೂಟ್ ಮಾಡುವ ವಿಷಯ ನನ್ನ ಅಸಿಸ್ಟೆಂಟ್‌ಗಳಿಗೆ ಹೇಗೋ ಗೊತ್ತಾಗಿಬಿಟ್ಟಿತ್ತು. ನನಗೆ ಆತನ ಪರಿಚಯವೂ ಆಯಿತು. ನಮ್ಮ ಹುಡುಗರ ಮನಸ್ಸಿನಲ್ಲಿದ್ದ ಇಂಗಿತವನ್ನು ಆತನೆದುರು ಪ್ರಸ್ತಾಪ ಕೂಡ ಮಾಡಿದೆ. 'ನೋಡೋಣ' ಎಂದು ಹೇಳಿಹೋದ ಆ ಆಸಾಮಿ ಮುಂದೊಮ್ಮೆ ಬೆಳಗ್ಗಿನ ಜಾವ ಮೂರು ಗಂಟೆಗೆ ಕರೆ ಮಾಡಿ 'ಕಳಿಸಿಕೊಡಿ' ಅಂದಿದ್ದ!

ಪ್ರಶ್ನೆ: ನೀವು ಯಾರ ಬಳಿಯಾದರೂ ಸಹಾಯಕರಾಗಿ ಕೆಲಸ ಮಾಡಿದ್ದುಂಟಾ?

ಪಿ.ಸಿ.ಶ್ರೀರಾಮ್: ನಾನು ಯಾರ ಬಳಿಯೂ ಅಸಿಸ್ಟೆಂಟ್ ಆಗಿ ವರ್ಕ್ ಮಾಡಿಲ್ಲ. ನಾನು ಇನ್‌ಸ್ಟಿಟ್ಯೂಟ್‌ನಲ್ಲಿ ಕಲಿಯುತ್ತಿದ್ದ ಸಂದರ್ಭದಲ್ಲಿ ಶೂಟಿಂಗ್ ಸ್ಪಾಟ್‌ಗಳಿಗೆ ಹೋಗಿ ಅಬ್ಸರ್ವ್ ಮಾಡುತ್ತಿದ್ದೆನಷ್ಟೇ. ನನ್ನ ಸ್ನೇಹಿತನೊಬ್ಬನ ತಂದೆ ಒಬ್ಬ ನಿರ್ದೇಶಕರಾಗಿದ್ದರು. ಶಾಲೆಗೆ ರಜೆ ಇದ್ದ ದಿನಗಳಲ್ಲಿ ಅವರು ಶೂಟಿಂಗ್ ಮಾಡುತ್ತಿದ್ದ ಲೊಕೇಶನ್‌ಗಳಿಗೆ ಹೋಗಿ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಇನ್‌ಸ್ಟಿಟ್ಯೂಟ್ ದಿನಗಳಲ್ಲಿ ಪ್ರತಿ ದಿನ ಬೆಳಗ್ಗೆ ಆರು ಗಂಟೆಗೆ ಸತ್ಯ ಸ್ಟುಡಿಯೋಸ್‌ಗೆ ಹೋಗುತ್ತಿದ್ದೆ. ಅಲ್ಲಿ ಅವರೆಲ್ಲ ಏನು ಮಾಡುತ್ತಾರೆ ಅಂತ ಗಮನಿಸುತ್ತಿದ್ದೆ. ಒಮ್ಮೆ ಅವರೊಟ್ಟಿಗೆ ಮಧುರೈನಿಂದ ಸೇಲಂಗೆ ಹೋಗಿ ನಲವತ್ತು ದಿನಗಳ ಕಾಲ ನಾಲ್ಕನೇ ಅಥವಾ ಐದನೇ ಅಸಿಸ್ಟೆಂಟ್ ರೂಪದಲ್ಲಿ ಶೂಟಿಂಗ್‌ನಲ್ಲಿ ತೊಡಗಿಕೊಂಡೆ. ನಾನು ನಯಾಪೈಸೆಯನ್ನೂ ಕೊಡಲಿಲ್ಲ; ನನ್ನಿಂದ ನಿರ್ಮಾಪಕರಿಗೆ ಲಾಸ್ ಆಗಿರಬಹುದೇನೋ ಗೊತ್ತಿಲ್ಲ!

ಪ್ರಶ್ನೆ: ನೀವು ಸ್ವತಂತ್ರ ಕ್ಯಾಮೆರಾಮ್ಯಾನ್ ಆಗಿ ನಿಮ್ಮ ಮೊದಲ ಸಿನಿಮಾದಲ್ಲಿ ಕೆಲಸ ಮಾಡಿದ್ದು ಹೇಗೆ ಹಾಗಾದರೆ?

ಪಿ.ಸಿ.ಶ್ರೀರಾಮ್: ನಾನು ಮೊದಲಿಗೆ ಮಾಡಿದ್ದು ಒಂದು 16 ಎಂ.ಎಂ. ಸಿನಿಮಾ. ಯುವಕರೇ ಸೇರಿಕೊಂಡು ಮಾಡಿದ್ದ ಆ ಚಿತ್ರ ಬೆಂಗಳೂರಿನಲ್ಲೇ ತಯಾರಾಗಿ ಅಲ್ಲೇ ಬಿಡುಗಡೆಯಾಗಿತ್ತು. ದುಡ್ಡೇ ಇಲ್ಲದೆ ಮಾಡಿದ ಸಿನಿಮಾ ಅದು. ಆ ಸಿನಿಮಾ ಮಾಡಲು ನಿಜಕ್ಕೂ ಯಾರ ಬಳಿಯೂ ದುಡ್ಡಿರಲಿಲ್ಲ. ಅದೊಂದು ಫಿಕ್ಷನ್ ಫಿಲಂ. ಕ್ಯಾಂಡಿಡ್ ಕ್ಯಾಮೆರಾ ಜೊತೆ ಒಂದು ಪ್ಯಾರಾ-ಬೋಲೆಕ್ಸ್ ಕ್ಯಾಮೆರಾ ಬಳಸಿ ಶೂಟ್ ಮಾಡಿದ್ದು. ಆ ಪ್ರಾಜೆಕ್ಟ್ ಹಿಂದೆ ಇದ್ದ ವ್ಯಕ್ತಿ ಈಗ ಅಮೇರಿಕದಲ್ಲಿದ್ದಾರೆ. ಆತ 'ನಾಯಗನ್' ಚಿತ್ರದ ಒಂದು ಫೈಟ್ ಸೀಕ್ವೆನ್ಸ್‌ನಲ್ಲಿ ಕಮಲ್ ಹಾಸನ್ ಜೊತೆ ಒಂದು ಕಡೆ ಕಾಣಿಸಿಕೊಳ್ಳುತ್ತಾರೆ. ಆತ ಸ್ವೀಡನ್ನಿನಲ್ಲಿದ್ದಾಗ ಸಾಕಷ್ಟು ಸಿನಿಮಾ ನೋಡಿದ್ದಲ್ಲದೆ ನ್ಯೂಯಾರ್ಕಿನಲ್ಲಿ ಒಂದು ಸಣ್ಣ ಸಿನಿಮಾ ಮಾಡಲು ಕೂಡ ಪ್ರಯತ್ನಿಸಿದ್ದರು. ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಎಂದರೆ ಅಂದು ದುಡ್ಡಿಲ್ಲದೆ ಮಾಡಿದ್ದ ಸಿನಿಮಾ ನಿಮಗೆ ನೋಡಲಿಂದು ಸಿಗುವುದಿಲ್ಲ ಎಂಬುದನ್ನು ನೆನಪಿಸಿಕೊಳ್ಳಲು. ಆ ಇಡೀ ಚಿತ್ರವನ್ನು ಬೆಂಗಳೂರಿನ ಎಂ.ಜಿ.ರೋಡಿನಲ್ಲಿ ಶೂಟ್ ಮಾಡಿದ್ದೆವು. ಅದೊಂದು ಮೈಂಡ್ ಬ್ಲೋಯಿಂಗ್ ಎಕ್ಸ್‌ಪೀರಿಯನ್ಸ್. ಊಟಕ್ಕೂ ನಮ್ಮಲ್ಲಿ ಹಣವಿರಲಿಲ್ಲ. ಅಲ್ಪ ಸ್ವಲ್ಪ ಅನ್ನಕ್ಕೂ ಪರದಾಡುವಂತಾಗಿತ್ತು. ಶೂಟಿಂಗ್ ಮುಗಿಯುತ್ತಿದ್ದಂತೆಯೇ ಬೆಂಗಳೂರಿನ ಹೊರವಲಯದ ಹಳ್ಳಿಯೊಂದಕ್ಕೆ ಹೋಗಿ ಅಲ್ಲಿ ಅವರಿವರ ಮನೆಗಳಲ್ಲಿ ಬೇಡಿ ಊಟ ಮಾಡುತ್ತಿದ್ದೆವು. ಮತ್ತೆ ಮರುದಿವಸ ಎಂ.ಜಿ.ರೋಡಿಗೆ ಬಂದು ಶೂಟಿಂಗ್‌ನಲ್ಲಿ ನಿರತರಾಗುತ್ತಿದ್ದೆವು. ಒಟ್ಟು ಹದಿನೇಳೋ, ಹದಿನೆಂಟೋ ದಿನಗಳ ಕಾಲ ಶೂಟಿಂಗ್ ಮಾಡಿದೆವು. ಅದೊಂದು ಅದ್ಭುತ ಅನುಭವ. ಹಾಗೆಯೇ ಆಮೇಲೆ ಎಲ್ಲರೂ ಆಸ್ಪತ್ರೆ ಸೇರಿಕೊಂಡಿದ್ದೂ ಉಂಟು. ಆಮೇಲೆ ಇಂಥ ಚಿತ್ರಗಳನ್ನು ಮಾಡಬಾರದು ಅನ್ನಿಸಿತು. ಅದಾದ ಎರಡು ವರ್ಷ ನಾನು ಖಾಲಿ ಕುಳಿತೆ. ಆಮೇಲೆ ಪ್ರತಾಪ್ ಪೋಥನ್ 'ಮೀಂಡುಂ ಒರು ಕಾದಲ್ ಕಥೈ'ಗೆ ಆಫರ್ ಕೊಟ್ಟರು. ಒಪ್ಪಿಕೊಂಡೆ. ಆ ಚಿತ್ರಕ್ಕೂ ಸಣ್ಣ ಪ್ರಮಾಣದ ಹಣವಿತ್ತು. ಒಂದು ಹುಚ್ಚಾಸ್ಪತ್ರೆಯಲ್ಲಿ ಶೂಟ್ ಮಾಡಿದೆವು. ತಕ್ಷಣ ನನಗೆ 'ಕುಕ್ಕೂಸ್ ನೆಸ್ಟ್' ನೆನಪಾಗಿ ನಿಭಾಯಿಸಲು ಅನುಕೂಲವಾಯಿತು. ಆ ಚಿತ್ರ ಬರೋಬ್ಬರಿ ಎರಡು ವರ್ಷಗಳ ಕಾಲ ನಿಂತು ನಿಂತು ಕಂಪ್ಲೀಟಾಯಿತು. ಯಾಕೆಂದರೆ ಯಾವಾಗ ಕೈಯಲ್ಲಿ ಹಣವಿರುತ್ತೋ ಆಗ ಶೂಟಿಂಗ್ ಮಾಡೋದು, ಉಳಿದ ಸಮಯದಲ್ಲಿ ಸುಮ್ಮನಿರೋದು! ಕಡೆಗೂ ಚಿತ್ರ ಬಿಡುಗಡೆಯಾಯಿತು. ಕೆಲವೇ ಕೆಲವು ಪ್ರೇಕ್ಷಕರು ಅದನ್ನು ನೋಡಿದರು. ಚಿತ್ರಕ್ಕೆ ಪ್ರಶಸ್ತಿ ಬಂತು. ನಿಧಾನವಾಗಿ ಚಿತ್ರ ಹೆಸರಾಯಿತು. ನಾನೂ ಕೂಡ ಕೆಲವರಿಗೆ ಗೊತ್ತಾಗತೊಡಗಿದೆ. ಆಗಲೇ ನಾನು ಮಲಯಾಳಂ ಚಿತ್ರ ನಿರ್ದೇಶಕ ಫಜಿಲ್ ಅವರ ಚೊಚ್ಚಲ ಸಿನಿಮಾಗೆ ಕ್ಯಾಮೆರಾ ಹಿಡಿದದ್ದು. ಅಷ್ಟರಲ್ಲಿ ಮಣಿರತ್ನಂ ನನ್ನನ್ನು ಕರೆದರು.

ಪ್ರಶ್ನೆ: ಮಣಿರತ್ನಂ ಜೊತೆ ಕೆಲಸ ಮಾಡಿದ ಅನುಭವ ಹೇಗಿತ್ತು?

ಪಿ.ಸಿ.ಶ್ರೀರಾಮ್: ಮಣಿರತ್ನಂ ತಮ್ಮ 'ಮೌನರಾಗ'ಕ್ಕೆ ನನ್ನನ್ನು ಕರೆದರು. ಆಮೇಲೆ ಒಟ್ಟಿಗೆ ನಿರಂತರವಾಗಿ ನಾಲ್ಕು ಸಿನಿಮಾ ಮಾಡಿದೆವು. ಈ ಚಿತ್ರಗಳು ಹಿಟ್ ಆಗುತ್ತವೋ ಇಲ್ಲವೋ ಅನ್ನುವುದು ಆ ದಿನಗಳಲ್ಲಿ ನನಗೂ ಮಣಿರತ್ನಂ ಅವರಿಗೂ ನಿಜವಾಗಿಯೂ ಗೊತ್ತಿರಲಿಲ್ಲ. ನಮ್ಮಿಬ್ಬರ ಕಾಂಬಿನೇಶನ್ನಿನ ಒಂದೊಂದೇ ಚಿತ್ರಗಳು ಹಿಟ್ ಆಗುತ್ತಾ ಹೋದಂತೆ ಇಬ್ಬರೂ ಬೆಳೆಯುತ್ತಾ ಹೋದೆವು. ಲೈಟಿಂಗ್ ವಿಷಯದಲ್ಲಿ ನಾನು ಚಿತ್ರದಿಂದ ಚಿತ್ರಕ್ಕೆ ವಿಭಿನ್ನತೆ ಕಾಪಾಡಿಕೊಳ್ಳಲು ಯತ್ನಿಸುತ್ತಿದ್ದೆ. 'ಅಗ್ನಿನಕ್ಷತ್ರಂ' ಚಿತ್ರದಲ್ಲಿನ ಲೈಟಿಂಗ್‌ಗೂ 'ದೇವರ್ ಮಗನ್' ಚಿತ್ರದ ಲೈಟಿಂಗ್‌ಗೂ ಭಾರೀ ವ್ಯತ್ಯಾಸವಿದೆ. ಇದೊಂದು ಉದಾಹರಣೆಯಷ್ಟೇ.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 11-02-2015 RNI No. KARKAN2005/14648



ಅಪೂರ್ವದಲ್ಲಿ ಸುದೀಪ್

ಸದಾ ಒಂದಲ್ಲ ಒಂದು ರೀತಿಯಲ್ಲಿ ಕ್ರಿಯಾಶೀಲವಾಗಿರುವ ರವಿಚಂದ್ರನ್ ಒಂದು ಕಾಲದಲ್ಲಿ ಕನ್ನಡ ಚಿತ್ರರಂಗದ ದಿಕ್ಕನ್ನೇ ಬದಲಿಸಿದಂತಹ ಗ್ರೇಟ್ ತಂತ್ರಜ್ಞ. ಗಾಂಧಿನಗರದ ರೆಗ್ಯುಲರ್ ಸೂತ್ರಗಳೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳದ ರವಿಚಂದ್ರನ್ ಅವರದು ಯಾವಾಗಲೂ ಹೊಸತನಕ್ಕೆ ತುಡಿಯುವ ಜೀವ. ಈ ಕಾರಣಕ್ಕೇ ಸಿನಿಮಾ ಎಂದರೆ ರವಿಚಂದ್ರನ್, ರವಿಚಂದ್ರನ್ ಎಂದರೆ ಸಿನಿಮಾ ಎನ್ನುವ ಮಾತೂ ಕೂಡ ಒಂದು ಕಾಲದಲ್ಲಿತ್ತು.

ಆದರೆ ಬರುಬರುತ್ತಾ ಅದೇಕೋ ರವಿ ದಿನೇ ದಿನೇ ಸಪ್ಪೆಯಾಗತೊಡಗಿದರು. ಹೊಸತಲೆಮಾರಿನ ಪ್ರೇಕ್ಷಕರನ್ನು ರಂಜಿಸುವಲ್ಲಿ ರವಿ ಐಡಿಯಾಗಳು ಸೋಲುತ್ತಾ ಬಂದವು. 'ಮಲ್ಲ' ಚಿತ್ರದ ನಂತರ ರವಿಗೆ ಮತ್ತೊಂದು ಹಿಟ್ ಚಿತ್ರ ಕೊಡಲು ಸಾಧ್ಯವಾಗದೇ ಹೋದದ್ದು ನಿಜಕ್ಕೂ ಬೇಸರದ ಮಾತು. 'ದೃಶ್ಯ' ಹಿಟ್ ಚಿತ್ರವಾದರೂ ರವಿಚಂದ್ರನ್ ನಿರ್ದೇಶನದ ಚಿತ್ರವೊಂದು ಹಿಟ್ ಆಗಿಲ್ಲ. ವಿಜಯಕಾಂತ್ ಅಭಿನಯದ 'ರಮಣ' ತಮಿಳಿನಲ್ಲಿ ಸೂಪರ್ ಹಿಟ್ ಚಿತ್ರ ಅನ್ನಿಸಿಕೊಂಡಿದ್ದರೂ 'ಮಲ್ಲಿಕಾರ್ಜುನ' ಹೆಸರಿನಲ್ಲಿ ರವಿಗೆ ದೊಡ್ಡ ಸೋಲು ತಂದು ಕೊಟ್ಟಿತ್ತು. ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಅಂದರೆ ಇಂತಹ ಸೋಲುಗೆಲುವು ಎರಡನ್ನೂ ಕಂಡಿರುವ ರವಿಚಂದ್ರನ್, ಅರವತ್ತು ವರ್ಷದ ವ್ಯಕ್ತಿಯೊಬ್ಬ ಹತ್ತೊಂಬತ್ತು ವರ್ಷದ ಹುಡುಗಿಯೊಬ್ಬಳನ್ನು ಪ್ರೀತಿಸುವ ಕಥೆಯುಳ್ಳ 'ಅಪೂರ್ವ' ಚಿತ್ರದತ್ತ ಈಗ ಪೂರ್ತಿ ಗಮನ ಕೊಟ್ಟಿದ್ದಾರೆ. ತಮ್ಮ ಎಂದಿನ ಉತ್ಸಾಹದಿಂದ 'ಅಪೂರ್ವ'ದಲ್ಲಿ ತೊಡಗಿದ್ದಾರೆ.

ಸದಾ ಒಂದಲ್ಲ ಒಂದು ಬಗೆಯ ಅಚ್ಚರಿಗಳನ್ನು ಬಯಲು ಮಾಡುತ್ತಲೇ 'ಅಪೂರ್ವ'ದ ಬಗ್ಗೆ ನಿರೀಕ್ಷೆ ಹುಟ್ಟಿಸುತ್ತಿರುವ ರವಿ ಇದೀಗ 'ಅಪೂರ್ವ'ದಲ್ಲಿ ಸುದೀಪ್ ಕೂಡ ಒಂದು ಪಾತ್ರ ಮಾಡುತ್ತಿರುವುದರ ಬಗ್ಗೆ ಹೇಳಿದ್ದಾರೆ. ಆದರೆ ಸುದೀಪ್ ನಿರ್ವಹಿಸುತ್ತಿರುವ ಪಾತ್ರ ಎಂಥದ್ದು ಅನ್ನೋದು ಮಾತ್ರ ಹೇಳುತ್ತಿಲ್ಲ. ಒಟ್ಟಾರೆಯಾಗಿ ಏನೇ ಆಗಲಿ, ರವಿಚಂದ್ರನ್ ಮತ್ತೆ ಮೊದಲಿನಂತೆ ಚಾರ್ಮ್ ಕಂಡುಕೊಂಡು ಫಾರ್ಮ್‌ಗೆ ಬರಬೇಕು ಅನ್ನೋದು ಅವರ ಅಭಿಮಾನಿಗಳ ಆಶೆ. ಈ ಮೂಲಕ ಅವರಿಗೊಂದು ಆಲ್ ದಿ ಬೆಸ್ಟ್!

ಕಾಮ ಓ ಕಾಮ

'ಕಾಮ' ಎಂಬುದೊಂದು ಚಿತ್ರ ಕನ್ನಡದಲ್ಲಿ ತಯಾರಾಗಲು ಸಿದ್ಧತೆ ನಡೆಸಿಕೊಂಡಿದೆ. ಇದೇನು ಟೈಟಲ್ ಹಿಂಗಿದೆಯಲ್ಲಾ ಅಂತ ಗಾಬರಿಪಡಬೇಡಿ. ಈ ಚಿತ್ರದ ಟೈಟಲ್ ಕಾಮ ಅರ್ಥಾತ್ ಅಲ್ಪವಿರಾಮದ ಚಿಹ್ನೆ. ಜಿಯಾಉಲ್ಲಾ ಖಾನ್ ಎಂಬುವವರು ನಿರ್ದೇಶಿಸಲು ಮುಂದಾಗಿರುವ ಈ ಚಿತ್ರಕ್ಕೆ ಬಿ.ಎನ್. ವಾಣಿ ಕಾಂತರಾಜು ಎನ್ನುವವರು ಹಣ ಹಾಕುತ್ತಿದ್ದು ಇದೊಂದು ವಿಶಿಷ್ಟ ಕಾನ್ಸೆಪ್ಟ್ ಉಳ್ಳ ಸಿನಿಮಾ ಅನ್ನೋದು ನಿರ್ದೇಶಕರ ಭರವಸೆಯ ಮಾತು.

ಕಾಮ ಚಿತ್ರದ ಬಗ್ಗೆ ಅಪಾರವಾದ ಭರವಸೆ ಹೊಂದಿರುವ ಜಿಯಾಉಲ್ಲಾ ಖಾನ್ ಈ ಚಿತ್ರವನ್ನು ಬೆಂಗಳೂರು, ಮಡಿಕೇರಿ, ವಿರಾಜಪೇಟೆ, ಆಗ್ರಾ, ರಾಜಸ್ಥಾನ ಮತ್ತು ಪಾಕಿಸ್ತಾನಗಳಲ್ಲಿ ಒಟ್ಟು ನೂರಿಪ್ಪತ್ತು ದಿನಗಳಲ್ಲಿ ಚಿತ್ರೀಕರಿಸಲಿದ್ದಾರಂತೆ.

ಇದು ಕರ್ನಾಟಕದ ಮಟ್ಟಿಗೆ ಮಾತ್ರವಲ್ಲದೆ ವಿಶ್ವದ ಮಟ್ಟಿಗೆ ಬೇರೆಯದೇ ಬಗೆಯ ಚಿತ್ರ ಎಂಬುದು ಜಿಯಾಉಲ್ಲಾ ಅವರ ಮಾತು. ಕೀರ್ತನ ಎಂಬುವವರು ಸಂಗೀತ ಕೊಟ್ಟಿರುವ ಈ ಸಿನಿಮಾಗೆ ನಟನಟಿಯರನ್ನು ಇನ್ನಷ್ಟೇ ಆಯ್ಕೆ ಮಾಡಬೇಕಿದೆಯಂತೆ. ಸೆಕ್ಸ್ ಮತ್ತು ಲವ್ ನಡುವಣ ಯುದ್ಧ ಎಂಥದ್ದು ಅನ್ನೋದನ್ನು ಈ ಚಿತ್ರದ ಮೂಲಕ ತೆರೆಗೆ ತರಲು ಜಿಯಾ ಹೊರಟಿದ್ದಾರಂತೆ. ಬರೀ ಮಾತಾಡುವವರೇ ತುಂಬಿಕೊಂಡಿರುವ ಗಾಂಧಿನಗರದಲ್ಲಿ ಕಾಮ ಎಲ್ಲಿಗೆ ಬಂದು ನಿಲ್ಲುತ್ತದೆ ಅನ್ನೋದನ್ನು ಕಾದುನೋಡಬೇಕು.

ರಣವಿಕ್ರಮ ಇಟಲಿಗೆ

ಮೊನ್ನೆಮೊನ್ನೆಯಷ್ಟೇ ಜಿಂದಾಲ್ ಫ್ಯಾಕ್ಟರಿಯಲ್ಲಿ ಕ್ಲೈಮ್ಯಾಕ್ಸ್ ಶೂಟಿಂಗ್ ಮುಗಿಸಿದ 'ರಣವಿಕ್ರಮ' ಚಿತ್ರದ ತಂಡ ಇದೀಗ ಒಂದಿಷ್ಟು ಭಾಗದ ಚಿತ್ರೀಕರಣಕ್ಕಾಗಿ ಇಟಲಿಗೆ ಹೋಗುವ ಸೂಚನೆ ನೀಡಿದೆ. ಮೊದಲಿಗೆ ನಿರ್ದೇಶಕ ಪವನ್ ಒಡೆಯರ್ ಇಟಲಿಗೆ ಹೋಗಿ ಒಂದಿಷ್ಟು ಲೊಕೇಶನ್‌ಗಳನ್ನು ನೋಡಿದ ತರುವಾಯ ಚಿತ್ರತಂಡವನ್ನು ಕರೆಸಿಕೊಳ್ಳುವ ಯೋಜನೆ ಹೊಂದಿದ್ದಾರೆ. ಜಯಣ್ಣ-ಭೋಗೇಂದ್ರ ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ಪುನೀತ್ ರಾಜಕುಮಾರ್ ನಟಿಸುತ್ತಿದ್ದು ಚಿತ್ರದ ಬಗ್ಗೆ ಈಗಾಗಲೇ ಸಾಕಷ್ಟು ನಿರೀಕ್ಷೆಗಳು ಹುಟ್ಟಿಕೊಂಡಿವೆ.

ಚಿತ್ರದ ಬಗ್ಗೆ ಹೀಗೆ ನಿರೀಕ್ಷೆ ಹುಟ್ಟಿಕೊಳ್ಳಲು ಒಂದು ಕಾರಣ ಪುನೀತ್ ರಾಜಕುಮಾರ್ ನಟಿಸುತ್ತಿರುವುದು, ಎರಡನೆಯ ಕಾರಣ ಜಯಣ್ಣ-ಭೋಗೇಂದ್ರ ಇದನ್ನು ನಿರ್ಮಿಸುತ್ತಿರುವುದು.





ಸಪನೋಂಕಿ ರಾಣಿ
ಸೃಜನ್ ಲೋಕೇಶ್, ಐಶ್ವರ್ಯಾ

ಯಶ್-ರಾಧಿಕಾ ಜೋಡಿ ಅಭಿನಯದ 'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ' ಚಿತ್ರವನ್ನು ನಿರ್ಮಿಸಿ ಭರ್ಜರಿ ಲಾಭ ಪಡೆಯುತ್ತಿರುವ ಈ ನಿರ್ಮಾಪಕದ್ವಯರು ಬೇಸಿಕಲಿ ವಿತರಕರಾಗಿರುವುದರಿಂದ ಹೇಗಾದರೂ ಮಾಡಿ ತಮ್ಮ ಚಿತ್ರವನ್ನು ಥಿಯೇಟರುಗಳಲ್ಲಿ ಗಟ್ಟಿಯಾಗಿ ನಿಲ್ಲಿಸಿಬಿಡುತ್ತಾರೆ ಅನ್ನುವ ಮಾತು ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಇನ್ನು ಪುನೀತ್ ತರಹದ ನಟನನ್ನು ಹಾಕಿಕೊಂಡು ಸಿನಿಮಾ ಮಾಡಿದ ಮೇಲೆ 'ರಣವಿಕ್ರಮ'ನನ್ನು ನಿಲ್ಲಿಸದೆ ಇರುತ್ತಾರೆಯೇ? ಅನ್ನುವ ಮಾತೂ ಕೇಳಿಬರುತ್ತಿದೆ. ಇಷ್ಟಕ್ಕೂ ಇದೇ ಜಯಣ್ಣ ಭೋಗೇಂದ್ರ ಜೋಡಿ ಪುನೀತ್ ನಟಿಸಿದ್ದ 'ಪರಮಾತ್ಮ' ಎನ್ನುವ ತಲೆ ಕೊರೆಯುವ ಚಿತ್ರವನ್ನು ಮಾಡಿದ್ದರು ಎಂಬುದನ್ನೂ ಮರೆಯಬಾರದು.

ವಲ್ಲಭಕ್ಕೆ ಚಾಲನೆ

ಲವ್ ವಿತ್ ಆಕ್ಷನ್ ಸನ್ನಿವೇಶಗಳಿರುವ ಚಿತ್ರಗಳು ಕನ್ನಡದಲ್ಲಿ ಸಾಕಷ್ಟು ಬಂದಿವೆ. ಈಗಲೂ ಬರುತ್ತಿವೆ. ಮುಂದೆಯೂ ಬರುತ್ತವೆ. ಇದನ್ನೇ ಸಿದ್ಧಸೂತ್ರ ಅನ್ನುವುದು. ತೀರಾ ಪ್ರಯೋಗಾತ್ಮಕವಾಗಿ ಸಿನಿಮಾ ಮಾಡಲು ಹೋಗಿ ಹೆಚ್ಚುಕಡಿಮೆಯಾಗಿ ಕೈಸುಟ್ಟುಕೊಳ್ಳುವುದು ಎಷ್ಟು ಅಪಾಯಕಾರಿಯೋ, ತೀರಾ ಸಾಧಾರಣ ಸಬ್ಜೆಕ್ಟ್ ಇಟ್ಟುಕೊಂಡು ಸಿನಿಮಾ ಮಾಡಿ ಗೆಲ್ಲುವುದೂ ಅಷ್ಟೇ ಕಷ್ಟ. ಈ ವರ್ಷದ ಸೂಪರ್ ಹಿಟ್ ಸಿನಿಮಾ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಕತೆಯ ವಿಷಯಕ್ಕೆ ಬಂದರೆ ಅದು ಅಂತಹ ಅದ್ಭುತವಾದ ಕತೆಯೇನೂ ಅಲ್ಲ, ಆದರೂ ಆ ಚಿತ್ರ ಕಮರ್ಷಿಯಲ್ ಹಿಟ್ ಅನ್ನಿಸಿಕೊಂಡಿದೆ.

ನಾಲ್ಕೈದು ಹಾಡು, ಎರಡೋ ಮೂರೋ ಫೈಟು, ಹೀರೋಗೆ ಒಂದಿಷ್ಟು ಬಿಲ್ಡಪ್, ಒಂದಿಷ್ಟು ಪಂಚಿಂಗ್ ಡೈಲಾಗ್ಸ್ ಜೊತೆಗೆ ನಾಯಕಿಯನ್ನು ಮತ್ತು ಹಾಡುಗಳನ್ನು ಸಕತ್ತಾಗಿ ತೋರಿಸಿಬಿಟ್ಟರೆ ಸಿನಿಮಾ ಹಿಟ್ ಆಗುತ್ತದೆ ಅನ್ನುವ ತೀರ್ಮಾನಕ್ಕೆ ಬಂದಿರುವವರೇ ಗಾಂಧಿನಗರದಲ್ಲಿ ಹೆಚ್ಚು. ಇಂಥವರಿಗೆ ಗಂಭೀರವಾದ ಕಥೆ, ಚಿತ್ರಕತೆ, ಪ್ರಯೋಗ, ಮುರಿದು ಕಟ್ಟುವ ತಾಕತ್ತು ಮುಂತಾದವು ಬೇಕಿಲ್ಲ. ಹಾಗಂತ ಇಂಥ ಐಡಿಯಾಗಳನ್ನು ಇಟ್ಟುಕೊಂಡು ಸಿನಿಮಾ ಮಾಡಿ ಗೆದ್ದವರೂ ಇದ್ದಾರೆ. ಇಂಥದೊಂದು ಗಾಂಧಿನಗರದ ಸಿದ್ಧಸೂತ್ರಗಳನ್ನು ಇಟ್ಟುಕೊಂಡು 'ವಲ್ಲಭ' ಎಂಬ ಚಿತ್ರ ತಯಾರಾಗಲು ಚಿತ್ರತಂಡವೊಂದು ಮುಂದಾಗುತ್ತಿದೆ.

ಈ ಚಿತ್ರದ ನಿರ್ದೇಶಕ ಎಸ್.ಶೇಖರ್ ಹೇಳುವಂತೆ ಈ ಚಿತ್ರದಲ್ಲಿ ಲವ್ ಮತ್ತು ಆಕ್ಷನ್ ಇದೆ. ಹಳ್ಳಿಯಿಂದ ನಗರಕ್ಕೆ ಬಂದು ಪಟ್ಟಣದ ಜೀವನಶೈಲಿಗೆ ಹೊಂದಿಕೊಳ್ಳಲು ಯತ್ನಿಸುವ ನಾಯಕನ ಬದುಕಿನಲ್ಲಿ ನಾಯಕಿ ಹೇಗೆ ಪ್ರವೇಶಿಸುತ್ತಾಳೆ, ಲವ್ ಹೇಗಾಗುತ್ತೆ ಹೇಗೆ ಫೈಟುಗಳು ಬರುತ್ತವೆ ಅನ್ನೋದೇ ಚಿತ್ರದ ಕಥೆಯ ಎಳೆಯಂತೆ. ಅಂದಹಾಗೆ ವಿಜಯಕೃಷ್ಣ ಎನ್ನುವವರು ಈ ಚಿತ್ರಕ್ಕೆ ಸಂಗೀತ ನೀಡುತ್ತಿದ್ದು ಚಿತ್ರದಲ್ಲಿ ಒಟ್ಟು ಐದು ಹಾಡುಗಳಿವೆಯಂತೆ. ಚಿತ್ರದ ಹೀರೋ ಮಾಗಡಿ ಮೂಲದ ಸಾಮ್ರಾಟ್ ಗೌಡ ಈಗಾಗಲೇ ನಾಟಕಗಳಲ್ಲಿ ನಟಿಸಿರುವುದರ ಜೊತೆಗೆ ಅಭಿನಯ, ನೃತ್ಯ ಮುಂತಾದವುಗಳಲ್ಲಿ ತರಬೇತಿ ಪಡೆದಿದ್ದಾರಂತೆ. ಇನ್ನು ಕಳೆದ ಐದು ವರ್ಷಗಳಿಂದ ಉದಯ ಟಿವಿಯಲ್ಲಿ ವಾರ್ತೆ ಓದುತ್ತಿದ್ದ ರಜನಿ ಈ ಚಿತ್ರದ ಹೀರೋಯಿನ್. ಇದೇ ಮೊದಲಬಾರಿಗೆ ಹೀರೋಯಿನ್ನಾಗಿ ನಟಿಸುತ್ತಿರುವ ರಜನಿಗೆ ಈ ಚಿತ್ರದ ಸ್ಕ್ರಿಪ್ಟ್ ಇಷ್ಟವಾಗಿದೆಯಂತೆ. ಅಪಾರ ಸ್ಪರ್ಧೆ ಇರುವ ಇವತ್ತಿನ ಚಿತ್ರರಂಗದಲ್ಲಿ ಅಮಾಯಕರಂತೆ ಕಾಣುವ ನಿರ್ದೇಶಕ ಎಸ್.ಶೇಖರ್ ನಿಲ್ಲಬೇಕಿರುವುದೇ ಸವಾಲು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com